
ವಾರ್ಷಿಕ ಚಂದಾ ರೂ.25/-

ಮಾಸಿಕ

# ಜನಪದ

ಸಂಪುಟ-05 • ಸಂಚಿಕೆ-10 • ಜುಲೈ 2022



# ಅಂತಾರಾಷ್ಟ್ರೀಯ ಯೋಗ ದಿನಾಚರಣೆ

Downloaded From:www.kpscvaani.com



ಜೂನ್ 13 ರಂದು ಬೆಂಗಳೂರು ಭೇಟಿಗಾಗಿ ಎಚ್ ಎ ಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದ ರಾಷ್ಟ್ರಪತಿ ರಮಾನಾಥ ಕೋವಿಂದ್ ಅವರಿಗೆ ಮುಖ್ಯಮಂತ್ರಿ ಅವರು ಪುಸ್ತಕ ನೀಡುವ ಮೂಲಕ ಅವರನ್ನು ಬರಮಾಡಿಕೊಂಡರು. ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರೂ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಜೂನ್ 20 ರಂದು  ಎರಡು ದಿನಗಳ ರಾಜ್ಯ ಭೇಟಿಗಾಗಿ ಆಗಮಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಯಲಹಂಕ ವಾಯು ಪಡೆ ವಿಮಾನ ನಿಲ್ದಾಣದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬರಮಾಡಿಕೊಂಡರು

Downloaded From:www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-05 • ಸಂಚಿಕೆ-10 • ಜುಲೈ 2022






**06** ರಾಜ್ಯಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಭೇಟಿ
• ಬಿ. ಜಿ. ಪೂರ್ಣಿಮ

**14** NO YOGA ! NO LIFE ! KNOW YOGA !! KNOW LIFE !!
• ಡಿ. ಪಿ. ಮುರಳೀಧರ್

**18** ಬಂಡವಾಳ ಹೂಡಿಕೆ ಆಕರ್ಷಿಸುವಲ್ಲಿ ಮುಂಚೂಣಿ ಸಾಧಿಸಿದ ರಾಜ್ಯ
• ಹೆಚ್.ಬಿ.ಗುರುಲಿಂಗಸ್ವಾಮಿ

**21** ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾಶರ್ಮ

**22** ಅಮೃತ ಸರೋವರ ಯೋಜನೆಯಡಿ ರಾಯಚೂರು ಜಿಲ್ಲೆಯ 75 ಕೆರೆಗಳ ಅಭಿವೃದ್ಧಿ
• ರಮೇಶ ಗೌಡೂರು





**24** ಅಭಿವೃದ್ಧಿಯಿಂದ ಕಂಗೊಳಿಸುತ್ತಿರುವ ಕಾಳೇನಹಳ್ಳಿ ಅಗ್ರಹಾರದ ಕೆರೆ
• ಕೆ. ಎಸ್. ರಾಜಮನ್ನಾರ್

**28** ಮನೆ ಬಾಗಿಲಿಗೆ ಕೌಶಲ್ಯ ಶಿಕ್ಷಣ : ಸಂಚಾರಿ ಕೌಶಲ್ಯ ರಥಕ್ಕೆ ಚಾಲನೆ
• ಡಾ. ಪಿ.ವಿ. ವರಪ್ರಸಾದ್ ರಾವ್

**31** ಮಾತುಮಂಥನ : ನೀರಿಗೆ ಮೊದಲು ಗೌರವ ಕೊಡಿ: ವಿಜ್ಞಾನಿ, ಮಳೆ ನೀರು ತಜ್ಞ ಎ.ಆರ್. ಶಿವಕುಮಾರ್
• ಮಂಜುನಾಥ್ ಚಾಂದ್

**35** ವಿದೇಶಿ ಉದ್ಯೋಗಾಕಾಂಕ್ಷಿಗಳಿಗೆ ಆಶಾಕಿರಣವಾಗಿರುವ ಐಎಂಸಿ-ಕೆ
• ಆರ್.ರೂಪಕಲಾ

**37** ಮಹಿಳೆಯರ ಮುಂಚೂಣಿಯಲ್ಲಿ ಯಶಸ್ವಿಯಾದ ಅಂಕೋಲ ಉಪ್ಪಿನ ಸತ್ಯಾಗ್ರಹ
• ಎನ್. ಜಗನ್ನಾಥ ಪ್ರಕಾಶ್

**39** 'ಹಸಿರುಗ್ರಾಮ' ಯೋಜನೆಯಡಿ ಮಲೆನಾಡಿಗೆ ಮತ್ತಷ್ಟು ಹಸಿರು ಹೊದಿಕೆ
• ಬಿ. ಅಬ್ದುಲ್ ಖಾದರ್ ಶಾ

**43** ನಿಟ್ಟೆಯಲ್ಲಿ ಗ್ರಾಮೀಣ ಭಾರತದ ಏಕೈಕ ಎಂಆರ್‌ಎಫ್ ಕೇಂದ್ರ
• ಸುಚಿತ್ರಾ

**45** 'ಸಿಗಂಧಿನಿ' ಮೆಣಸಿನ ತಳಿ ಉಳಿಸಿ ಬೆಳೆಸುತ್ತಿರುವ ಕೃಷಿಕ
• ಜಿ. ಎಸ್. ಹೆಗಡೆ





**47** ಮಲೆನಾಡ ಕಾನನದಲ್ಲಿ ಮನಮೋಹಕ ಜಲಪಾತಗಳು
• ಗಣಪತಿ ಹಾಸ್ಪುರ

**50** ಪದಬಂಧ-32



**ಪ್ರಧಾನ ಸಂಪಾದಕರು**
ಡಾ|| ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

**ಉಪ ಸಂಪಾದಕರು**
ಬಿ. ಜಿ. ಪೂರ್ಣಿಮ

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ,
ಬನಶಂಕರಿ 1ನೇ ಹಂತ, ಬೆಂಗಳೂರು–50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

## ನಿಮ್ಮ ಅನಿಸಿಕೆ

ಜೂನ್ ಸಂಚಿಕೆಯ ವಾರ್ತಾ ಜನಪದ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಬೆಂಗಳೂರು ತಂತ್ರಜ್ಞಾನ ಶೃಂಗ ಸಮಾವೇಶಕ್ಕೆ ಸರ್ಕಾರದಿಂದ ಸಕಲ ಸಿದ್ಧತೆ' ಲೇಖನ ಓದಿ ಅತೀವ ಸಂತೋಷವಾಯಿತು. ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಈ ಶೃಂಗ ಸಮಾವೇಶವು ದಾರಿಯಾಗಬಹುದು.

ಇರುವ ಜಾಗದಿಂದಲೇ ಕೆಲಸವನ್ನು ಉತ್ತೇಜಿಸಲಾಗುವುದೆಂದು ಮುಖ್ಯಮಂತ್ರಿ ಅವರು ತಿಳಿಸಿರುವುದು ಸಂತಸದ ಸಂಗತಿ. ಕಾಲಕ್ಕೆ ತಕ್ಕಂತಹ ಯೋಜನೆಗಳನ್ನು ಸರ್ಕಾರವು ಹಮ್ಮಿಕೊಳ್ಳುತ್ತಿದೆ. ಅದಲ್ಲದೆ ಹೋದ ಹಣಕಾಸು ವರ್ಷದಲ್ಲಿ ದೇಶಕ್ಕೆ ಹರಿದು ಬಂದಿರುವ ಒಟ್ಟು ವಿದೇಶಿ ಹೂಡಿಕೆಯಲ್ಲಿ ಶೇ 40 ರಷ್ಟು ಪಾಲು ರಾಜ್ಯದಲ್ಲೇ ಹೂಡಿಕೆಯಾಗಿರುವುದು ಹೆಮ್ಮೆಯ ವಿಚಾರವಾಗಿದೆ. ಈ ಹೂಡಿಕೆಗಳಿಂದಾಗಿ ಮುಂದಿನ ದಿನಗಳಲ್ಲಿ ಉದ್ಯೋಗಕ್ಕೆ ರಾಜ್ಯದಲ್ಲಿ ಹೆಚ್ಚು ಹೆಚ್ಚು ಅವಕಾಶಗಳು ಸಿಗಲಿದೆ.

**–ಸಿ.ವೆಂಕಟೇಶ್ ನಾಯ್ಡು, ಕೋಲಾರ**

* * *

ಕಾಶ್ಮೀರದಲ್ಲಿ ಮಾತ್ರ ಬೆಳೆಯಬಹುದಾದ ಸೇಬನ್ನು ನಮ್ಮ ತುಮಕೂರು ಜಿಲ್ಲೆಯಲ್ಲೇ ಬೆಳೆಯುತ್ತಿರುವ ವಿಚಾರ ತಿಳಿದು ಆಶ್ಚರ್ಯವಾಯಿತು. ತಮ್ಮ ಜೂನ್ ಪತ್ರಿಕೆಯಲ್ಲಿ ಡಿ.ಪಿ.ಮುರಳೀಧರ್ ಅವರು ಶಿರಾ ತಾಲ್ಲೂಕಿನ ಯಾದಲಡಕು ಗ್ರಾಮದಲ್ಲಿ ಪ್ರಗತಿಪರ ರೈತ ಕಾರ್ತಿವೀರ ಅವರು ಪ್ರಾಯೋಗಿಕವಾಗಿ ಬೆಳೆಯುತ್ತಿರುವ ಸೇಬು ಹಣ್ಣಿನ ಬೆಳೆಯ ಕುರಿತು ಬೆಳಕು ಚೆಲ್ಲುವ ಮೂಲಕ ಉಪಯುಕ್ತ ಮಾಹಿತಿಯನ್ನು ಒದಗಿಸಿದ್ದಾರೆ.

ಜೌಗು ಪ್ರದೇಶದಲ್ಲಿ ಸೇಬು ಬೆಳೆಯಲಾಗುತ್ತಿರುವುದು ಕುತೂಹಲಕರ ವಿಚಾರವಾಗಿದೆ. ನಾನೂ ಕೂಡ ಕೃಷಿಕನಾಗಿರುವುದರಿಂದ ಈತನ ಜಮೀನಿಗೆ ಭೇಟಿ ನೀಡಿ ಸೇಬು ಬೆಳೆಯ ಕುರಿತು ಮಾಹಿತಿ ಪಡೆಯಬೇಕೆನಿಸಿದೆ. ಲೇಖನದಲ್ಲಿ ಈ ಪ್ರಯೋಗ ಶೀಲ ಪ್ರಗತಿಪರ ರೈತನ ಸಂಪರ್ಕವನ್ನು ಒದಗಿಸಿದ್ದರೆ ಒಳಿತಿತ್ತು. ಆಶ್ಚರ್ಯಕರ ಮಾಹಿತಿಯನ್ನು ಒದಗಿಸಿರುವುದಕ್ಕೆ ಧನ್ಯವಾದಗಳು.

**–ಪಿ. ಆರ್. ಬಸವರಾಜು, ತುಮಕೂರು**

* * *

ಜನಸಂಖ್ಯೆಯ ಏರುಗತಿಯಿಂದ ಪರಿಸರ ಕೂಡ ಅದೇ ಏರುಗತಿಯಲ್ಲಿ ನಶಿಸಿಹೋಗುತ್ತಿದೆ. ಪರಿಸರ ನಾಶವಾದರೆ ನಾವು ಕೂಡ ನಾಶವಾಗಲಿದ್ದೇವೆ ಎಂಬುದನ್ನು ಎಲ್ಲರೂ ಮರೆತಿದ್ದಾರೆ ಎನಿಸುತ್ತದೆ. ಆದರೆ ರಾಯಚೂರಿನ ಹಸಿರ ಯೋಗಿ ಈರಣ್ಣ ಕೋಸಗಿ ಅವರು ಒಬ್ಬರೇ ರಾಯಚೂರನ್ನು ಮಲೆನಾಡಿನ ಪರಿಸರವನ್ನಾಗಿಸುವ ನಿಟ್ಟಿನಲ್ಲಿ ಸಸಿಗಳನ್ನು ನೆಟ್ಟು ಪೋಷಣೆ ಮಾಡುತ್ತಿರುವುದು




ಪ್ರಶಂಸನೀಯವಾದುದು. ಈರಣ್ಣ ಅವರು ತಮ್ಮ ದುಡಿಮೆಯ ಹಣದಲ್ಲೇ ಹಸಿರು ಬೆಳೆಸಲು ಇಷ್ಟೆಲ್ಲಾ ಪ್ರಯತ್ನಿಸುತ್ತಿರುವುದನ್ನು ತಿಳಿದು ಹೆಮ್ಮೆ ಎನಿಸಿತು.

ಆದರೆ ಬಹಳಷ್ಟು ಸೌಲಭ್ಯಗಳನ್ನು ಹೊಂದಿರುವ ನಾವೆಲ್ಲಾ ಪರಿಸರ ಸಂರಕ್ಷಣೆಗೆ ಏನು ಮಾಡುತ್ತಿದ್ದೇವೆ ಎನಿಸಿತು. ನಮ್ಮ ಕೈಲಿ ಮಾಡಲಾಗದಿದ್ದರೆ ಕನಿಷ್ಠ ಈರಣ್ಣ ಅವರ ಈ ಕಾರ್ಯಕ್ಕೆ ನಮ್ಮ ಕೈಲಾದಷ್ಟು ಸಸಿಗಳನ್ನು ಕೊಡಿಸಬಹುದು. ಎಲ್ಲರೂ ಅವರ ಈ ಕಾರ್ಯಕ್ಕೆ ಕೈಜೋಡಿಸಿದರೆ ರಾಯಚೂರನ್ನು ಮಲೆನಾಡನ್ನಾಗಿಸುವ ಈರಣ್ಣ ಅವರ ಕನಸು ಅತ್ಯಂತ ಶೀಘ್ರದಲ್ಲೇ ನನಸಾಗಲಿದೆ. ಪರಿಸರ ಕಾರ್ಯದಲ್ಲಿ ಕರ್ಮ ಯೋಗಿಯಂತೆ ಪರಿಸರ ಸಂರಕ್ಷಣೆ ನಡೆಸಿರುವ ಇವರ ಸಾಧನೆಯನ್ನು ಪರಿಚಯಿಸಿದ್ದು ಪರಿಸರ ದಿನಾಚರಣೆಗೆ ಸೂಕ್ತವಾಗಿತ್ತು.

**–ಹೆಚ್. ಎಂ. ಸಂಗಮೇಶ, ಹೊಸಪೇಟೆ**

* * *

ಈಗಿನ ಕಾಲದಲ್ಲಿ ನಗರದಲ್ಲೇ ಕೆಲಸಮಾಡಬೇಕು ಎಂದು ಆಶಿಸುವ ನಮ್ಮ ಯುವ ಜನರ ಮಧ್ಯೆ ತಾನು ಇರುವ ಜಾಗದಲ್ಲೇ ಉದ್ದಿಮೆಯನ್ನು ಪ್ರಾರಂಭಿಸುವ ಮೂಲಕ ಸ್ವಾವಲಂಬಿ ಜೀವನವನ್ನು ನಡೆಸುವ ಜೊತೆಗೆ ನಾಲ್ಕಾರು ಜನರಿಗೆ ಉದ್ಯೋಗವನ್ನು ನೀಡುತ್ತಿರುವ ಸೀಮಾ ವಿವೇಕ ಹೆಗಡೆ ಅವರು ಇತರರಿಗೆ ಆದರ್ಶವಾಗಿದ್ದಾರೆ. ಜೂನ್ ಸಂಚಿಕೆಯ ವಾರ್ತಾ ಜನಪದದಲ್ಲಿ ಪ್ರಕಟವಾಗಿರುವ ಇವರ ಸ್ವಾವಲಂಬಿ ಉದ್ದಿಮೆ ಕುರಿತ ಲೇಖನ ಓದಿ ತುಂಬಾ ಸಂತಸವಾಯಿತು. ಸ್ಥಳೀಯವಾಗಿ ಸಿಗುವ ವಸ್ತುಗಳಿಂದಲೇ ಪರಿಸರ ಸ್ನೇಹಿ ಉದ್ಯಮವನ್ನು ನಡೆಸುವ ಮೂಲಕ ಪರಿಸರಕ್ಕೂ ಕೊಡುಗೆ ನೀಡುತ್ತಿದ್ದಾರೆ.

**–ಎಂ. ಎನ್. ಮೀನಾಕ್ಷಿ, ಶ್ರೀರಂಗಪಟ್ಟಣ**

ಜೂನ್ ಸಂಚಿಕೆಯ ವಾರ್ತಾ ಜನಪದದಲ್ಲಿ ಪ್ರಕಟವಾಗಿರುವ 'ಅಂಧರು ಕೆತ್ತಿದ ಸುಂದರ ರಥ' ಲೇಖನ ತುಂಬಾ ಸ್ಫೂರ್ತಿದಾಯಕವಾಗಿತ್ತು. ಕಣ್ಣಿದ್ದು, ಕೈಕಾಲು ಗಟ್ಟಿ ಇರುವವರೇ ಭಿಕ್ಷೆ ಬೇಡುವುದನ್ನು ನೋಡುವಾಗ ನಿಜಕ್ಕೂ ಇವರ ಆತ್ಮಸ್ಥೈರ್ಯವನ್ನು ಮೆಚ್ಚಲೇಬೇಕು. ಇಂತಹವರಿಗೆ ಇನ್ನೂ ಹೆಚ್ಚಿನ ಅವಕಾಶಗಳನ್ನು ಒದಗಿಸುವ ಮೂಲಕ ಅವರ ಆತ್ಮಸ್ಥೈರ್ಯಕ್ಕೆ ಬೆಂಬಲ ನೀಡಬೇಕು.

**–ಜ್ಞಾನೇಶ್, ಕನಕಗಿರಿ**

'ವಾರ್ತಾ ಜನಪದ' ಮಾಸಿಕ ಈಗ **www.kanaja.inನಲ್ಲಿ ಲಭ್ಯ**

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ಜೂನ್ 20 ಮತ್ತು 21 ರಂದು ರಾಜ್ಯದಲ್ಲಿ ಸಂಭ್ರಮ ಮನೆ ಮಾಡಿತ್ತು. ಅದಕ್ಕೆ ಕಾರಣ, ನಮ್ಮ ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಗಮಿಸಿದ್ದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವ ಸರ್ಕಾರದ ರಚನೆಯ ನಂತರ ಇದೇ ಮೊದಲ ಬಾರಿಗೆ ಪ್ರಧಾನಿ ಅವರು ರಾಜ್ಯಕ್ಕೆ ಭೇಟಿ ನೀಡಿದುದಕ್ಕೆ ಸರ್ಕಾರವೂ ಅತ್ಯಂತ ಉತ್ಸುಕವಾಗಿತ್ತು.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಆಯೋಜಿಸಲಾಗಿದ್ದ 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳುವುದು ಪ್ರಧಾನಿಯವರ ಪ್ರಮುಖ ಕಾರ್ಯಕ್ರಮವಾಗಿತ್ತು. ಈ ಕಾರ್ಯಕ್ರಮದ ಜೊತೆಗೆ ಅವರು ಬೆಂಗಳೂರು ಮತ್ತು ಮೈಸೂರಿನಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯನ್ನು ನೆರವೇರಿಸಿದರು.

ರಾಜ್ಯದಲ್ಲಿ 33 ಸಾವಿರ ಕೋಟಿ ರೂಗಳ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ್ದಾರೆ. ಇದು ಮುಂದಿನ ದಿನಗಳಲ್ಲಿ ರಾಜ್ಯದ ಅಭಿವೃದ್ಧಿಗೆ ಅತ್ಯಂತ ಪೂರಕವಾಗಲಿದೆ. ಬೆಳೆಯುತ್ತಿರುವ ಬೆಂಗಳೂರು ನಗರ ಸಂಚಾರ ದಟ್ಟಣೆಗೆ ಪರ್ಯಾಯ ಒದಗಿಸುವ ಸಲುವಾಗಿ ಬೆಂಗಳೂರು ನಗರದ ನಾಲ್ಕು ದಿಕ್ಕುಗಳಿಗೆ ಸಂಪರ್ಕ ಕಲ್ಪಿಸುವಂತಹ ಉಪನಗರ ರೈಲು ಯೋಜನೆಯನ್ನು ತರಬೇಕೆಂದು ಸತತ ನಾಲ್ಕು ದಶಕಗಳಿಂದ ಚರ್ಚೆ ಮಾಡಲಾಗುತ್ತಿತ್ತು. ಆದರೆ ಪ್ರಧಾನಿಗಳು ಬೆಂಗಳೂರು ನಗರದ ಜನರ ಈ ಬಹುದಿನಗಳ ಕನಸು ನನಸಾಗಿಸುವ ಕಾಲವನ್ನು ಸನ್ನಿಹಿತವಾಗಿಸಿದ್ದಾರೆ. ಅವರು ಈ ಭೇಟಿ ವೇಳೆ ರೂ. 15,767 ಕೋಟಿ ವೆಚ್ಚದಲ್ಲಿ ಬೆಂಗಳೂರು ಉಪನಗರ ರೈಲು ಯೋಜನೆಗೆ ಶಂಕುಸ್ಥಾಪನೆ ನೆರವೇರಿಸುವ ಜೊತೆಗೆ ಇನ್ನು 40 ತಿಂಗಳಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಭರವಸೆ ನೀಡಿದ್ದಾರೆ.

ಕೋವಿಡ್–19 ನಂತರ ಬಹಿರಂಗವಾಗಿ ಯೋಗ ದಿನಾಚರಣೆಯು ಅದರಲ್ಲೂ ನಮ್ಮ ರಾಜ್ಯದ ಮೈಸೂರಿನಲ್ಲಿ ಜರುಗಿದ್ದು ನಮ್ಮೆಲ್ಲರ ಸೌಭಾಗ್ಯವೆಂದರೆ ತಪ್ಪಾಗಲಾರದು. ಇಂತಹ ಐತಿಹಾಸಿಕ ಕಾರ್ಯಕ್ರಮ ಜರುಗುವಂತಾಗಲು ನಮ್ಮ ದೇಶದ ಪ್ರಧಾನಮಂತ್ರಿ ಮತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಯವರೇ ಕಾರಣಕರ್ತರು. ಮೈಸೂರಿನ ಜಗತ್ಪ್ರಸಿದ್ಧ ಅಂಬಾವಿಲಾಸ ಅರಮನೆ ಆವರಣದಲ್ಲಿ ಜೂನ್ 21 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ 15 ಸಾವಿರ ಮಂದಿ ಯೋಗ ಪ್ರದರ್ಶನ ಮಾಡಿದ್ದು ಇಡೀ ವಿಶ್ವವೇ ಮೈಸೂರಿನತ್ತ ನೋಡುವಂತಾಗಿತ್ತು.

ಕರ್ನಾಟಕ ರಾಜ್ಯದ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರವು ಸಂಪೂರ್ಣವಾಗಿ ಸಹಕಾರ ನೀಡಲಿದೆ ಎಂದು ಪ್ರಧಾನಿ ಅವರು ನಮ್ಮ ಮುಖ್ಯಮಂತ್ರಿಗಳಿಗೆ ಭರವಸೆ ನೀಡಿದ್ದಾರೆ. ಇದು ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರವು ಇನ್ನೂ ಹೆಚ್ಚಿನ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗಲಿದೆ.

ಪ್ರಧಾನಿ ಅವರು ಭಾಗವಹಿಸಿದ್ದ ಪ್ರತಿ ಕಾರ್ಯಕ್ರಮವನ್ನು ರಾಜ್ಯ ಸರ್ಕಾರವು ಅತ್ಯಂತ ವ್ಯವಸ್ಥಿತವಾಗಿ ಆಯೋಜನೆ ಮಾಡಿದ್ದರಿಂದ ಎಲ್ಲಿಯೂ ಲೋಪವಾಗದಂತೆ ಎಲ್ಲಾ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು.

ದಾವೋಸ್‌ನಲ್ಲಿ ಜರುಗಿದ ವಿಶ್ವ ಆರ್ಥಿಕ ಶೃಂಗಸಭೆಯಲ್ಲಿ ರಾಜ್ಯ ತಂಡದ ನೇತೃತ್ವ ವಹಿಸಿದ್ದ ಮುಖ್ಯಮಂತ್ರಿ ಅವರು ಐತಿಹಾಸಿಕ ಒಪ್ಪಂದಗಳಿಗೆ ಸಹಿ ಹಾಕಿದ್ದಾರೆ. ಆ ಮೂಲಕ ರಾಜ್ಯ ಸರ್ಕಾರವು 52,000 ಕೋಟಿ ರೂ ಬಂಡವಾಳ ಹೂಡಿಕೆಯನ್ನು ತರುವಲ್ಲಿ ಯಶಸ್ವಿಯಾಗಿದ್ದು, ಬಂಡವಾಳ ಹೂಡಿಕೆ ಆಕರ್ಷಿಸುವಲ್ಲಿ ದೇಶದಲ್ಲೇ ರಾಜ್ಯವು ಮುಂಚೂಣಿ ಪಡೆದಿರುವುದು ಹೆಮ್ಮೆ ಪಡುವ ವಿಚಾರವಾಗಿದೆ.

ಇನ್ನು ನಮ್ಮ ರಾಜ್ಯ ಸರ್ಕಾರದ 39ನೇ ಮುಖ್ಯ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿರುವ ವಂದಿತಾ ಶರ್ಮಾ ಅವರು ಅತ್ಯಂತ ಕ್ರಿಯಾಶೀಲ ಅಧಿಕಾರಿಯಾಗಿದ್ದಾರೆ. ತಮ್ಮ ಸೇವಾ ಅವಧಿಯಲ್ಲಿ ವಿವಿಧ ಪ್ರಮುಖ ಹುದ್ದೆಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿರುವುದರಿಂದ ಅತ್ಯಂತ ಮಹತ್ವವಾದ ಈ ಹುದ್ದೆಯನ್ನು ಅವರು ಅಚ್ಚುಕಟ್ಟಾಗಿ ನಿರ್ವಹಿಸಲಿದ್ದಾರೆ.

ಡಾ|| ಪಿ. ಎಸ್. ಹರ್ಷ, ಐಪಿಎಸ್
ಪ್ರಧಾನ ಸಂಪಾದಕರು

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ರಾಜ್ಯ ಭೇಟಿ ಸಂದರ್ಭದಲ್ಲಿ ಉದ್ಘಾಟನೆಯಾದ ಮತ್ತು ಶಂಕುಸ್ಥಾಪನೆಯಾದ ಅಭಿವೃದ್ಧಿ ಯೋಜನೆಗಳ ಸಂಕ್ಷಿಪ್ತ ಪರಿಚಯವನ್ನು ಈ ಲೇಖನದಲ್ಲಿ ಒದಗಿಸಲಾಗಿದೆ.





## ರಾಜ್ಯಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಭೇಟಿ:

# 33 ಸಾವಿರ ಕೋಟಿ ವೆಚ್ಚದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ

ಬಿ.ಜಿ.ಪೂರ್ಣಿಮ


Downloaded From:www.kpscvaani.com




ಭಾರತೀಯ ವಿಜ್ಞಾನ ಸಂಸ್ಥೆಯ ಕಾರ್ಯಕ್ರಮ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು ಕಳೆದ ಎಂಟು ವರ್ಷಗಳಿಂದ ಕೃಷಿ, ನೀರಾವರಿ, ಮೂಲಸೌಕರ್ಯ, ಆರ್ಥಿಕತೆ, ಶಿಕ್ಷಣ, ಮಹಿಳೆ ಮತ್ತು ಮಕ್ಕಳು, ವಾಣಿಜ್ಯೋದ್ಯಮ ಸೇರಿದಂತೆ ರಾಜ್ಯದ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗೆ ಸಾಕಷ್ಟು ಯೋಜನೆಗಳನ್ನು ನೀಡುತ್ತಾ ಬರುತ್ತಿರುವುದರಿಂದ ಎಲ್ಲಾ ಕ್ಷೇತ್ರದಲ್ಲೂ ಅಭಿವೃದ್ಧಿಯ ಕ್ರಾಂತಿಯಾಗುತ್ತಿದೆ ಎಂದರೆ ತಪ್ಪಾಗಲಾರದು.

ನರೇಂದ್ರ ಮೋದಿ ಅವರು ಇದೇ ಜೂನ್ 20 ಮತ್ತು 21 ರಂದು ನಮ್ಮ ರಾಜ್ಯಕ್ಕೆ ಎರಡು ದಿನಗಳ ಭೇಟಿಗೆ ಆಗಮಿಸಿದ್ದ ವೇಳೆ ಅಂದಾಜು ರೂ 33,000 ಕೋಟಿಗೂ ಅಧಿಕ ಮೊತ್ತದ 19 ಯೋಜನೆಗಳಿಗೆ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಮಾಡುವ ಮೂಲಕ ರಾಜ್ಯದ ಪ್ರಗತಿಗೆ ಹೊಸ ನಾಂದಿ ಹಾಡಿದ್ದಾರೆ. ಇದು ರಾಜ್ಯದಲ್ಲಿ ಮತ್ತೊಮ್ಮೆ ಅಭಿವೃದ್ಧಿ ಕ್ರಾಂತಿಗೆ ಕಾರಣವಾಗಲಿದೆ.

ರಾಜ್ಯ ಭೇಟಿಗಾಗಿ ಯಲಹಂಕ ವಾಯು ಪಡೆ ನಿಲ್ದಾಣಕ್ಕೆ ಆಗಮಿಸಿದ ಅವರನ್ನು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಗೌರವಪೂರ್ವಕವಾಗಿ ಬರಮಾಡಿಕೊಂಡರು. ಅವರು ಅಲ್ಲಿಂದಲೇ ಹೆಲಿಕಾಪ್ಟರ್ ಮೂಲಕ ಭಾರತೀಯ ವಿಜ್ಞಾನ ಸಂಸ್ಥೆಗೆ ಪ್ರಯಾಣ ಬೆಳೆಸಿದರು.

ಈ ಎರಡು ದಿನಗಳಲ್ಲಿ ಪ್ರಧಾನಿ ಮೋದಿ ಅವರು ಉದ್ಘಾಟನೆ ಮತ್ತು ಶಂಕುಸ್ಥಾಪನೆ ಮಾಡಿದ ಯೋಜನೆಗಳ ಸಂಕ್ಷಿಪ್ತ ಮಾಹಿತಿ ಹೀಗಿದೆ.

**ಭಾರತೀಯ ವಿಜ್ಞಾನ ಸಂಸ್ಥೆಯ ಕಾರ್ಯಕ್ರಮ:**

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಕ್ರಿಸ್ ಗೋಪಾಲಕೃಷ್ಣನ್ ಮತ್ತು ಸುಧಾ ಗೋಪಾಲಕೃಷ್ಣನ್ ತಮ್ಮ ಪ್ರತೀಕ್ಷಾ ಟ್ರಸ್ಟ್ ವತಿಯಿಂದ ದೇಣಿಗೆ ನೀಡಿರುವ ರೂ. 280 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಮೆದುಳು ಸಂಶೋಧನಾ ಕೇಂದ್ರವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟನೆ ಮಾಡಿದರು. ವಯೋ ಸಹಜ ಮೆದುಳು ಖಾಯಿಲೆಗೆ ಸಂಬಂಧಿಸಿದಂತೆ ಮತ್ತು ಮೆದುಳು ಹೇಗೆ ಕಾರ್ಯನಿರ್ವಹಣೆ ಮಾಡುತ್ತದೆ ಎಂಬುದರ ಕುರಿತು ಈ ಸಂಶೋಧನಾ ಕೇಂದ್ರದಲ್ಲಿ ಸಂಶೋಧನೆ ನಡೆಸಲಾಗುತ್ತದೆ. ಈ ಸಂಸ್ಥೆಯ ಆವರಣದಲ್ಲೇ ದಾನಿಗಳಾದ ಬಾಗ್ಚಿ ಮತ್ತು ಪಾರ್ಥಸಾರಥಿ ಕುಟುಂಬದವರು ದೇಣಿಗೆ ನೀಡಿರುವ ರೂ. 425 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲು ಉದೇಶಿಸಲಾಗಿರುವ 800 ಹಾಸಿಗೆಗಳ ಸಾಮರ್ಥ್ಯದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಈ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕ್ಯಾನ್ಸರ್, ಪ್ಲಾಸ್ಟಿಕ್ ಸರ್ಜರಿ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಉದ್ದೇಶಿಸಲಾಗಿದೆ.

ಮೆದುಳು ಸಂಶೋಧನಾ ಕೇಂದ್ರ ನಿರ್ಮಾಣಕ್ಕೆ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ದೇಣಿಗೆ ನೀಡಿದ ಕ್ರಿಸ್ ಗೋಪಾಲಕೃಷ್ಣನ್ ಮತ್ತು ಸುಧಾ ಗೋಪಾಲಕೃಷ್ಣನ್ ಹಾಗೂ ಬಾಗ್ಚಿ ಮತ್ತು ಪಾರ್ಥಸಾರಥಿ ಅವರ ಸೇವಾ ಮನೋಭಾವಕ್ಕೆ ಮೋದಿ ಅವರು ಅಭಿನಂದನೆ ಸಲ್ಲಿಸಿದರು.



**ನವೀನ್ ಪಾಲಕರನ್ನು ಭೇಟಿಯಾದ ಪ್ರಧಾನಿ:**

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆಯೂ ಯೂಕ್ರೇನ್ ಯುದ್ಧ ಭೂಮಿಯಲ್ಲಿ ಮರಣ ಹೊಂದಿದ ವೈದ್ಯ ವಿದ್ಯಾರ್ಥಿ ನವೀನ್ ತಂದೆ ಗ್ಯಾನಗೌಡರ್, ತಾಯಿ ವಿಜಯಲಕ್ಷ್ಮಿ ಹಾಗೂ ಸಹೋದರ ಹರ್ಷ ಅವರನ್ನು ಭೇಟಿ ಮಾಡಿ ಅವರಿಗೆ ಸಾಂತ್ವಾನ ಹೇಳಿದರು. ಅಂತಹ ದುಃಖದಲ್ಲೂ ಮಗನ ದೇಹವನ್ನು ವೈದ್ಯಕೀಯ ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ ನೀಡಿದುದಕ್ಕೆ ಪ್ರಧಾನಿ ಅವರು ಮೆಚ್ಚುಗೆ ಸೂಚಿಸಿದ್ದಾರೆ. ಅತ್ಯಂತ ಸಂದಿಗ್ಧ ಪರಿಸ್ಥಿತಿಯಲ್ಲೂ ತಮ್ಮ ಮಗನ ಪಾರ್ಥೀವ ಶರೀರವನ್ನು ತರಿಸಿಕೊಡುವ ಮೂಲಕ ತಮ್ಮ ಮಗನ ಅಂತಿಮ ದರ್ಶನ ಮಾಡಲು ಅವಕಾಶ ದೊರಕಿಸಿಕೊಟ್ಟಿದ್ದಕ್ಕೆ ನವೀನ್ ಪಾಲಕರು ಕೂಡ ಮೋದಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದರು.



Downloaded From:www.kpscvaani.com







ಡಾ. ಬಿ. ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಕ್ಯಾಂಪಸ್‌ನಲ್ಲಿ 150 ಐಟಿಐ ಗಳನ್ನು ಲೋಕಾರ್ಪಣೆ ಮಾಡಿದ ಸಂದರ್ಭ

**150 ಐಟಿಐಗಳ ಲೋಕಾರ್ಪಣೆ:**

ರಾಜ್ಯದಾದ್ಯಂತ ಯುವ ಜನರಿಗೆ ಹೆಚ್ಚಿನ ಉದ್ಯೋಗಾವಕಾಶವನ್ನು ಕಲ್ಪಿಸುವ ಸಲುವಾಗಿ ಟಾಟಾ ಸಮೂಹ ಸೇರಿದಂತೆ ವಿವಿಧ 20 ಕೈಗಾರಿಕಾ ಸಂಸ್ಥೆಗಳ ನೆರವಿನಲ್ಲಿ ರಾಜ್ಯ ಸರ್ಕಾರವು ರೂ. 4,736 ಕೋಟಿ ವೆಚ್ಚದಲ್ಲಿ ರಾಷ್ಟ್ರಮಟ್ಟದ ತಾಂತ್ರಿಕ ಕೇಂದ್ರಗಳನ್ನಾಗಿ ಉನ್ನತೀಕರಿಸಿರುವ 150 ಐಟಿಐಗಳನ್ನು ಪ್ರಧಾನಮಂತ್ರಿಗಳು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಕ್ಯಾಂಪಸ್‌ನಲ್ಲಿ ರಾಷ್ಟ್ರಕ್ಕೆ ಲೋಕಾರ್ಪಣೆ ಮಾಡಿದರು. ಪ್ರತಿ ವರ್ಷ ಅಂದಾಜು 1.2 ಲಕ್ಷ ವಿದ್ಯಾರ್ಥಿಗಳು ಈ ಕೇಂದ್ರಗಳಿಂದ ತರಬೇತಿ ಪಡೆಯಲಿದ್ದಾರೆ. ಐಟಿಐಗಳಲ್ಲಿ ತೇರ್ಗಡೆಯಾದವರಿಗೆ ಉದ್ಯೋಗಕ್ಕೆ ಬೇಕಾಗುವ ಕೌಶಲ್ಯ ತರಬೇತಿ ನೀಡಲಾಗುವ ಈ ಕೇಂದ್ರದ ಪ್ರಾತ್ಯಕ್ಷಿಕೆಯನ್ನು ಮೋದಿ ಅವರು ವೀಕ್ಷಿಸಿದರು.

**ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಕ್ಯಾಂಪಸ್ ಉದ್ಘಾಟನಾ ಕಾರ್ಯಕ್ರಮ:**

ರಾಜ್ಯ ಸರ್ಕಾರವು ಡಾ.ಬಿ.ಆರ್.ಅಂಬೇಡ್ಕರ್ ಅವರ 125 ನೇ ಜನ್ಮ ಶತಮಾನೋತ್ಸವದ ಅಂಗವಾಗಿ 2017 ರಲ್ಲಿ ಸುಮಾರು 43.35 ಎಕರೆ ಪ್ರದೇಶದಲ್ಲಿ ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ಈಗ ಈ ವಿಶ್ವವಿದ್ಯಾಲಯದಲ್ಲಿ ನೂತನವಾಗಿ ರೂ. 280 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ಕ್ಯಾಂಪಸ್ ಅನ್ನು ಪ್ರಧಾನಿ ಅವರು ಉದ್ಘಾಟನೆ ಮಾಡಿದರಲ್ಲದೆ, ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಿಸಲಾಗಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ 22 ಅಡಿ ಎತ್ತರದ ಕಂಚಿನ ಪುತ್ಥಳಿಯನ್ನು ಅನಾವರಣಗೊಳಿಸಿದರು.

ಈ ಸಂಸ್ಥೆಯಲ್ಲಿ ಅರ್ಥಶಾಸ್ತ್ರ ಮತ್ತು ಸಮಾಜ ವಿಜ್ಞಾನಗಳ ಅಧ್ಯಯನವು ಪ್ರಧಾನವಾಗಿ ನಡೆಯುತ್ತದೆ. ಇಲ್ಲಿ ಅಧ್ಯಯನ ನಡೆಸಿದ ಮೊದಲ ಬ್ಯಾಚ್ ವಿದ್ಯಾರ್ಥಿಗಳಲ್ಲಿ ಶೇ 80 ರಷ್ಟು ವಿದ್ಯಾರ್ಥಿಗಳಿಗೆ ಉದ್ಯೋಗ ಲಭಿಸಿದೆ. ಜಾಗತಿಕವಾಗಿ ಈ ವಿಶ್ವವಿದ್ಯಾಲಯವನ್ನು ಇನ್ನೂ ಉನ್ನತ ಸ್ಥಾನಕ್ಕೆ ಕೊಂಡ್ಯೊಯುವ ಗುರಿ ಹೊಂದಲಾಗಿರುವುದರಿಂದ ಮೊದಲ ಹಂತವಾಗಿ ನೂತನ ಕ್ಯಾಂಪಸ್ ಮೈದೆಳೆದಿದೆ. ಈ ಸಂದರ್ಭದಲ್ಲಿ ಪ್ರಧಾನಮಂತ್ರಿ ಅವರು ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳೊಂದಿಗೆ ಶೈಕ್ಷಣಿಕ ಕಾರ್ಯಕ್ರಮಗಳ ವಿಚಾರಗಳ ಕುರಿತು ಸಂವಾದ ನಡೆಸಿದರು.



ಡಾ. ಬಿ. ಆರ್. ಅಂಬೇಡ್ಕರ್ ಪ್ರತಿಮೆ ಅನಾವರಣ ಸಂದರ್ಭ



ಡಾ. ಬಿ. ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಕ್ಯಾಂಪಸ್ ಉದ್ಘಾಟನೆ



Downloaded From:www.kpscvaani.com



ಕೊಮ್ಮಘಟ್ಟದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನಾ ಸಮಾರಂಭ



ಕರ್ನಾಟಕದ ಇತಿಹಾಸದಲ್ಲೇ ಇಂದು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನವಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ಈ ಯೋಜನೆಗಳು ಅನುಷ್ಠಾನಕ್ಕೆ ಬಂದಲ್ಲಿ, ದೇಶೀಯ ಉತ್ಪನ್ನದ ಪ್ರಮಾಣ ಶೇಕಡಾ ಎರಡಷ್ಟು ಏರಿಕೆ ಆಗಲಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ದೇಶವನ್ನು 2047 ರ ಹೊತ್ತಿಗೆ ಜಗತ್ತಿನಲ್ಲಿಯೇ ಶ್ರೇಷ್ಠ ರಾಷ್ಟ್ರವಾಗಿಸುವ ಚಿಂತನೆ, ಕಾರ್ಯಸೂಚಿಗೆ ಗತಿಶಕ್ತಿ ನೀಡಿದ್ದಾರೆ. ನಗರ ಮತ್ತು ಗ್ರಾಮೀಣ ಭಾಗದ 48 ಲಕ್ಷ ಮನೆಗಳಿಗೆ ನಲ್ಲಿಗಳ ಮೂಲಕ ಕುಡಿಯುವ ನೀರು ಪೂರೈಸುವ ಜಲಜೀವನ ಮಿಷನ್‌ನ ಮನೆ ಮನೆಗೆ ಗಂಗೆ ಯೋಜನೆ ಅನುಷ್ಠಾನವಾಗುತ್ತಿದೆ. ಅಲ್ಲದೆ, 2024 ರ ವೇಳೆಗೆ ರಾಜ್ಯದ ಪ್ರತಿಯೊಂದು ಮನೆಗೆ ನಲ್ಲಿ ಸಂಪರ್ಕ ಸಾಧ್ಯವಾಗಲಿದೆ. ನವಭಾರತಕ್ಕಾಗಿ ನವ ಕರ್ನಾಟಕ ನಿರ್ಮಾಣಕ್ಕೆ ಇಂದು ಮುನ್ನುಡಿ ಬರೆಯಲಾಗಿದೆ.

ಈ ಬಾರಿಯ ವಿಶ್ವ ಯೋಗ ದಿನಾಚರಣೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿಗೆ ಆಗಮಿಸುವ ಮೂಲಕ ನಮ್ಮ ರಾಜ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಮಾಡಿದುದಕ್ಕೆ ಪ್ರಧಾನಿ ಅವರಿಗೆ ಅನಂತ ಧನ್ಯವಾದಗಳು.

–ಬಸವರಾಜ ಎಸ್ ಬೊಮ್ಮಾಯಿ,
ಮುಖ್ಯಮಂತ್ರಿಗಳು

**ಕೊಮ್ಮಘಟ್ಟದಲ್ಲಿ ವಿವಿಧ ರೈಲು ಯೋಜನೆಗಳಿಗೆ ಚಾಲನೆ:**

ಕೊಮ್ಮಘಟ್ಟದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹಲವು ರೈಲ್ವೆ ಯೋಜನೆಗಳಿಗೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ಮಾಡಿದರು. ರೂ 1,287 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ವಿದ್ಯುದೀಕರಣ ಕೊಂಕಣ್ ರೈಲು ಮಾರ್ಗವನ್ನು ಅವರು ಉದ್ಘಾಟನೆ ಮಾಡಿದರು. ಈ ಯೋಜನೆಯಿಂದ ಇಂಧನ ವೆಚ್ಚ ತಗ್ಗುವ ಜೊತೆಗೆ ಮಾಲಿನ್ಯ ನಿಯಂತ್ರಣವಾಗಲಿದೆ. ಹಾಗೆಯೇ ರೂ. 758 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ಅರಸೀಕೆರೆ–ತುಮಕೂರು ಜೋಡಿ ರೈಲು ಮಾರ್ಗ ಹಾಗೂ ಹೊಸ ರೈಲು ಸೇವೆಗಳು ಮತ್ತು ರೂ 1,104 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ಯಲಹಂಕ–ಪಿನುಕೊಂಡ ಜೋಡಿ ರೈಲು ಮಾರ್ಗಕ್ಕೆ ಚಾಲನೆ ನೀಡಿದರು. ಹಾಗೆಯೇ ರೂ.470 ಕೋಟಿ ವೆಚ್ಚದಲ್ಲಿ ಬೆಂಗಳೂರು ಕಂಟೋನ್‌ಮೆಂಟ್ ನಿಲ್ದಾಣ ಹಾಗೂ ರೂ. 400 ಕೋಟಿ ವೆಚ್ಚದಲ್ಲಿ ಯಶವಂತಪುರ ರೈಲು ನಿಲ್ದಾಣವನ್ನು ವಿಮಾನ ನಿಲ್ದಾಣದ ಮಾದರಿಯಲ್ಲಿ ಅತ್ಯಾಧುನಿಕ ಸೌಕರ್ಯಗಳಿರುವಂತೆ ಪುನರಾಭಿವೃದ್ಧಿ ಮಾಡುವ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

ಈಗಾಗಲೇ ವಿಮಾನ ನಿಲ್ದಾಣದ ಮಾದರಿಯಲ್ಲಿ ಬೆಂಗಳೂರಿನಲ್ಲಿ ನಿರ್ಮಾಣ ಮಾಡಲಾಗಿರುವ ದೇಶದಲ್ಲೇ ಪ್ರಪ್ರಥಮ ಹವಾನಿಯಂತ್ರಿತ ರೈಲು ನಿಲ್ದಾಣ ಎಂಬ ಖ್ಯಾತಿ ಪಡೆದಿರುವ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ಅನ್ನು ಪ್ರಧಾನಮಂತ್ರಿಗಳು ಅಧಿಕೃತವಾಗಿ ಲೋಕಾರ್ಪಣೆಗೊಳಿಸಿದರು. ಬೈಯಪ್ಪನಹಳ್ಳಿ ರೈಲು ನಿಲ್ದಾಣ ಮತ್ತು ಬಾಣಸವಾಡಿ ರೈಲು ನಿಲ್ದಾಣಗಳ ನಡುವೆ ರೂ. 314 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡಂತೆ ಈ ರೈಲು ನಿಲ್ದಾಣವನ್ನು ನಿರ್ಮಾಣ ಮಾಡಲಾಗಿದೆ. ಪ್ರಯಾಣಿಕರಿಗೆ ವಿಮಾನ ನಿಲ್ದಾಣಗಳಲ್ಲಿ ದೊರೆಯುವ ಸೇವೆಗಳಿಗೆ ಸರಿ ಸಮಾನವಾಗಿ ಇದೀಗ ಭಾರತೀಯ ರೈಲ್ವೆ ಕೂಡಾ ಸೌಲಭ್ಯಗಳನ್ನು ವಿಸ್ತರಿಸುತ್ತಿರುವುದಕ್ಕೆ ಈ ನಿಲ್ದಾಣವೇ ಸಾಕ್ಷಿಯಾಗಿದೆ.

ಅಭಿವೃದ್ಧಿಯಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರದ ಸಂಚಾರ ದಟ್ಟಣೆಯನ್ನು ಕಡಿಮೆ



Downloaded From:www.kpscvaani.com




*ಹೊಸ ರೈಲು ಸೇವೆಗಳಿಗೆ ಹಸಿರು ನಿಶಾನೆ ನೀಡಿದ ಸಂದರ್ಭ*



*ಕೇಂದ್ರ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ*

**ಸಾರ್ವಜನಿಕ ಸಭೆಯನ್ನುದ್ದೇಶಿಸಿ ಪ್ರಧಾನಿ ಮಾಡಿದ ಭಾಷಣದ ಸಂಕ್ಷಿಪ್ತ ಮಾಹಿತಿ:**

ಕೊಮ್ಮಘಟ್ಟದ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ನರೇಂದ್ರ ಮೋದಿ ಅವರು ಕಳೆದ ಎಂಟು ವರ್ಷಗಳಿಂದ ನನ್ನ ಮೇಲೆ ನೀವು ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸವು ನನಗೆ ದೇಶದ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ ನೀಡಿದೆ ಎಂದರು. ನಿಮಗಾಗಿ ನಾನು ಪ್ರತಿ ನಿಮಿಷವೂ ಕೆಲಸ ಮಾಡಲು ಬಯಸುತ್ತೇನೆ. ರಾಷ್ಟ್ರದಲ್ಲೇ ಬೆಂಗಳೂರು ದೇಶದ ಲಕ್ಷಾಂತರ ಯುವ ಜನರ ಕನಸುಗಳನ್ನು ಸಾಕಾರಗೊಳಿಸುವ ನಗರವಾಗಿ ಹೊರಹೊಮ್ಮಿದೆ. ಹಾಗಾಗಿ ಈ ನಗರದ ಸಾಮರ್ಥ್ಯವನ್ನು ಹೆಚ್ಚಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಅವಿರತವಾಗಿ ಶ್ರಮಿಸುತ್ತಿವೆ. ಕೇಂದ್ರ ಮತ್ತು ರಾಜ್ಯಗಳೆರಡರಲ್ಲೂ ಒಂದೇ ಸರ್ಕಾರವಿದ್ದಲ್ಲಿ ಮಾತ್ರ ಇಂತಹ ಅಭಿವೃದ್ಧಿ ಕಾರ್ಯಗಳು ಸುಲಭವಾಗಿ ಅನುಷ್ಠಾನಗೊಳ್ಳುತ್ತವೆ ಎಂದು ಅಭಿಪ್ರಾಯಪಟ್ಟರು.

ಮೈಸೂರಿನ ಮಹಾರಾಜ ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಮೈಸೂರಿನಲ್ಲಿ ಪ್ರವಾಸೋದ್ಯಮವನ್ನು ಇನ್ನಷ್ಟು ಉನ್ನತೀಕರಣಗೊಳಿಸುವುದಕ್ಕೆ ಕೇಂದ್ರ ಸರ್ಕಾರವು ನೆರವಾಗಲಿದೆ ಎಂದು ಭರವಸೆ ನೀಡಿದರು. 2014 ಕ್ಕೂ ಮೊದಲಿದ್ದ ಕೇಂದ್ರ ಸರ್ಕಾರ ರೈಲ್ವೆ ಬಜೆಟ್‌ನಲ್ಲಿ ಕರ್ನಾಟಕಕ್ಕೆ 800 ಕೋಟಿ ರೂ ನೀಡಿತ್ತು. ಈಗ ನಮ್ಮ ಸರ್ಕಾರ 7000 ಕೋಟಿ ರೂ ಮೀಸಲಿಟ್ಟಿದೆ ಎಂದರು. ಮೊದಲೆಲ್ಲಾ ಸರ್ಕಾರದ ಸೇವಾ/ಸೌಲಭ್ಯಗಳು ಫಲಾನುಭವಿಗಳಿಗೆ ಸೇರುವ ಮೊದಲೇ ಮಧ್ಯದಲ್ಲೇ ಸೋರಿಕೆಯಾಗುತ್ತಿತ್ತು. ಆದರೆ ನಮ್ಮ ಸರ್ಕಾರವು ಹಲವು ಜನಕಲ್ಯಾಣ ಯೋಜನೆಗಳ ಸೇವಾ/ಸೌಲಭ್ಯಗಳನ್ನು ಡಿಜಿಟಲೀಕರಣಗೊಳಿಸಿ, ಸೋರಿಕೆಯಾಗುವುದನ್ನು ತಡೆಹಿಡಿದಿದೆ ಎಂದರು.

ಕೆಲವು ತೀರ್ಮಾನಗಳು ಮತ್ತು ಸುಧಾರಣೆಗಳು ತಾತ್ಕಾಲಿಕವಾಗಿ ಅಹಿತಕರವಾಗಿರಬಹುದು. ಆದರೆ ಕಾಲಾನಂತರದಲ್ಲಿ ದೇಶವು ಅದರ ಲಾಭವನ್ನು ಪಡೆಯುತ್ತದೆ ಎಂದು ಮೋದಿ ಅವರು ಯುವ ಜನರಿಗೆ ಕಿವಿಮಾತು ಹೇಳಿದರು. ಸಮಾಜ ಸೇವೆ, ಅನ್ನದಾಸೋಹ ಹಾಗೂ ಅಕ್ಷರ ದಾಸೋಹಕ್ಕೆ ದಕ್ಷಿಣ ಭಾರತದ ಮಠಗಳು ವಿಶ್ವದಾದ್ಯಂತ ಪ್ರಖ್ಯಾತವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಭಿಪ್ರಾಯಪಟ್ಟರು.

ರಾಜ್ಯದ ಸಮಗ್ರ ಅಭಿವೃದ್ಧಿಗೆ ಜತೆಯಾಗಿ ಮುನ್ನಡೆಯೋಣ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಅವರಿಗೆ ಹೇಳಿದರು. ಇನ್ನು ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲಾ ಸಾರ್ವಜನಿಕ ಸಭೆಯ ಮೊದಲಿಗೆ ರಾಜ್ಯದ ಜನತೆಯನ್ನು ಉದ್ದೇಶಿಸಿ ಕನ್ನಡದಲ್ಲೇ ಮಾತನಾಡುವ ಮೂಲಕ ಕರುನಾಡ ಜನರ ಹೃದಯವನ್ನು ಸಂತಸಗೊಳಿಸಿದರು. ಅವರು ಕನ್ನಡದಲ್ಲಿ ಭಾಷಣ ಪ್ರಾರಂಭಿಸಿದಾಗ ಸಭೆಗಳಲ್ಲಿ ಕರತಾಡನದ ಸದ್ದು ಮುಗಿಲು ಮುಟ್ಟಿತ್ತು.

ಮಾಡಲು ಹಾಗೂ ಸಂಚಾರದ ಸಮಯವನ್ನು ಉಳಿತಾಯ ಮಾಡುವ ನಿಟ್ಟಿನಲ್ಲಿ ಬೆಂಗಳೂರು ನಗರದ ನಾಲ್ಕು ದಿಕ್ಕುಗಳಲ್ಲಿ ಇರುವ ಉಪನಗರಗಳಿಗೆ ಸಂಪರ್ಕ ಕಲ್ಪಿಸುವಂತಹ ಉಪನಗರ ರೈಲು ಯೋಜನೆ ನಿರ್ಮಾಣ ಮಾಡಲು ರೂ 15,767 ಕೋಟಿ ವೆಚ್ಚದ ಕಾಮಗಾರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶಂಕುಸ್ಥಾಪನೆ ನೆರವೇರಿಸಿದರು. ಸತತ 40 ವರ್ಷಗಳಿಂದ ಕೇವಲ ಕಡತದಲ್ಲೇ ಓಡಾಡುತ್ತಿದ್ದ ಈ ಯೋಜನೆಗೆ ಚಾಲನೆ ನೀಡಿರುವ ಮೋದಿ ಅವರು ಕೇವಲ 40 ತಿಂಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿರುವುದರಿಂದ ಬೆಂಗಳೂರು ನಗರದ ಜನರ ಬಹುದಿನಗಳ ಕನಸು ನನಸಾಗಲಿದೆ. ಈ ಉಪನಗರ ರೈಲ್ವೆ ಯೋಜನೆಯನ್ನು ಮೆಟ್ರೋ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸಲಾಗುವುದರಿಂದ ಅಂದಾಜು 10 ಲಕ್ಷಕ್ಕೂ ಹೆಚ್ಚಿನ ಪ್ರಯಾಣಿಕರಿಗೆ ತಡೆರಹಿತ ಸಂಚಾರಕ್ಕೆ ಅನುಕೂಲವಾಗಲಿದೆ.

ಹಾಗೆಯೇ ಬೆಂಗಳೂರು ವರ್ತುಲ ರಸ್ತೆಯಾದ ನೆಲಮಂಗಲ-ತುಮಕೂರು ರಾಷ್ಟ್ರೀಯ ಹೆದ್ದಾರಿ ಷಟ್ಪಥ ಯೋಜನೆ ಸೇರಿದಂತೆ ರಾಜ್ಯದ 5 ರಾಷ್ಟ್ರೀಯ ಹೆದ್ದಾರಿ ಯೋಜನೆಗಳನ್ನು ಮತ್ತು ಬೆಂಗಳೂರಿನಲ್ಲಿ ರೂ 1,800 ಕೋಟಿ ವೆಚ್ಚದಲ್ಲಿ ಮಲ್ಟಿ ಮಾಡಲ್ ಲಾಜಿಸ್ಟಿಕ್ಸ್ ಪಾರ್ಕ್ ಅಭಿವೃದ್ಧಿಗೆ ಕೂಡ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶಂಕುಸ್ಥಾಪನೆ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಬೆಂಗಳೂರು ಉಪನಗರ ರೈಲು ಯೋಜನೆಯ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದರಲ್ಲದೆ, ತುಮಕೂರು, ಅರಸೀಕೆರೆ, ಯಲಹಂಕ, ರತ್ನಗಿರಿ, ಮಡಗಾಂವ್ ಮತ್ತು ಉಡುಪಿಗೆ ಹೊಸ ರೈಲು ಸೇವೆಗೆ ವಿಡಿಯೋ ಲಿಂಕ್ ಮೂಲಕ ಹಸಿರು ನಿಶಾನೆ ತೋರಿಸಿದರು.



Downloaded From:www.kpscvaani.com




ಸುತ್ತೂರು ಮಠದಲ್ಲಿ ಯೋಗ ಸಂಬಂಧಿತ ಕೃತಿಗಳ ಬಿಡುಗಡೆ ಸಮಾರಂಭ

**ಮೈಸೂರಿನಲ್ಲಿ ಆಯೋಜನೆಗೊಂಡ ಕಾರ್ಯಕ್ರಮ:**

ಬೆಂಗಳೂರಿನ ಕಾರ್ಯಕ್ರಮಗಳನ್ನು ಮುಗಿಸಿ, ಜೂನ್ 20 ರಂದೇ ಸಂಜೆ ಮೈಸೂರಿಗೆ ತೆರಳಿದ ಪ್ರಧಾನಿ ಅವರು ಸಂಜೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜನೆ ಮಾಡಲಾಗಿದ್ದ ಕಾರ್ಯಕ್ರಮದಲ್ಲಿ ನಾಗನಹಳ್ಳಿ ಹೊಸ ಕೋಚಿಂಗ್ ಕಾಂಪ್ಲೆಕ್ಸ್ ಮತ್ತು ಮೈಸೂರು ರೈಲು ನಿಲ್ದಾಣ ಅಭಿವೃದ್ಧಿಗೆ ಶಂಕುಸ್ಥಾಪನೆ ಹಾಗೂ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್‌ನ ಸೆಂಟರ್ ಆಫ್ ಎಕ್ಸಲೆನ್ಸ್ ಅನ್ನು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳಿಂದ ಜೀವನ ಮಟ್ಟ ಸುಧಾರಣೆಗೆ ಆದ ಅನುಕೂಲಗಳ ಬಗ್ಗೆ ಫಲಾನುಭವಿಗಳಿಂದ ಪ್ರಧಾನಮಂತ್ರಿ ಅವರು ಸಂವಾದ ನಡೆಸಿದರು.

ನಂತರ ಅವರು ಅಲ್ಲಿಂದ ಸುತ್ತೂರು ಮಠಕ್ಕೆ ತೆರಳಿದರು. ಅಲ್ಲಿ ಹೊಸದಾಗಿ ಪ್ರಾರಂಭಿಸಲಾಗುತ್ತಿರುವ ಕೆ.ಎಸ್.ಎಸ್.ಸಂಸ್ಕೃತ ಪಾಠಶಲೆ ಮತ್ತು ವಿದ್ಯಾರ್ಥಿನಿಲಯದ ನೂತನ ಕಟ್ಟಡವನ್ನು ಉದ್ಘಾಟನೆ ಮಾಡಿದರು. ಇದೇ ಸಂದರ್ಭದಲ್ಲಿ ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳವರು ಪತಂಜಲಿ ಯೋಗ ಸೂತ್ರ, ಶಿವಸೂತ್ರ ಮತ್ತು ನಾರದ ಭಕ್ತಿಸೂತ್ರಗಳನ್ನು ಆಂಗ್ಲ ಭಾಷೆಯಲ್ಲಿ ವ್ಯಾಖ್ಯಾನ ಮಾಡಿರುವ ಕೃತಿಗಳನ್ನು ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ, ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿ ಅವರು ಉಪಸ್ಥಿತರಿದ್ದರು.

ತಾಯಿ ದುರ್ಗೆಯ ಭಕ್ತರಾದ ಪ್ರಧಾನಿ ಅವರು ರಾತ್ರಿ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನ ಮಾಡಿ ಪುನೀತರಾದರು. ಅಂದು ರಾತ್ರಿ ಅವರು ಮೈಸೂರಿನಲ್ಲೇ ವಾಸ್ತವ್ಯಹೂಡಿದರು.





**ಚಾಮುಂಡೇಶ್ವರಿ ದೇವಿಯಲ್ಲಿ ಸಂಕಲ್ಪ ಮಾಡಿದ ಪ್ರಧಾನಿ:**

ಕರುನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಾಲಯಕ್ಕೆ ಆಗಮಿಸಿ ದೇವಿಯ ದರ್ಶನ ಮಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದ ಶಾಂತಿ, ನೆಮ್ಮದಿಗಾಗಿ ಸಂಕಲ್ಪ ಮಾಡಿದರು. ಸುಮಾರು 15 ನಿಮಿಷಗಳ ಕಾಲ ಗರ್ಭಗುಡಿಯಲ್ಲಿ ಕುಳಿತು ಅರ್ಚಕರ ಮಾರ್ಗದರ್ಶನದಂತೆ ಶಕ್ತಿ ದೇವತೆಗೆ ಭಕ್ತಿ ಪೂರ್ವಕವಾಗಿ ಪೂಜೆ ಸಲ್ಲಿಸಿದರು.


Downloaded From:www.kpscvaani.com

**ಮೈಸೂರಿನಲ್ಲಿ 8 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಐತಿಹಾಸಿಕ ಕ್ಷಣ:**

ಜೂನ್ 21 ರಂದು ಮೈಸೂರಿನ ಅಂಬಾವಿಲಾಸಿ ಅರಮನೆ ಆವರಣವು ಐತಿಹಾಸಿ ಯೋಗಾಭ್ಯಾಸಕ್ಕೆ ಸಾಕ್ಷಿಯಾಯಿತು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಂದು ಬೆಳಿಗ್ಗೆ 6.30ಕ್ಕೆ 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಚಾಲನೆ ನೀಡಿದರು. "ಮಾನವೀಯತೆಗಾಗಿ ಯೋಗ" ಎಂಬ ಘೋಷವಾಕ್ಯದಡಿ ಆಯೋಜನೆ ಮಾಡಲಾಗಿದ್ದ ಯೋಗ ದಿನಾಚರಣೆಯಲ್ಲಿ ಪ್ರಧಾನಿ ಅವರೊಂದಿಗೆ 15 ಸಾವಿರ ಮಂದಿ 45 ನಿಮಿಷಗಳ ಕಾಲ ಯೋಗಾಭ್ಯಾಸವನ್ನು ಪ್ರದರ್ಶನ ಮಾಡಿದರು. ಈ ಐತಿಹಾಸಿಕ ಯೋಗ ಪ್ರದರ್ಶನದಿಂದಾಗಿ ಇಡೀ ವಿಶ್ವವೇ ಮೈಸೂರಿನತ್ತ ಆಕರ್ಷಿತವಾಗಿತ್ತು.

ಯೋಗವನ್ನು ಮುಗಿಸಿದ ನಂತರ ಪ್ರಧಾನಮಂತ್ರಿ ಅವರು ಮೈಸೂರು ಅರಮನೆ ಬಳಿಯ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಯೋಗಕ್ಕೆ ಸಂಬಂಧಿಸಿದಂತೆ ಆಯುಷ್ ಇಲಾಖೆ ಏರ್ಪಡಿಸಿದ್ದ ಮಾಹಿತಿಯ ಪ್ರಾತ್ಯಕ್ಷಿಕೆ ಒಳಗೊಂಡ ಡಿಜಿಟಲ್ ವಸ್ತು ಪ್ರದರ್ಶನ ಮಳಿಗೆಯನ್ನು ಉದ್ಘಾಟಿಸಿದರಲ್ಲದೆ, ವಸ್ತು ಪ್ರದರ್ಶನವನ್ನು ವೀಕ್ಷಣೆ ಮಾಡಿದರು. ಈ ಕಾರ್ಯಕ್ರಮದ ನಂತರ ಪ್ರಧಾನಿ ಅವರು ಮೈಸೂರಿನ ರಾಜವಂಶಸ್ಥರ ಮನೆಯಲ್ಲಿ ಬೆಳಗಿನ ಉಪಹಾರವನ್ನು ಸೇವಿಸಿದರು. ಈ ವೇಳೆ ರಾಜಮಾತೆ ಪ್ರಮೋದಾದೇವಿ, ರಾಜ ಯದುವೀರ್, ಪತ್ನಿ ತ್ರಿಶಿಕಾ ಕುಮಾರಿ ದೇವಿ ಮತ್ತು ಅವರ ಮಗು ಉಪಸ್ಥಿತರಿದ್ದರು. ಆ ನಂತರ ಪ್ರಧಾನಿ ಅವರು ಎರಡು ದಿನಗಳ ಕರ್ನಾಟಕ ಭೇಟಿಯನ್ನು ಮುಗಿಸಿ








Downloaded From:www.kpscvaani.com

ಮೈಸೂರು ವಿಮಾನ ನಿಲ್ದಾಣದಿಂದ ತಮ್ಮ ಪ್ರಯಾಣವನ್ನು ಬೆಳೆಸಿದರು.

ತಾವು ಮುಖ್ಯಮಂತ್ರಿಗಳಾದ ಬಳಿಕ ಇದೇ ಮೊದಲ ಬಾರಿಗೆ ಮತ್ತು ಬಹುದಿನಗಳ ನಂತರ ರಾಜ್ಯಕ್ಕೆ ಪ್ರಧಾನಿ ಅವರು ಆಗಮಿಸುತ್ತಿರುವುದಕ್ಕೆ ಬಸವರಾಜ ಬೊಮ್ಮಾಯಿ ಅವರು ಹೆಚ್ಚು ಉತ್ಸುಕರಾಗಿದ್ದರು. ಪ್ರಧಾನಿ ಅವರ ರಾಜ್ಯ ಭೇಟಿ ಸಂದರ್ಭದಲ್ಲಿ ಯಾವುದೇ ಲೋಪ ಸಂಭವಿಸಬಾರದೆಂಬ ಉದ್ದೇಶದಿಂದ ಅಧಿಕಾರಿಗಳೊಂದಿಗೆ ಸಾಲು ಸಾಲು ಸಭೆಗಳನ್ನು ನಡೆಸಿ ಸಲಹೆ ಸೂಚನೆ ನೀಡುತ್ತಿದ್ದರಲ್ಲದೆ, ಕಾರ್ಯಕ್ರಮ ಜರುಗುವ ಸ್ಥಳಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಹಾಗಾಗಿ ಯಾವುದೇ ಲೋಪವಾಗದಂತೆ ಪ್ರಧಾನಿ ಅವರ ಭೇಟಿ ಕಾರ್ಯಕ್ರಮವೆಲ್ಲವೂ ಸುಗಮವಾಗಿ ಜರುಗಿತು.

ಇನ್ನು ಪ್ರಧಾನಿ ಅವರ ಭೇಟಿ ವೇಳೆ ಸುಗಮ ಸಂಚಾರ ಮತ್ತು ಭದ್ರತೆಗಾಗಿ ಸುಮಾರು 10 ಸಾವಿರಕ್ಕೂ ಹೆಚ್ಚು ಪೊಲೀಸರನ್ನು ಬೆಂಗಳೂರು ನಗರದಲ್ಲಿ ನಿಯೋಜನೆ ಮಾಡಲಾಗಿತ್ತು. ಶಾಲಾ-ಕಾಲೇಜು ಮಕ್ಕಳಿಗೆ ಪ್ರಧಾನಿ ಭೇಟಿ ಹಿನ್ನೆಲೆಯಲ್ಲಿ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಪ್ರಧಾನಿ ಅವರು ಆಗಮಿಸುವ ಕಾರ್ಯಕ್ರಮದ ಸ್ಥಳಗಳ ಸುತ್ತಮುತ್ತಲಿನ ಶಾಲಾ ಕಾಲೇಜುಗಳಿಗೆ ರಜೆ ನೀಡಲಾಗಿತ್ತು.

ಪ್ರಧಾನಮಂತ್ರಿಗಳು ಭಾಗವಹಿಸಿದ್ದ ಎಲ್ಲಾ ಕಾರ್ಯಕ್ರಮಗಳಿಗೂ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ, ಕೇಂದ್ರ ಸಂಸದೀಯ ವ್ಯವಹಾರಗಳು, ಗಣಿ ಮತ್ತು ಕಲ್ಲಿದ್ದಲು ಸಚಿವರಾದ ಪ್ರಲ್ಹಾದ ಜೋಶಿ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಸಾತ್ ನೀಡಿದರು. ಇನ್ನು ಕೆಲವು ಕಾರ್ಯಕ್ರಮಗಳಲ್ಲಿ ಉನ್ನತ ಶಿಕ್ಷಣ ಸಚಿವರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ಕಂದಾಯ ಸಚಿವರಾದ ಆರ್. ಅಶೋಕ್, ಆರೋಗ್ಯ ಸಚಿವರಾದ ಡಾ.ಕೆ.ಸುಧಾಕರ್, ಸಹಕಾರ ಸಚಿವರಾದ ಎಸ್.ಟಿ.ಸೋಮಶೇಖರ್, ಸಂಸದರಾದ ಡಿ.ವಿ.ಸದಾನಂದಗೌಡ, ತೇಜಸ್ವಿ ಸೂರ್ಯ, ಪ್ರತಾಪ್ ಸಿಂಹ ಸೇರಿದಂತೆ ಮತ್ತಿತರ ಸಚಿವರು, ಶಾಸಕರುಗಳು, ಜನಪ್ರತಿನಿಧಿಗಳು ಮತ್ತು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಜ್ಯದಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮುಖ್ಯಮಂತ್ರಿಗಳ ಬಳಿ ಪ್ರಧಾನಿ ನರೇಂದ್ರ ಮೋದಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರಲ್ಲದೆ, ರಾಜ್ಯದ ಸಮಗ್ರ ಅಭಿವೃದ್ಧಿಗೆ ಜತೆಯಾಗಿ ಮುನ್ನಡೆಯೋಣ ಎಂದು ಹೇಳಿರುವುದು ಎಲ್ಲರಿಗೂ ಸಂತಸ ತಂದಿದೆ. ಒಟ್ಟಿನಲ್ಲಿ ರಾಜ್ಯಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಈ ಎರಡು ದಿನಗಳ ಭೇಟಿಯು ಸರ್ಕಾರ ಮತ್ತು ಜನತೆಯಲ್ಲಿ ಸಂಚಲನ ಮೂಡಿಸಿತ್ತು.




ಯೋಗ ಭಾರತೀಯ ಪ್ರಾಚೀನ ಪರಂಪರೆಯ ಅತ್ಯಮೂಲ್ಯ ಕೊಡುಗೆಯಾಗಿದೆ. ಯೋಗ, ಮನಸ್ಸು ಹಾಗೂ ಶರೀರ, ಆಲೋಚನೆ ಹಾಗೂ ಕ್ರಿಯೆ, ಸಂಯಮ ಹಾಗೂ ಸಾರ್ಥಕತೆ, ಮಾನವ ಹಾಗೂ ನಿಸರ್ಗದ ನಡುವೆ ಸಾಮರಸ್ಯ ಮತ್ತು ಆರೋಗ್ಯ ಹಾಗೂ ಯೋಗಕ್ಷೇಮದ ಕಡೆ ಸಮಗ್ರ ದೃಷ್ಟಿಕೋನಗಳನ್ನು ಒಳಗೊಂಡಿದೆ. ನಾವು ಎಷ್ಟೇ ಒತ್ತಡದಲ್ಲಿದ್ದರೂ ಕೆಲವು ನಿಮಿಷಗಳ ಧ್ಯಾನವು ನಮಗೆ ವಿಶ್ರಾಂತಿ ನೀಡುತ್ತದೆ. ನಮ್ಮ ಚೈತನ್ಯವನ್ನು ಹೆಚ್ಚುಸುತ್ತದೆ. ವಿಶ್ವಕ್ಕೆ ಶಾಂತಿ ನಿಡುವ ಶಕ್ತಿ ಯೋಗಕ್ಕಿದೆ. ಹಾಗಾಗಿ ಯೋಗವನ್ನು ಅರಿಯುವುದಷ್ಟೇ ಅಲ್ಲ, ಅದನ್ನು ಜೀವಿಸಬೇಕು. ಆತ್ಮೀಯವನ್ನಾಗಿಸಿಕೊಳ್ಳಬೇಕು. ಯೋಗ ದಿನ ಮಾತ್ರವಲ್ಲ. ಎಲ್ಲ ದಿನವೂ ಯೋಗದ ಮೂಲಕ ಸ್ವಾಸ್ಥ್ಯ, ಸುಖ ಮತ್ತು ಶಾಂತಿಯನ್ನು ಅನುಭವಿಸಬೇಕು. ಯೋಗ ಈಗ ವ್ಯಕ್ತಿಗಷ್ಟೇ ಅಲ್ಲ. ಸಮಾಜಕ್ಕೆ, ಇಡೀ ವಿಶ್ವದ ಮಾನವಕುಲಕ್ಕಾಗಿ ಬೇಕಿದೆ.

**-ನರೇಂದ್ರ ಮೋದಿ**
**ಪ್ರಧಾನಮಂತ್ರಿಗಳು**



ಮೈಸೂರು ರಾಜವಂಶಸ್ಥರ ಕುಟುಂಬದವರೊಂದಿಗೆ



Downloaded From:www.kpscvaani.com



# NO **YOGA** ! NO **LIFE** !
# KNOW YOGA !! KNOW LIFE !!

ಡಿ. ಪಿ. ಮುರಳೀಧರ್



ಜಗತ್ತಿನ 193 ರಾಷ್ಟ್ರಗಳ ಪೈಕಿ 177 ರಾಷ್ಟ್ರಗಳು ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಬೆಂಬಲ ಪ್ರಕಟಿಸಿ, ಆಚರಿಸಿದೆ ಎಂದರೆ ಭಾರತ ಇದೀಗ ವಿಶ್ವ ಗುರು ಸ್ಥಾನವನ್ನು ಅಲಂಕರಿಸಿದೆ ಎಂದೇ ಅರ್ಥವಲ್ಲವೇ ? ಈ ಬಾರಿಯ ಎಂಟನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ರಕ್ಷಕ ಉಂಗುರ (ಗಾರ್ಡಿಯನ್ ರಿಂಗ್ ) ಕಾರ್ಯಕ್ರಮದಲ್ಲಿ ಸೂರ್ಯನ ಸುತ್ತಲೂ ಪ್ರಭಾವಳಿಯಂತೆ ಸೂರ್ಯನ ಪಥದಲ್ಲಿ 75 ದೇಶಗಳು ಪಾಲ್ಗೊಂಡು ದಾಖಲೆ ಸ್ಥಾಪಿಸಿವೆ.

ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೈಸೂರು ಅರಮನೆಯ ಆವರಣದಲ್ಲಿ ಸಾರ್ವಜನಿಕರ ನಡುವೆ 45 ನಿಮಿಷಗಳ ಕಾಲ ಯೋಗಾಭ್ಯಾಸ ಮಾಡಿದ್ದು, ಕನ್ನಡಿಗರಿಗೆ ಮೈನವಿರೇಳಿಸುವ ವಿಚಾರ, ಮೈಸೂರಿಗರಿಗಂತೂ ಮರೆಯಲಾಗದ ಸಂಗತಿ.

ಪ್ರಧಾನಿ ಅವರೇ ಪಾಲ್ಗೊಂಡ ಹಿನ್ನೆಲೆಯಲ್ಲಿ, ಭಾರತ ಸ್ವಾತಂತ್ರದ ಅಮೃತೋತ್ಸವದ ಸಂದರ್ಭದಲ್ಲಿ ಆಯೋಜಿಸಲಾದ 75 ಐತಿಹಾಸಿಕ ಸ್ಥಳಗಳ ಪಟ್ಟಿಯಲ್ಲಿ



Downloaded From:www.kpscvaani.com



ಮೈಸೂರು ಮೊದಲ ಸ್ಥಾನ ಪಡೆಯಿತು.

ಯೋಗ ದಿನಾಚರಣೆಯ ಕಿರು ತೆರೆಯ ದೃಶ್ಯಾವಳಿಗಳಲ್ಲಿ ಮೈಸೂರು ಅರಮನೆಯ ಹಿನ್ನೋಟವನ್ನು ಕಂಡ ವಿದೇಶಿಗರು ಮೂಕ ವಿಸ್ಮಿತರಾಗಿ ಅರಮನೆ ನಗರಿಯನ್ನು ನೋಡಲು ತಮ್ಮ ಪ್ರವಾಸೀ ವೇಳಾಪಟ್ಟಿಯನ್ನು ಸಿದ್ಧತೆ ಮಾಡಿಕೊಳ್ಳಲು ಮುಂದಾದರೆ ಅಚ್ಚರಿ ಇಲ್ಲ.

ಮೈಸೂರು ಆಧ್ಯಾತ್ಮಿಕ ಮತ್ತು ಯೋಗ ತಾಣ. ಮೈಸೂರು ನಗರದ ಸಾಂಪ್ರದಾಯಿಕ ಮನೆಗಳಲ್ಲಿ ಯೋಗದ ಪರಿಚಯವಿತ್ತು. ಯೋಗದಿಂದ ದೇಶ–ದೇಶಗಳ ನಡುವೆ ಸೌಹಾರ್ಧತೆ ಸಾಧ್ಯ. ಯೋಗದಿಂದ ವಿಶ್ವ ಶಾಂತಿ ಲಭಿಸಲಿದೆ. ಯೋಗವು ಇಂದು ಮನುಕುಲದ ಆಸ್ತಿಯಾಗಿದೆ ಎಂದು ಪ್ರಧಾನಿ ಹೇಳಿದ್ದು ಗಮನಾರ್ಹ ಅಂಶವಾಗಿತ್ತು.

ರಾಣಿ ಪ್ರಮೋದಾ ದೇವಿ ಅವರ ಆಮಂತ್ರಣವನ್ನು ಗೌರವಿಸಿ ನರೇಂದ್ರ ಮೋದಿ ಅವರು ನವದೆಹಲಿಗೆ ತೆರಳುವ ಮುನ್ನ ಬೆಳಗಿನ ಉಪಾಹಾರವನ್ನು ಅರಮನೆಯಲ್ಲಿಯೇ ಸೇವಿಸಿದರು. ಯದುವೀರ್ ಒಳಗೊಂಡಂತೆ ಒಡೆಯರ್ ಕುಟುಂಬದವರೊಡನೆ ಸುವರ್ಣ ಕ್ಷಣಗಳನ್ನು ಕಳೆದರು.

**ಯೋಗದಿಂದ ಉದ್ಯೋಗ !**

ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಚಾಲನೆ ದೊರೆತ ದಿನದಿಂದಲೂ ಯೋಗ ಶಿಕ್ಷಣಕ್ಕೆ ಆದ್ಯತೆ ದೊರೆತಿದೆ. ವಿಶ್ವದೆಲ್ಲೆಡೆ ಲಕ್ಷಾಂತರ ಯೋಗ ಶಿಕ್ಷಕರಿಗೆ ಉದ್ಯೋಗ ದೊರೆತಿದೆ. ಕೋಟ್ಯಾಂತರ ಮಂದಿ ಯೋಗಾಭ್ಯಾಸದ ಶಿಕ್ಷಣವನ್ನು ಪಡೆಯಲು ಪ್ರಾರಂಭಿಸಿದ್ದಾರೆ.

ಯೋಗ ಎಂಬುದಕ್ಕೆ ಯಾವುದೇ ಧರ್ಮದ ಅಂಟೂ ಇಲ್ಲ ! ನಂಟೂ ಇಲ್ಲ ! ಯೋಗಕ್ಕೆ ಜಾತಿಯ ಬಂಧನವೂ ಇಲ್ಲ ! ಬೇಧವೂ ಇಲ್ಲ ! ಯೋಗವನ್ನು ಒಂದು ಧರ್ಮಕ್ಕೆ ಸೀಮಿತಗೊಳಿಸುವವರು ಸಂಕುಚಿತ ಮನೋಭಾವ ಉಳ್ಳವರು. ದೂರದೃಷ್ಟಿ ಇಲ್ಲದವರು. ಆರೋಗ್ಯದ ಮಹತ್ವವನ್ನು ಅರಿಯದವರು ಮತ್ತು ಅರ್ಥಮಾಡಿಕೊಳ್ಳದವರು ಯೋಗದಿಂದ ದೂರ ಉಳಿಯುತ್ತಾರೆ.

ಯೋಗ ಎಂದರೆ ವೈಜ್ಞಾನಿಕ ರೀತಿಯಲ್ಲಿ ಬದುಕುವುದು ಎಂದರ್ಥ ! ಯೋಗ ಎಂಬುದು ಯಾರು ಬೇಕಾದರೂ ಕಲಿಯಬಹುದಾದ ಒಂದು ವಿಶಿಷ್ಟ ಪದ್ಧತಿ. ನಿಯತವಾಗಿ ಯೋಗಾಭ್ಯಾಸ ಮಾಡುವವರು ದೈಹಿಕವಾಗಿ ಸದೃಢರಾಗಿರುತ್ತಾರೆ. ಸದಾಕಾಲ ಮಾನಸಿಕವಾಗಿಯೂ ಉಲ್ಲಸಿತರಾಗಿರುತ್ತಾರೆ. ಅಷ್ಟೇ ಅಲ್ಲ, ದೀರ್ಘಾಯುಷ್ಯವಂತರಾಗಿಯೂ ಬಾಳುತ್ತಾರೆ.

ಪ್ರತಿದಿನವೂ ಯೋಗ ಸಾಧನೆ ಮಾಡುವವರಲ್ಲಿ, ರೋಗದ ಛಾಯೆಯೇ ಸುಳಿಯುವುದಿಲ್ಲ. ಅಂತವರ ಕಾರ್ಯನಿರ್ವಹಣೆಯಲ್ಲಿ ಯೋಗ ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಅಲ್ಲದೆ, ಅವರಲ್ಲಿ ಖಿನ್ನತೆಯನ್ನು ಮಾಯ ಮಾಡುತ್ತದೆ. ಮಾನಸಿಕ ಒತ್ತಡ ಇರುವುದಿಲ್ಲ. ಯೋಗ ಸಾಧಕರಲ್ಲಿ ಸದಾಕಾಲ ಲವಲವಿಕೆ, ಸದೃಢತೆ ಮತ್ತು ಸ್ಥಿರತೆ ಮನೆಮಾಡಿರುತ್ತದೆ. ಅಂತಹವರಿಗೆ ಉತ್ತಮ ನಿದ್ರೆಯೂ ಬರುತ್ತದೆ ಎಂದು ವೈದ್ಯಕೀಯ ವಿಜ್ಞಾನ ಹೇಳುತ್ತದೆ.

ಮನಸ್ಸು ಮತ್ತು ದೇಹದ ನಡುವೆ ಸೌಹಾರ್ಧತೆಯನ್ನು ಕಾಯ್ದುಕೊಳ್ಳುವ ಯೋಗದ ಅಸ್ತಿತ್ವ ವೇದಗಳ ಕಾಲಕ್ಕಿಂತಲೂ ಮುನ್ನ ಇತ್ತೆಂದು ಹೇಳಲಾದರೂ, ಪತಂಜಲಿ ಮಹರ್ಷಿಗಳು ಸುವ್ಯವಸ್ಥಿತವಾಗಿ ಹಾಗೂ ಸಂಕೇತರ ರೂಪದಲ್ಲಿ ಯೋಗ ಸೂತ್ರಗಳನ್ನು ಕಟ್ಟಿಕೊಡುವವರೆಗೂ ಯೋಗವು ಆರೋಗ್ಯವಂತ ಜೀವನದ ವಿಧಾನವಾಗಿ ಜನಪ್ರಿಯತೆ ಗಳಿಸಲು ಸಾಧ್ಯವಾಗಿರಲಿಲ್ಲ.

ವೇದಗಳು, ಉಪನಿಷತ್ತುಗಳು, ಪುರಾಣಗಳಲ್ಲಿ ಮಾತ್ರವಲ್ಲದೆ, ಯೋಗದ ಉಲ್ಲೇಖಗಳು ಬೌದ್ಧ ಮತ್ತು ಜೈನ ಧರ್ಮದ ಗ್ರಂಥಗಳಲ್ಲೂ, ವ್ಯಾಕರಣ ಪಿತಾಮಹ ಪಾಣಿನಿಯ ಕೃತಿಗಳಲ್ಲೂ ಇವೆ. ಮಹಾಭಾರತದ ಒಂದು ಭಾಗವಾಗಿರುವ ಭಗವದ್ಗೀತೆಯಲ್ಲೂ ಜ್ಞಾನ ಯೋಗ, ಭಕ್ತಿ ಯೋಗ ಮತ್ತು ಕರ್ಮ ಯೋಗದ ಉಲ್ಲೇಖಗಳಿವೆ. ಅಲ್ಲದೆ, ಧ್ಯಾನ ಯೋಗ, ಪತಂಜಲ ಯೋಗ, ಕುಂಡಲಿನಿ ಯೋಗ, ಹಠ ಯೋಗ, ಮಂತ್ರ ಯೋಗ, ಲಯ ಯೋಗ, ರಾಜ ಯೋಗ, ಜೈನ ಯೋಗ ಹಾಗೂ ಬೌದ್ಧ ಯೋಗ ಎಂಬ ಹಲವು ಶಾಖೆಗಳೂ ಯೋಗ ಜಗತ್ತಿನಲ್ಲಿ ಮೇಳೈಸಿವೆ.

ಯೋಗದ ಭಾಗವಾಗಿ ಯಮ, ನಿಯಮ, ಆಸನ, ಪ್ರಾಣಾಯಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ (ಸಂಯಮ). ಬಂಧ, ಮುದ್ರ, ಷಟ್ಕರ್ಮಗಳು, ಯುಕ್ತಾಹಾರ, ಯುಕ್ತ ಕರ್ಮ, ಮಂತ್ರ ಜಪ ಹೀಗೆ ಆರೋಗ್ಯ ಮತ್ತು ಸೌಖ್ಯವನ್ನು ಕಾಯ್ದುಕೊಳ್ಳುವ ವಿವಿಧ ವಿಧಾನಗಳು ಹೊರಹೊಮ್ಮಿವೆ.

**ಯೋಗಾಯೋಗ ಹೇಗೆ ?**

ಈ ಜಗತ್ತು ಕಂಡ ಮೊದಲ ಯೋಗಿ ಮಹಾಶಿವ ! ಅದಕ್ಕೇ ಮಹಾಶಿವನನ್ನು ಆದಿ ಯೋಗಿ ಎಂದು ಕರೆಯುತ್ತಾರೆ. ತಮಗೂ ಯೋಗವನ್ನು ತಿಳಿಸಿಕೊಡುವಂತೆ ಹಲವರು ಮಹಾಶಿವನ ಮೊರೆ ಹೋಗುತ್ತಾರೆ. ಆದರೆ, ಮಹಾಶಿವ ಸ್ಪಂದಿಸುವುದಿಲ್ಲ.

ಅಂದು ಉತ್ತರ ಪಥದಿಂದ ದಕ್ಷಿಣ ಪಥಕ್ಕೆ ಸೂರ್ಯ ಚಲಿಸಿದ ದಿನ. ಆ ದಿನ ಹಗಲು ಹೆಚ್ಚು ಹಾಗೂ ರಾತ್ರಿ ಕಡಿಮೆ. ಅದುವೇ ಅಯನ ಸಂಕ್ರಾಂತಿ. ಆ ದಿನ ಯೋಗದ ಕಲಿಕೆಗಾಗಿ ಹಲವು ವರ್ಷಗಳು ಕಾಯುತ್ತಿದ್ದ ಸಪ್ತ ಋಷಿಗಳ ಆಸಕ್ತಿ ಮತ್ತು ಛಲವನ್ನು ಕಂಡ ಮಹಾಶಿವ ಅವರಿಗೆ ಯೋಗವನ್ನು ಕಲಿಸುತ್ತಾನೆ. ಅಲ್ಲಿಂದ ಯೋಗವು ಈ ಭೂಮಿಯ ವಿವಿಧೆಡೆಗಳಲ್ಲಿ ವ್ಯಾಪಕವಾಗಿ ಪಸರಿಸಲು ಪ್ರಾರಂಭಿಸಿದೆ. ಅಯನ ಸಂಕ್ರಾಂತಿಯ ಸಂಸ್ಮರಣೆಗಾಗಿ ಜೂನ್ 21 ರಂದು ಯೋಗ ದಿನವನ್ನಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂಬ ಕಥೆ ಇದೆ.

**ಕರ್ನಾಟಕದ ಕೊಡುಗೆ !**

ಯೋಗ ಪ್ರಪಂಚಕ್ಕೆ ಕರ್ನಾಟಕದ ಕೊಡುಗೆ ಅಪಾರ ಮತ್ತು ಅನನ್ಯ.



Downloaded From:www.kpscvaani.com



ಬಾಗಲಕೋಟೆಯ ಪಟ್ಟದಕಲ್ಲಿನಲ್ಲಿ ಕೇಂದ್ರ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರಾದ ರಾಜೀವ್ ಚಂದ್ರಶೇಖರ್ ಅವರ ನೇತೃತ್ವದಲ್ಲಿ ಯೋಗ ಪ್ರದರ್ಶನ.

ಆಧುನಿಕ ಯೋಗ ಪಿತಾಮಹ ತಿರುಮಲೈ ಕೃಷ್ಣಮಾಚಾರ್ಯ, ಕೃಷ್ಣಮಾಚಾರ್ಯ ಅವರ ಪುತ್ರ ಟಿ.ಕೆ.ವಿ.ದೇಶಿಕಾಚಾರ್, ಕೃಷ್ಣಮಾಚಾರ್ಯ ಅವರ ಶಿಷ್ಯರಾದ ಅಷ್ಟಾಂಗ ಯೋಗ ಮಹಾಸಾಧಕ ಕೆ. ಪಟ್ಟಾಭಿ ಜೋಯಿಸ್ ಮತ್ತು ಪದ್ಮ ವಿಭೂಷಣ ಬಿ. ಕೆ. ಎಸ್. ಅಯ್ಯಂಗಾರ್, ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿ, ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿ ಅವರ ಶಿಷ್ಯರಾದ ಜಗ್ಗೀ ವಾಸುದೇವ್, ಜಗತ್ತಿನೆಲ್ಲೆಡೆ ಆರ್ಟ್ ಆಫ್ ಲಿವಿಂಗ್‌ನ ಶಾಖೆಗಳನ್ನು ಸ್ಥಾಪಿಸಿ ಸುದರ್ಶನ ಕ್ರಿಯೆಯನ್ನು ವಿಶ್ವಾದ್ಯಂತ ಜನಪ್ರಿಯಗೊಳಿಸುವಲ್ಲಿ ಮುಂಚೂಣಿಯಲ್ಲಿರುವ ಶ್ರೀ ಶ್ರೀ ರವಿಶಂಕರ್, ಪತಂಜಲಿ ಯೋಗಾಶ್ರಮ ಟ್ರಸ್ಟ್ ಮೂಲಕ ಐದು ಲಕ್ಷಕ್ಕೂ ಹೆಚ್ಚು ಮಂದಿಗೆ ಉಚಿತ ಯೊಗ ಶಿಕ್ಷಣ ನೀಡಿದ ಪ್ರಕಾಶ್ ಯೋಗಿ. ಇವರೆಲ್ಲರೂ ಕನ್ನಡಿಗರು ಎಂಬುದು ನಮ್ಮೆಲ್ಲರಲ್ಲೂ ಅಭಿಮಾನವನ್ನು ಹೆಚ್ಚಿಸುವ ಹಾಗೂ ಹೆಮ್ಮೆಯನ್ನು ಮೂಡಿಸುವ ಸಂಗತಿ. ಅಲ್ಲವೇ ?

**ಅಂತಾರಾಷ್ಟ್ರೀಯ ಯೋಗ ದಿನಾಚರಣೆ : ಒಂದು ಹಿನ್ನೆಲೆ**

ವಿಶ್ವ ಶೌಚಾಲಯ ದಿನಾಚರಣೆ ಎಂಬುದು ಆಚರಣೆಯಲ್ಲಿದೆ. ಆದರೆ, ವಿಶ್ವ ಯೋಗ ದಿನಾಚರಣೆ ಎಂಬುದು ಆಚರಣೆಯಲ್ಲಿಲ್ಲ ಎಂದು ಆರ್ಟ್ ಆಫ್ ಲಿವಿಂಗ್ ನ ಶ್ರೀ ಶ್ರೀ ರವಿಶಂಕರ್ ಅವರು 2011 ರಲ್ಲಿ ಟ್ವೀಟ್ ಮಾಡಿ, ನಾವು ಈ ಬಗ್ಗೆ ವಿಶ್ವ ಸಂಸ್ಥೆಯ ಗಮನ ಸೆಳೆಯುತ್ತೇವೆ ಎಂದು ಹೇಳಿದ್ದರು.

ಅಂತೆಯೇ, 2014 ರಲ್ಲಿ ಅಸ್ತಿತ್ವಕ್ಕೆ ಬಂದ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಆಯುರ್ವೇದ, ಯೋಗ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ ಒಳಗೊಂಡ ಆಯುಷ್ ಇಲಾಖೆಯ ಮೂಲಕ ಯೋಗವನ್ನು ಜನಪ್ರಿಯಗೊಳಿಸಲು ಮುಂದಾಯಿತು.

ಹೌದು ! 2015 ರಲ್ಲಿ ಜೂನ್ 21 ರಂದು ನವದೆಹಲಿಯ ರಾಜ್ ಪಥ್‌ನಲ್ಲಿ ನಡೆದ ಮೊದಲ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸುಸಂದರ್ಭದಲ್ಲಿ 35,000 ಕ್ಕೂ ಹೆಚ್ಚು ಮಂದಿಯ ಜೊತೆಯಲ್ಲಿ ಸಾಮಾನ್ಯನಲ್ಲಿ ಸಾಮಾನ್ಯನಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರೇ ಪಾಲ್ಗೊಂಡಿದ್ದು, ಯೋಗದ ಮಹತ್ವ ಕುರಿತಂತೆ ಜಗದ ಕಣ್ಣು ತೆರೆಸಿತು. ಆ ಸಂದರ್ಭದಲ್ಲಿ 21 ಆಸನಗಳ ಪ್ರದರ್ಶನಗೊಂಡಿದ್ದು ಒಂದು ವಿಶೇಷವಾದರೆ, ಭಾರತದ ಕರೆಗೆ ಓಗೊಟ್ಟು 84 ರಾಷ್ಟ್ರಗಳಲ್ಲೂ ಯೋಗ ಪ್ರದರ್ಶನವನ್ನು ಮಾಡಿದ್ದು ಮತ್ತೊಂದು ವಿಶೇಷವಾಗಿತ್ತು.

ನಂತರ, 2016 ರ ಜೂನ್ 21 ರಂದು ಚಂಡೀಗಢದಲ್ಲಿ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿಯೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಭಾಗಿಯಾಗಿ ವಿಶ್ವದ ಗಮನ ಸೆಳೆದರು. ಅದೇ ವರ್ಷ ವಿಶ್ವ ಸಂಸ್ಥೆಯಲ್ಲಿ ಯೋಗ ಗುರುಗಳ ಜೊತೆಗೆ ಸಂಭಾಷಣೆ : ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಗಾಗಿ ಯೋಗ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಭಾರತದ ಜಗ್ಗೀ ವಾಸುದೇವ್ ಪಾಲ್ಗೊಂಡಿದ್ದರು.

ತದ ನಂತರ, 2017 ರ ಜೂನ್ 21 ರಂದು ಉತ್ತರ ಪ್ರದೇಶದ ಲಖನೌನಲ್ಲಿ ಆರೋಗ್ಯಕ್ಕಾಗಿ ಯೋಗ ಕುರಿತ ವಿಷಯಾಧಾರಿತ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಮಾರಂಭದಲ್ಲಿ 51,000 ಮಂದಿ ಯೋಗಾಸಕ್ತರ ನಡುವೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಭಾಗವಹಿಸಿದ್ದರು. ಅಮೇರಿಕಾ, ಚೀನಾ, ಜಪಾನ್ ಮತ್ತು ಗ್ರೀಸ್‌ನಲ್ಲೂ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಸಮಾರಂಭಗಳೂ ಕೂಡಾ ವಿಶ್ವದ ಗಮನ ಸೆಳೆದವು.

ಇದಾದ ನಂತರ, 2018 ರ ಜೂನ್ 21 ರಂದು ಶಾಂತಿಗಾಗಿ ಯೋಗ ವಿಷಯಾಧಾರಿತ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಮಾರಂಭದಲ್ಲಿ ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪಾಲ್ಗೊಂಡಿದ್ದರು. ಈ ಸಮಾರಂಭದಲ್ಲಿ 50,000 ಮಂದಿ ಭಾಗವಹಿಸಿದ್ದರು. ಗಮನಾರ್ಹ ಅಂಶವೆಂದರ ಅದೇ ದಿನ ರಾಜಾಸ್ಥಾನದ ಕೋಟಾದಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಒಂದು ಲಕ್ಷ ಮಂದಿ ಭಾಗವಹಿಸಿದ್ದರು.

2019 ರ ಜೂನ್ 21 ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜಾರ್ಖಂಡ್‌ನ ರಾಚಿಯಲ್ಲಿ ನಡೆದ ಹೃದಯಕ್ಕಾಗಿ ಯೋಗ ಎಂಬ ವಿಷಯಾಧಾರಿತ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಮಾರಂಭದಲ್ಲಿ 40,000 ಮಂದಿ ಯೋಗಪಟುಗಳ



ಬಳ್ಳಾರಿಯ ಹಂಪಿಯಲ್ಲಿ ಕೇಂದ್ರ ಕಲ್ಲಿದ್ದಲು, ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಪ್ರಲ್ಹಾದ್ ಜೋಶಿ ಅವರ ನೇತೃತ್ವದಲ್ಲಿ ಯೋಗ ಪ್ರದರ್ಶನ.



Downloaded From:www.kpscvaani.com

ಮಧ್ಯದಲ್ಲಿ ಭಾಗವಹಿಸಿದ್ದರು.

ವಿಶ್ವವಿಡೀ ಕೋವಿಡ್–19 ರ ಸೋಂಕು ವ್ಯಾಪಿಸಿದ್ದ ಹಿನ್ನೆಲೆ 2020 ರ ಜೂನ್ 21 ರಂದು ಮನೆಯಲ್ಲಿ ಯೋಗ "ಕುಟುಂಬದೊಡನೆ ಯೋಗ" ಎಂಬ ವಿಷಯಾಧಾರಿತ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ನವದೆಹಲಿಯ ಲೋಕ ಕಲ್ಯಾಣ ಮಾರ್ಗದಲ್ಲಿನ ತಮ್ಮ ಅಧಿಕೃತ ನಿವಾಸದಲ್ಲಿಯೇ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಿದರು.

ಮತ್ತದೇ ಕೋವಿಡ್–19 ರ ಉಪಟಳ ಮುಂದುವರೆದ ಹಿನ್ನೆಲೆ 2021 ರ ಜೂನ್ 21 ರಂದು "ಸೌಖ್ಯಕ್ಕಾಗಿ ಯೋಗ" ಎಂಬ ವಿಷಯಾಧಾರಿತ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮ ಪ್ರಪ್ರಥಮ ಬಾರಿಗೆ ಆನ್ ಲೈನ್‌ನಲ್ಲಿ ಆಚರಣೆಗೆ ಬಂತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಅಧಿಕೃತ ನಿವಾಸದಲ್ಲಿ ನಾಲ್ಕು ಗೋಡೆಗಳ ನಡುವೆ ಯೋಗ ಪ್ರದರ್ಶನ ಮಾಡಿ, ಜನಸಾಮಾನ್ಯರಲ್ಲಿ ಯೋಗ ಕುರಿತ ಉತ್ಸುಕತೆ ಮುಂದುವರೆಯಲು ಸ್ಫೂರ್ತಿ ಹಾಗೂ ಪ್ರೇರಣೆ ನೀಡಿದರು.

**ಆಚರಣೆ ಎಂಟು : ಕರ್ನಾಟಕದ ನಂಟು**

ಹೌದು ! 2022 ರ ಜೂನ್ 21 ರಂದು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಡೆದ ಎಂಟನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಮಾರಂಭ ಇಡೀ ಜಗತ್ತಿಗೆ ವಿಶೇಷತೆಯಲ್ಲಿ ವಿಶೇಷತೆಯನ್ನು ತೋರ್ಪಡಿಸಿದೆ.



ಹಾಸನದ ಹಳೇಬೀಡಿನಲ್ಲಿ ಕೇಂದ್ರ ಕೃಷಿ ಮತ್ತು ಕೃಷಿಕರ ಕಲ್ಯಾಣ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ಅವರ ನೇತೃತ್ವದಲ್ಲಿ ಯೋಗ ಪ್ರದರ್ಶನ.

ಕೋವಿಡ್–19 ರ ಸಂಕಷ್ಟ ತಗ್ಗಿದ ನಂತರ ನಡೆದ ಮೊದಲ ಯೋಗ ದಿನಾಚರಣೆ ಇದಾಗಿದೆ. ನಾಲ್ವಡೀ ಕೃಷ್ಣರಾಜ ಒಡೆಯರ್ ಅವರ ಹೃದಯಕ್ಕೆ ಹತ್ತಿರವಾಗಿದ್ದ ಯೋಗ ಅವರ ಪ್ರೀತಿಯ ನೆಲದಲ್ಲಿಯೇ ನಡೆದದ್ದು ಒಂದೆಡೆ, ವಿಶ್ವ ಮಾನವ ಪರಿಕಲ್ಪನೆಯನ್ನು ಎಲ್ಲೆಡೆ ಪ್ರತಿಪಾದಿಸಿದ ಡಾ.ಕೆ.ವಿ.ಪುಟ್ಟಪ್ಪ (ಕುವೆಂಪು) ಅವರ ಕರ್ಮಭೂಮಿಯಲ್ಲಿ "ಮಾನವೀಯತೆಗಾಗಿ ಯೋಗ"ಎಂಬ ವಿಷಯಾಧಾರಿತ ಈ ಬಾರಿಯ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಸಮಾರಂಭ ನಡೆದದ್ದು ಮತ್ತೊಂದೆಡೆ ಸಂಭ್ರಮದಲ್ಲಿ ಸಂಭ್ರಮದ ವಾತಾವರಣವನ್ನು ಸೃಷ್ಟಿಸಿತ್ತು. ಮೈಸೂರಿನ ಯೋಗ ದಿನಾಚರಣೆ ಈ ಇಬ್ಬರೂ ಪ್ರಾತಃ ಸ್ಮರಣೀಯರಿಗೆ ಗೌರವವನ್ನು ಅರ್ಪಿಸುವಂತಹುದಾಗಿತ್ತು.

ತನ್ನ ಸೌಂದರ್ಯದಿಂದ ವಿಶ್ವವನ್ನೇ ಆಕರ್ಷಿಸುವ ಮೈಸೂರು ಅರಮನೆಯ ಆವರಣದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಹದಿನೈದು ಸಾವಿರಕ್ಕೂ ಹೆಚ್ಚು ಯೋಗಾಸಕ್ತರ ಜೊತೆಯಲ್ಲಿ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದು, ಕನ್ನಡಿಗರಿಗಂತೂ ಬಹಳ ಖುಷಿ ಕೊಟ್ಟಿದ್ದಂತೂ ಸತ್ಯ.



ವಿಜಯಪುರದ ಗೋಲಗುಂಬಜ್ ಬಳಿ ಕೇಂದ್ರ ನವೀಕರಿಸಬಹುದಾದ ಇಂಧನ ಹಾಗೂ ರಾಸಾಯನಿಕ ರಸಗೊಬ್ಬರ ರಾಜ್ಯ ಸಚಿವರಾದ ಭಗವಂತ ಖೂಬಾ ಅವರ ನೇತೃತ್ವದಲ್ಲಿ ಯೋಗ ಪ್ರದರ್ಶನ.

**ಕೇಂದ್ರ ಸಚಿವರ ಯೋಗ !**

ಅದೇ ದಿನ ವಿಜಯ ನಗರ ಜಿಲ್ಲೆಯ ವಿಶ್ವ ಪರಂಪರಾ ತಾಣ ಹಂಪಿಯಲ್ಲಿ ಕೇಂದ್ರ ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿ ಖಾತೆಯ ರಾಜ್ಯ ಸಚಿವ ಪ್ರಹ್ಲಾದ್ ಜೋಶಿ, ಹಾಸನ ಜಿಲ್ಲೆಯ ಹಳೇಬೀಡು ಹೊಯ್ಸಳೇಶ್ವರ ದೇಗುಲದ ಆವರಣದಲ್ಲಿ ಕೇಂದ್ರ ಕೃಷಿ ಮತ್ತು ಕೃಷಿಕರ ಕಲ್ಯಾಣ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್‌ನಲ್ಲಿ ಕೇಂದ್ರ ಕೌಶಾಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ಹಾಗೂ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹಾಗೂ ವಿಜಯಪುರದಲ್ಲಿನ ಗೋಲ್ ಗುಂಬಜ್‌ನಲ್ಲಿ ಕೇಂದ್ರ ನವ ಮತ್ತು ನವೀಕೃತ ಇಂಧನ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ರಾಜ್ಯ ಸಚಿವ ಭಗವಂತ ಖೂಬಾ ಅವರು ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು ಎಂಬುದೂ ಗಮನಾರ್ಹ.

ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಕೇವಲ ಒಂದು ಗಂಟೆಯನ್ನಾದರೂ ಯೋಗಕ್ಕೆ ಮುಡುಪಾಗಿಟ್ಟರೆ, ಸಾಮಾನ್ಯವಾಗಿ ನಮಗೆ ಎದುರಾಗುವ ಹಲವು ದೈಹಿಕ ಹಾಗೂ ಮಾನಸಿಕ ಸಮಸ್ಯೆಗಳನ್ನು ದೂರವಿರಿಸಬಹುದು.

**NO YOGA ! NO LIFE ! (ಯೋಗವಿಲ್ಲ (ದೆ) ! ಜೀವನವಿಲ್ಲ !) KNOW YOGA !! KNOW LIFE !! (ಯೋಗ ತಿಳಿಯಿರಿ ! ಜೀವನ ಅರಿಯಿರಿ!)** ಎಂಬ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ಮಾತುಗಳನ್ನು ನಾವು ಸದಾಕಾಲ ಸ್ಮರಿಸೋಣ, ಪಾಲಿಸೋಣ. ■


Downloaded From:www.kpscvaani.com





















# ಬಂಡವಾಳ ಹೂಡಿಕೆ ಆಕರ್ಷಿಸುವಲ್ಲಿ ಮುಂಚೂಣಿ ಸಾಧಿಸಿದ ರಾಜ್ಯ

**ಈ ಬಾರಿ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಭಾಗವಹಿಸಿದ್ದ ರಾಜ್ಯ ಸರ್ಕಾರವು ಭಾರಿ ಮೊತ್ತದ ಹೂಡಿಕೆಯನ್ನು ತರುವಲ್ಲಿ ಯಶಸ್ವಿಯಾಗಿದೆ.**

ಹೆಚ್.ಬಿ.ಗುರುಲಿಂಗಸ್ವಾಮಿ

ದಾವೋಸ್‌ನಲ್ಲಿ ಜರುಗಿದ ವಿಶ್ವ ಆರ್ಥಿಕ ಶೃಂಗ ಸಭೆಯ ಅವಕಾಶವನ್ನು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಅತ್ಯಂತ ಯಶಸ್ವಿಯಾಗಿ ಸದ್ಬಳಕೆ ಮಾಡಿಕೊಳ್ಳುವ ಮೂಲಕ ರಾಜ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಹೂಡಿಕೆದಾರರನ್ನು ಆಕರ್ಷಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ದೂರದೃಷ್ಟಿ ಫಲದಿಂದಾಗಿ ಹಲವಾರು ಕಂಪನಿಗಳು ಕರ್ನಾಟಕದಲ್ಲಿ ಬಂಡವಾಳ ಹೂಡಲು ಆಸಕ್ತಿ ತೋರಿರುವುದಷ್ಟೇ ಅಲ್ಲದೆ, ಎರಡು ಕಂಪನಿಗಳು ನೇರವಾಗಿ ಬಂಡವಾಳ ಹೂಡಿಕೆ ಸಂಬಂಧಿಸಿದಂತೆ ಸರ್ಕಾರದೊಂದಿಗೆ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದ್ದು ಈ ಬಾರಿಯ ದಾವೋಸ್ ಆರ್ಥಿಕ ಶೃಂಗದ ವಿಶೇಷತೆ.

**52 ಸಾವಿರ ಕೋಟಿ ರೂಪಾಯಿ ಹೂಡಿಕೆ ಒಪ್ಪಂದಕ್ಕೆ ಸಹಿ ಹಾಕಿದ ಎರಡು ಕಂಪನಿಗಳು:**

ದಾವೋಸ್ ಶೃಂಗ ಸಭೆಯಲ್ಲಿ ಸ್ವತಃ ಮುಖ್ಯಮಂತ್ರಿಗಳೇ 25ಕ್ಕೂ ಹೆಚ್ಚು ಉದ್ಯಮಿಗಳೊಂದಿಗೆ ಮಾತುಕತೆ ನಡೆಸಿದರು. ಅರ್ಸೆಲಾರ್ ಮಿತ್ತಲ್ ಕಂಪನಿಯ ಲಕ್ಷ್ಮೀ ಮಿತ್ತಲ್, ಅದಾನಿ ಸಮೂಹದ ಗೌತಮ್ ಅದಾನಿ ಸೇರಿದಂತೆ ಹಲವಾರು



Downloaded From:www.kpscvaani.com



### ರಾಜ್ಯದ ಮೇಲೆ ಉದ್ದಿಮೆದಾರರ ವಿಶ್ವಾಸ

ಬಂಡವಾಳ ಹೂಡಿಕೆಗೆ ರಾಜ್ಯದಲ್ಲಿರುವ ಉತ್ತಮ ಕೈಗಾರಿಕೆ ಸ್ನೇಹಿ ಪರಿಸರ, ನೀತಿ, ನಿಯಮಗಳು, ತಂತ್ರಜ್ಞಾನ ಆಧಾರಿತ ಕಂಪನಿಗಳು, ಕೌಶಲ್ಯಯುತ ಮಾನವ ಸಂಪನ್ಮೂಲ, ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಎಂಡ್ ಡಿ) ಕೇಂದ್ರಗಳು, ಭೂಮಿಯ ಲಭ್ಯತೆ, ಇವುಗಳು ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಮಾಡಲು ಕೈಗಾರಿಕೋದ್ಯಮಿಗಳಲ್ಲಿ ವಿಶ್ವಾಸ ಮೂಡಿಸಿದೆ. ಕೇವಲ ಬಂಡವಾಳ ಹೂಡಿಕೆ ಮಾಡಿ ಹೊಸ ಉದ್ಯಮ ಸ್ಥಾಪನೆಗೆ ಅಷ್ಟೇ ಅಲ್ಲ, ಇರುವ ಉದ್ಯಮಗಳನ್ನು ವಿಸ್ತರಣೆ ಮಾಡಲು ಕೂಡ ಉತ್ಸುಕತೆ ತೋರಿಸಲಾಗಿದೆ. ಹೈಡ್ರೋ ಪಾವರ್, ಏರೋಸ್ಪೇಸ್, ನವೀಕರಿಸಬಹುದಾದ ಇಂಧನ, ಎಫ್ ಎಂ ಸಿ ಜಿ ಕ್ಷೇತ್ರದ ಕಂಪನಿಗಳು ಬಂಡವಾಳ ಹೂಡಿಕೆ ಮಾಡಲು ಆಸಕ್ತಿ ತೋರಿಸಿರುವುದು ರಾಜ್ಯದ ಮೇಲೆ ಉದ್ದಿಮೆದಾರರು ಇಟ್ಟಿರುವ ವಿಶ್ವಾಸಕ್ಕೆ ಹಿಡಿದ ಕೈ ಗನ್ನಡಿಯಾಗಿದೆ.

**–ಬಸವರಾಜ ಎಸ್ ಬೊಮ್ಮಾಯಿ, ಮುಖ್ಯಮಂತ್ರಿಗಳು**

ಬಹುರಾಷ್ಟ್ರೀಯ ಕಂಪನಿಗಳ ಮುಖ್ಯಸ್ಥರು ಆಗಮಿಸಿದ್ದರು. ಮಾತುಕತೆ ಮುಗಿಯುತ್ತಿದ್ದಂತೆಯೇ ಎರಡು ಕಂಪನಿಗಳು ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಮಾಡಲು ಸಿದ್ಧ ಎಂದು ಘೋಷಣೆ ಮಾಡಿದವು. ರೆನ್ಯೂ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿ ಮತ್ತು ಲುಲೂ ಗ್ರೂಪ್ ರಾಜ್ಯ ಸರ್ಕಾರದ ಜತೆ ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ ಪರಸ್ಪರ ಒಡಂಬಡಿಕೆ ಪತ್ರಗಳಿಗೆ ಸಹಿ ಕೂಡ ಹಾಕಿದವು. ಇದರ ಅರ್ಥ, ಕರ್ನಾಟಕ ಹೂಡಿಕೆದಾರರಿಗೆ ಸ್ವರ್ಗ ಎಂದೆನಿಸಿದೆ. ರಾಜ್ಯ ಸರ್ಕಾರ ಅನುಸರಿಸುತ್ತಿರುವ ಕೈಗಾರಿಕೆ ಸ್ನೇಹಿ ನೀತಿ ಮತ್ತು ಉತ್ತೇಜನ ಕ್ರಮಗಳು ದೊಡ್ಡ ದೊಡ್ಡ ಕಂಪನಿಗಳನ್ನು ಕೈ ಬೀಸಿ ಕರೆಯುತ್ತಿವೆ. ಇದರ ಭಾಗವಾಗಿ ನಿರ್ದಿಷ್ಟವಾಗಿ ಸಾವಿರಾರು ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಮಾಡಲು ಎರಡು ಕಂಪನಿಗಳು ಒಪ್ಪಿಕೊಂಡವು.

ರೆನ್ಯೂ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯೂ ಕರ್ನಾಟಕದಲ್ಲಿ ಮುಂದಿನ 7 ವರ್ಷಗಳ ಅವಧಿಯಲ್ಲಿ ಒಟ್ಟು 50 ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಮಾಡಲಿದೆ. ನವೀಕರಿಸಬಹುದಾದ ಇಂಧನ, ಬ್ಯಾಟರಿ ಸ್ಟೋರೇಜ್, ಗ್ರೀನ್ ಹೈಡ್ರೋಜನ್ ಪವರ್ ಘಟಕಗಳನ್ನು ಸ್ಥಾಪಿಸಲು ಕಂಪನಿ ಉದ್ದೇಶಿಸಿದೆ.

ರೆನ್ಯೂ ಪವರ್ ಕಂಪನಿ ಆರಂಭದ ಎರಡು ವರ್ಷಗಳ ಅವಧಿಯಲ್ಲಿ ಒಟ್ಟು 11900 ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಮಾಡಿ ಯೋಜನೆಗಳಿಗೆ ಚಾಲನೆ ನೀಡಲಿದೆ. ಇದಾದ ಬಳಿಕ ಎರಡನೇ ಹಂತದಲ್ಲಿ ಇನ್ನುಳಿದ ಮೊತ್ತದಲ್ಲಿ ನವೀಕರಿಸಬಹುದಾದ ಇಂಧನ ಘಟಕ, ಗ್ರೀನ್ ಹೈಡ್ರೋಜನ್ ಘಟಕಗಳನ್ನು ಸ್ಥಾಪಿಸುವ ಗುರಿ ಇಟ್ಟುಕೊಳ್ಳಲಾಗಿದೆ.

ಅದೇ ರೀತಿ ಲುಲೂ ಗ್ರೂಪ್ ರಾಜ್ಯದಲ್ಲಿ ಒಟ್ಟು 4 ಕಡೆಗಳಲ್ಲಿ ಶಾಪಿಂಗ್ ಮಾಲ್ ಮತ್ತು ಹೈಪರ್ ಮಾರ್ಕೆಟ್‌ಗಳನ್ನು ಸ್ಥಾಪಿಸಲು 2 ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಮಾಡಲು ಉದ್ದೇಶಿಸಿದೆ. ಅದರ ಜತೆ ರಫ್ತು ಆಧಾರಿತ ಆಹಾರ ಮಳಿಗೆಗಳನ್ನು ಸ್ಥಾಪಿಸುವ ಮೂಲಕ ಒಂದು ಹೆಜ್ಜೆ ಮುಂದೆ ಇಡಲು ನಿರ್ಧರಿಸಿದೆ. ಒಟ್ಟು 52 ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಮಾಡಲು ಈ ಎರಡು ಕಂಪನಿಗಳ ಒಪ್ಪಂದವನ್ನು ಹೊರತುಪಡಿಸಿದರೆ ಇನ್ನೂ ಅನೇಕ ಕಂಪನಿಗಳು ಬಂಡವಾಳ ಹೂಡಿಕೆ ಮಾಡಲು ಮುಂದೆ ಬಂದಿವೆ.

ಮುಂದಿನ ದಿನಗಳಲ್ಲಿ ಕೈಗಾರಿಕೆ ಸ್ಥಾಪನೆಗೆ ಸಂಬಂಧಿಸಿದ ನೀಲನಕ್ಷೆ ಸಿದ್ಧಪಡಿಸಿ ರಾಜ್ಯ ಸರ್ಕಾರವನ್ನು ಸಂಪರ್ಕಿಸಿ ಕೈಗಾರಿಕೆ ಸ್ಥಾಪನೆಗೆ ಆ ಕಂಪನಿಗಳು ಮುಂದಾಗಲಿವೆ. ದಾವೋಸ್‌ನಲ್ಲಿ ಒಪ್ಪಂದ ಮಾಡಿಕೊಂಡ ಎರಡು ಕಂಪನಿಗಳ 52 ಸಾವಿರ ಕೋಟಿ ರೂಪಾಯಿ ಹೂಡಿಕೆಯನ್ನು ಸೇರಿಸಿ ನಾವು ಮಾತುಕತೆ ನಡೆಸಿದ ಕಂಪನಿಗಳಿಂದ ಒಟ್ಟು ಅಂದಾಜು 65 ಸಾವಿರ ಕೋಟಿ ರೂಪಾಯಿ ವೆಚ್ಚದ ಬಂಡವಾಳ ರಾಜ್ಯದಲ್ಲಿ ಹೂಡಿಕೆಯಾಗಲಿದೆ ಎಂಬ ವಿಶ್ವಾಸ ತಮಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದಾವೋಸ್ ಪ್ರವಾಸದ ಬಳಿಕ ಬೆಂಗಳೂರಿನಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

**ಸಹಸ್ರಾರು ಉದ್ಯೋಗ ಸೃಷ್ಟಿ:**

ರಿನ್ಯೂ ಪವರ್ ಕಂಪನಿ 30 ಸಾವಿರ ಹಾಗೂ ಲುಲೂ ಗ್ರೂಪ್ 10 ಸಾವಿರ ನೇರ ಉದ್ಯೋಗ ಸೃಷ್ಟಿಸಲಿವೆ. ಅದರ ಜತೆಗೆ ಪರೋಕ್ಷ ಉದ್ಯೋಗ ಪ್ರಮಾಣ ಕೂಡ ವ್ಯಾಪಕವಾಗಿ ಹೆಚ್ಚಲಿದೆ. ಇದು ರಾಜ್ಯದ ಆರ್ಥಿಕತೆಗೆ ತನ್ನದೇ ಆದ ಕೊಡುಗೆ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹೀಗಾಗಿ ರಾಜ್ಯದಲ್ಲಿ ಮುಂದಿನ ಕೆಲ ವರ್ಷಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗಗಳು ಹೆಚ್ಚಿನ ಪ್ರಮಾಣದಲ್ಲಿ ಹುಟ್ಟಿಕೊಳ್ಳಲಿವೆ ಎಂದರೆ ತಪ್ಪಾಗಲಾರದು.

**ಬಂಡವಾಳ ಹೂಡಿಕೆಗೆ ಆಸಕ್ತಿ ತೋರಿದ ಕಂಪನಿಗಳು:**

ಪ್ರಪಂಚದ ದೊಡ್ಡ ದೊಡ್ಡ ಕಂಪನಿಗಳು, ಕೈಗಾರಿಕೋದ್ಯಮಿಗಳ ಭಾಗವಹಿಸುವಿಕೆಯಿಂದ ದಾವೋಸ್ ವಿಶ್ವ ಆರ್ಥಿಕ ಶೃಂಗ ಸಭೆ ತನ್ನದೇ ಆದ


Downloaded From:www.kpscvaani.com

ಸೀಮೆನ್ಸ್ ಹೆಲ್ದಿನಿಯರ್ಸ್ ಅವರು ಬೆಂಗಳೂರು ನಗರದಲ್ಲಿ ಮ್ಯಾಗ್ನೆಟಿಕ್ ಇಮೇಜಿಂಗ್ ಮತ್ತು ಡಯಾಗ್ನಾಸ್ಟಿಕ್ ಕೇಂದ್ರೀಕೃತವಾದ ಸಂಶೋಧನೆ ಮತ್ತು ಅಭಿವೃದ್ಧಿ ಆರೋಗ್ಯ ಯೋಜನೆಯನ್ನು 1600 ಕೋಟಿ ರೂಪಾಯಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಬಯಸಿದ್ದಾರೆ. ಆಧುನಿಕ ವೈದ್ಯಕೀಯ ಉಪಕರಣಗಳ ಉತ್ಪಾದನೆಗೆ ಸಂಬಂಧಿಸಿದಂತೆ ವಿಶೇಷ ಪ್ರೋತ್ಸಾಹಕಗಳನ್ನು ಒದಗಿಸುವ ಭರವಸೆಯನ್ನು ಸರ್ಕಾರ ನೀಡಿದೆ. ಬಿಯಾಂಡ್ ಬೆಂಗಳೂರು ಯೋಜನೆಯಡಿ ಬೆಂಗಳೂರಿನಿಂದ ಹೊರಗೆ ಇರುವ ತುಮಕೂರು, ಹುಬ್ಬಳ್ಳಿ-ಧಾರವಾಡ, ಮೈಸೂರು ನಗರಗಳಲ್ಲಿ ಹೂಡಿಕೆ ಮಾಡುವ ಕುರಿತು ಸೀಮೆನ್ಸ್ ಕಂಪನಿ ಜತೆ ಮಾತುಕತೆ ನಡೆಸಲಾಗಿದೆ.

ಡಸಾಲ್ಟ್ ಸಿಸ್ಟಮ್ಸ್ ಸಂಸ್ಥೆಯು ರಾಜ್ಯದಲ್ಲಿ ವಿದ್ಯುತ್ ವಾಹನಗಳು ಮತ್ತು ಕೇಂದ್ರ ಉತ್ಪಾದನಾ ತಾಂತ್ರಿಕ ಸಂಸ್ಥೆಯ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಕೈಗಾರಿಕೆ ಹಾಗೂ ಡಿಜಿಟಲ್ ತರಬೇತಿ ಸೇರಿದಂತೆ ರಾಜ್ಯದ ಸ್ಮಾರ್ಟ್ ಸಿಟಿ ಯೋಜನೆಯಡಿ 300 ಕೋಟಿ ರೂಪಾಯಿ ಹೂಡಿಕೆ ಮಾಡಲು ಉತ್ಸುಕತೆ ತೋರಿದೆ.

ಮಹತ್ವ ಹಾಗೂ ವಿಶಿಷ್ಟತೆಯನ್ನು ಹೊಂದಿದೆ. ಈ ಶೃಂಗಸಭೆಯಲ್ಲಿ ಪಾಲ್ಗೊಂಡು ಬಂಡವಾಳ ಆಕರ್ಷಣೆಗೆ ವಿಶ್ವದ ಹಲವಾರು ರಾಷ್ಟ್ರಗಳು, ರಾಜ್ಯಗಳು ತಮ್ಮದೇ ಆದ ಕಾರ್ಯತಂತ್ರವನ್ನು ರೂಪಿಸುತ್ತವೆ. ಆ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ದಾಪುಗಾಲಿಟ್ಟು ಮುಂದೆ ಸಾಗಿದೆ. ಅದರ ಪ್ರತೀಕವಾಗಿ ಹಲವಾರು ಕಂಪನಿಗಳ ಮುಖ್ಯಸ್ಥರ ಜತೆ ಬಂಡವಾಳ ಹೂಡಿಕೆ ಸಂಬಂಧ ಮಹತ್ವದ ಮಾತುಕತೆ ನಡೆದಿದೆ.

ಜ್ಯುಬಿಲಿಯಂಟ್ ಫುಡ್ ವರ್ಕ್ಸ್, ಹಿಟಾಚಿ ಎನರ್ಜಿ, ಸೀಮನ್ಸ್, ನೆಸ್ಲೆ, ಅರ್ಸೆಲಾರ್ ಮಿತ್ತಲ್, ಭಾರ್ತಿ ಎಂಟರ್ ಪ್ರೈಸಸ್, ಡಸಾಲ್ಟ್ ಸಿಸ್ಟಮ್ಸ್, ಅಬ್ ಇನ್ಬೆವ್, ಶ್ನೈಡರ್ ಎಲೆಕ್ಟ್ರಿಕ್ ಕಂಪನಿ, ಅದಾನಿ ಗ್ರೂಪ್, ದಾಲ್ಮಿಯಾ ಸಿಮೆಂಟ್, ಜಾನ್ಸನ್ ಕಂಟ್ರೋಲ್ಸ್, ಹನಿವೆಲ್, ಐಬಿಎಂ, ಐಕಿಯಾ ಸ್ಟೋರ್ಸ್, ಎಕ್ಸಿಸ್ ಬ್ಯಾಂಕ್ ಸೇರಿದಂತೆ ಒಟ್ಟು 25 ಕಂಪನಿಗಳ ಜತೆ ಮಾತುಕತೆ ನಡೆದಿದ್ದು, ಆ ಕಂಪನಿಗಳು ಬಂಡವಾಳ ಹೂಡಿಕೆಗೆ ಆಸಕ್ತಿ ತೋರಿಸಿವೆ. ಮುಂದಿನ ದಿನಗಳಲ್ಲಿ ಈ ಕಂಪನಿಗಳ ಜತೆ ಮಾತುಕತೆ ನಡೆಯಲಿದೆ. ಅವರು ಹೂಡಿಕೆ ಮಾಡುವ ಬಂಡವಾಳ, ಸೃಷ್ಟಿಸುವ ಉದ್ಯೋಗಗಳು ರಾಜ್ಯದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಲಿದೆ.

ದಾವೋಸ್‌ನಲ್ಲಿ ಕೈಗಾರಿಕೋದ್ಯಮಿಗಳಿಗಾಗಿ ಆಯೋಜಿಸಲಾಗಿದ್ದ ಬೆಳಗಿನ ಉಪಹಾರದ ಸಭೆಯಲ್ಲಿ ವಿವಿಧ ಕಂಪನಿಗಳ ಮುಖ್ಯಸ್ಥರು, ಅನಿವಾಸಿ ಭಾರತೀಯ ಉದ್ಯಮಿಗಳು, ಅಮೆರಿಕದ ಇಂಡಿಯಾಸ್ಪೋರಾ, ಸಿಂಗಾಪುರದ ಇಂಡೋರಮಾ, ಹಿಟಾಚಿ ಜಪಾನ್, ವಿಪಿಎಸ್ ಹೆಲ್ತ್ ಕೇರ್ ಸೇರಿದಂತೆ ವಿವಿಧ ಕಂಪನಿಗಳ ಮುಖಂಡರೊಂದಿಗೆ ಸಮಾಲೋಚನೆ ನಡೆಸಲಾಯಿತು. ಈ ಕಂಪನಿಗಳೊಂದಿಗೆ ವಿಜಯಪುರ, ಕಲಬುರಗಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆ, ಮೆಟ್ರೋ ಟ್ರೈನ್ ಕೋಚ್ ನಿರ್ಮಾಣ ಘಟಕ ಹಾಗೂ ಫಾರ್ಮಾ ಕ್ಷೇತ್ರಗಳಲ್ಲಿನ ಹೂಡಿಕೆ ಸಾಧ್ಯತೆಗಳ ಬಗ್ಗೆ ಚರ್ಚೆ ನಡೆಸಲಾಗಿದೆ.

**ಈಸ್ ಆಫ್ ಡುಯಿಂಗ್ ಬಿಸಿನೆಸ್:**

ಕೋವಿಡ್ ನಂತರ ದೇಶದ ಆರ್ಥಿಕತೆಯ ಬಲವರ್ಧನೆಯಲ್ಲಿ ಕರ್ನಾಟಕದ ಪಾತ್ರ ಗಮನಾರ್ಹವಾಗಿದೆ. ಬಂಡವಾಳ ಹೂಡಿಕೆ ಮಾಡಲು ಆಸಕ್ತಿ ತೋರುವ ಕಂಪನಿಗಳಿಗೆ ಅನುಕೂಲವಾಗುವಂತ ಮೂಲಭೂತ ಸೌಕರ್ಯಗಳ ನಿರ್ಮಾಣ, ಉದ್ದಿಮೆ ಸ್ಥಾಪನೆಗೆ ಸರಳ ಪ್ರಕ್ರಿಯೆ ಜತೆ ಈಸ್ ಆಫ್ ಡುಯಿಂಗ್ ಬಿಸಿನೆಸ್‌ಗಾಗಿ ಎಲ್ಲ ಸಹಕಾರದ ಕ್ರಮಗಳನ್ನು ವಹಿಸಲಾಗುತ್ತಿದೆ. ಇದರಿಂದ ಕೋವಿಡ್ ನಂತರ ಕರ್ನಾಟಕದಲ್ಲಿ ಹೂಡಿಕೆಯಾಗುತ್ತಿರುವ ಬಂಡವಾಳ ಗಮನಾರ್ಹವಾಗಿ ಹೆಚ್ಚಿದೆ.

**ಜಗ್ಗಿ ವಾಸುದೇವ್ ಜತೆ ಸಭೆ:**

ಜಗ್ಗಿ ವಾಸುದೇವ್ ಗುರೂಜಿ ಅವರು ಮಣ್ಣು ಉಳಿಸಿ ಅಭಿಯಾನ ಹಮ್ಮಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮಣ್ಣಿನ ಫಲವತ್ತತೆ, ಸಾವಯವ ಅಂಶ ಹಾಗೂ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಕುರಿತು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಜಗ್ಗಿ ವಾಸುದೇವ್ ಅವರ ಜತೆ ದಾವೋಸ್‌ನಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಅವರು ಚರ್ಚೆ ನಡೆಸಿದರು.

ಒಟ್ಟಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ರಾಜ್ಯ ಸರ್ಕಾರವು ದಾವೋಸ್‌ನಲ್ಲಿ ಹೂಡಿಕೆ ಆಕರ್ಷಣೆಯಲ್ಲಿ ಯಶಸ್ವಿಯಾಗಿದೆ. ರಾಜ್ಯಕ್ಕೆ ರೂ. 52 ಸಾವಿರ ಕೋಟಿ ಬಂಡವಾಳ ಹೂಡಿಕೆಯನ್ನು ತರುವ ಮೂಲಕ ಐತಿಹಾಸಿಕ ಒಪ್ಪಂದಗಳಿಗೆ ಸಹಿ ಹಾಕಿರುವುದಷ್ಟೇ ಅಲ್ಲದೆ ಇನ್ನೂ ವಿವಿಧ ಜಾಗತಿಕ ಸಂಸ್ಥೆಗಳು ರಾಜ್ಯದಲ್ಲಿ ರೂ. 59,350 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಹೂಡಲು ಬದ್ಧತೆ ವ್ಯಕ್ತಪಡಿಸಿವೆ.

ಈ ದಾವೋಸ್ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಮುಖ್ಯಮಂತ್ರಿಗಳೊಂದಿಗೆ ರಾಜ್ಯದ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರಾದ ಮುರುಗೇಶ ನಿರಾಣಿ, ಐಟಿ-ಬಿಟಿ ಸಚಿವರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿಗಳಾದ ಡಾ.ಇ.ವಿ.ರಮಣ ರೆಡ್ಡಿ, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳಾದ ಎನ್. ಮಂಜುನಾಥ್ ಪ್ರಸಾದ್, ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ನಿರ್ದೇಶಕರಾದ ಗುಂಜನ್ ಕೃಷ್ಣ ಅವರುಗಳು ಉಪಸ್ಥಿತರಿದ್ದರು.





Downloaded From:www.kpscvaani.com



# ರಾಜ್ಯದ ನೂತನ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ

**ಸರ್ಕಾರದ ಅತ್ಯುನ್ನತ ಹುದ್ದೆಯಾದ ಮುಖ್ಯ ಕಾರ್ಯದರ್ಶಿ ಹುದ್ದೆಗೇರಿದ ಹಿರಿಯ ಐಎಎಸ್ ಅಧಿಕಾರಿ ವಂದಿತಾ ಶರ್ಮಾ.**

ಕರ್ನಾಟಕ ರಾಜ್ಯದ 39 ನೇ ಮುಖ್ಯ ಕಾರ್ಯದರ್ಶಿಯಾಗಿ ಭಾರತೀಯ ಆಡಳಿತ ಸೇವೆಯ ಹಿರಿಯ ಅಧಿಕಾರಿ ವಂದಿತಾ ಶರ್ಮಾ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ಮೇ 31 ರಂದು ಅಧಿಕಾರ ಸ್ವೀಕರಿಸಿದ್ದಾರೆ. ಕರ್ನಾಟಕದ ಮುಖ್ಯ ಕಾರ್ಯದರ್ಶಿ ಹುದ್ದೆಗೇರಿದ ನಾಲ್ಕನೇ ಮಹಿಳೆಯಾಗಿದ್ದಾರೆ. ವಂದಿತಾ ಶರ್ಮಾ. ಪಿ. ರವಿಕುಮಾರ್ ಅವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆ ಕರ್ನಾಟಕ ವೃಂದದ ಭಾರತೀಯ ಆಡಳಿತ ಸೇವೆಯ 1986 ನೇ ಸಾಲಿನ ತಂಡದ ಉತ್ತರಾಧಿಕಾರಿಯಾಗಿ ಆಯ್ಕೆಯಾಗಿದ್ದಾರೆ.

ಹಿಡಿದ ಕೆಲಸವನ್ನು ಸಾಧಿಸುವ ಆಡಳಿತಾಧಿಕಾರಿಯಾಗಿ, ಶಿಕ್ಷಣ, ಮೂಲಭೂತ ಸೌಕರ್ಯ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಅಭಿವೃದ್ಧಿ ಆಯುಕ್ತರಾಗಿ ಸಾಕಷ್ಟು ಕೆಲಸ ಮಾಡಿರುವ ಅನುಭವವುಳ್ಳ ಇವರು ಈ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆಯನ್ನು ತರಲು ಸಾಧ್ಯವಿದೆ ಎಂದು ಈಗಾಗಲೇ ನಿರೂಪಿಸಿದ್ದಾರೆ. ತಮ್ಮ 36 ವರ್ಷಗಳ ಸೇವಾವಧಿಯಲ್ಲಿ ಹಲವಾರು ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿದ ಖ್ಯಾತಿ ಇವರದ್ದು. ಭೂ ಕಂದಾಯ ನಿರ್ವಹಣೆ, ಜಿಲ್ಲಾಡಳಿತ, ಕೃಷಿ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ನಾಗರಿಕ ವಿಮಾನಯಾನ, ಪ್ರಾಥಮಿಕ ಶಿಕ್ಷಣ, ಪ್ರವಾಸೋದ್ಯಮ, ತೋಟಗಾರಿಕೆ, ಹಣಕಾಸು ಇಲಾಖೆಗಳಲ್ಲಿ ಅತ್ಯಂತ ದಕ್ಷತೆಯಿಂದ ಕಾರ್ಯನಿರ್ವಹಿಸಿರುವ ಕೀರ್ತಿಗೆ ಪಾತ್ರರಾಗಿದ್ದಾರೆ. ಕೇಂದ್ರ ಬಾಹ್ಯಾಕಾಶ ಇಲಾಖೆಯಲ್ಲಿಯೂ ಕಾರ್ಯ ನಿರ್ವಹಿಸಿರುವುದು ವಿಶೇಷ.

ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮದ ನೋಡಲ್ ಅಧಿಕಾರಿಯಾಗಿ ನೇಮಕಗೊಂಡು ಈ ಬೃಹತ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಲಸಿಕೆ ನೀಡುವುದರಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿರುವಂತೆ ಮೇಲ್ವಿಚಾರಣೆ ಕೈಗೊಂಡ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ.

ನೇರ ಮತ್ತು ಸ್ಪಷ್ಟ ನಿಲುವಿನ ವಂದಿತಾ ಶರ್ಮಾ ಅವರು ಮೂಲತ: ಪಂಜಾಬ್ ರಾಜ್ಯದವರು. ಮನಃಶಾಸ್ತ್ರದಲ್ಲಿ ಪದವಿಯನ್ನು ಮತ್ತು ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಐಎಎಸ್ ಅಧಿಕಾರಿಗಳ ಸಂಘದ ಗೌರವಾಧ್ಯಕ್ಷರೂ ಆಗಿರುವ ಇವರು ಅತ್ಯಂತ ಕ್ರಿಯಾಶೀಲ, ಪ್ರಾಮಾಣಿಕ ಹಾಗೂ ಸರಳ ವ್ಯಕ್ತಿತ್ವದವರು. ಇವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ರಾಜ್ಯವನ್ನು ಪ್ರಗತಿ ಪಥದಲ್ಲಿ ಮುನ್ನಡೆಸುತ್ತಾರೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ.

ಇದೀಗ ವಂದಿತಾ ಶರ್ಮಾ ಅವರು ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸುವುದರೊಂದಿಗೆ ರಾಜ್ಯದ ಶಕ್ತಿ ಕೇಂದ್ರ ವಿಧಾನಸೌಧದಲ್ಲಿ ಇರುವ ಮೂರು ಪ್ರಮುಖ ಹುದ್ದೆಗಳನ್ನು ಮಹಿಳೆಯರೇ ಅಲಂಕರಿಸಿದಂತಾಗಿದೆ.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ರಾಜ್ಯ ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಹಾಗೂ ರಾಜ್ಯ ವಿಧಾನ ಪರಿಷತ್ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮಿ ಶಕ್ತಿ ಕೇಂದ್ರ ಶಕ್ತಿಯಾಗಿ ಹೊಸ ದಾಖಲೆ ಸ್ಥಾಪಿಸಿದ್ದಾರೆ.

ವಂದಿತಾ ಶರ್ಮಾ ಅವರ ನೇಮಕಾತಿಯಲ್ಲಿ ರಾಜ್ಯ ಸರ್ಕಾರವು ಎಂದಿನಂತೆ ಸೇವಾ ಹಿರಿತನವನ್ನು ಪುರಸ್ಕರಿಸಿದೆ.


Downloaded From:www.kpscvaani.com



# ಅಮೃತ ಸರೋವರ ಯೋಜನೆಯಡಿ ರಾಯಚೂರು ಜಿಲ್ಲೆಯ 75 ಕೆರೆಗಳ ಅಭಿವೃದ್ಧಿ

**ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಪ್ರಯುಕ್ತ ಎಡದೊರೆ ನಾಡು ರಾಯಚೂರಿನಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ 75 ಕೆರೆಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ.**

ರಮೇಶ ಗೌಡೂರು

ಭಾರತ ಸ್ವಾತಂತ್ರ್ಯದ 75 ವರ್ಷಗಳ ಆಚರಣೆಯ ಆಜಾದಿ ಕಾ ಅಮೃತ ಮಹೋತ್ಸವ ಪ್ರಯುಕ್ತ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಅಮೃತ ಸರೋವರ ಯೋಜನೆಯ ಮೂಲಕ ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಅದರಂತೆ ಎಡದೊರೆ ನಾಡು ರಾಯಚೂರು ಜಿಲ್ಲೆಯಲ್ಲೂ ಸಹ ಸರಿ ಸುಮಾರು 75 ಕೆರೆಗಳ ಅಭಿವೃದ್ಧಿಯ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಜಿಲ್ಲೆಯಲ್ಲಿ ಕುಡಿಯುವ ನೀರಿಗಾಗಿ ಕೊಳವೆ ಬಾವಿ ಕೊರೆದರೂ ನೀರು ಸಿಗದು. ಹಾಗಾಗಿಯೇ ಇಲ್ಲಿನ ಕೆರೆಗಳನ್ನು ಅಭಿವೃದ್ಧಿಪಡಿಸಿ ನೀರು ನಿಲ್ಲುವ ಹಾಗೆ ಮಾಡಿದರೆ ಸಾಕು ಬರದನಾಡು ಹಚ್ಚ ಹಸಿರಿನ ನಾಡಾಗಿ ಪರಿವರ್ತನೆಯಾಗಿ, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯೂ ನೀಗುತ್ತದೆ. ಸದ್ಯ ಇದನ್ನು ಮನಗಂಡಿರುವ ಕೇಂದ್ರ ಸರ್ಕಾರವು ಜಿಲ್ಲೆಯಲ್ಲಿ 75 ಕೆರೆಗಳನ್ನು ಅಭಿವೃದ್ಧಿ ಪಡಿಸಲು ಮುಂದಾಗಿದೆ.

ಈಗಾಗಲೇ ಜಿಲ್ಲೆಯಲ್ಲಿರುವ ಕೆಲವು ಕೆರೆಗಳಿಂದ ಹೂಳು ತೆಗೆದು, ಅವುಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಹೊಸ ಕೆರೆಗಳನ್ನು ನಿರ್ಮಿಸಿ, ಅಂತರ್ಜಲವನ್ನು ಇನ್ನಷ್ಟು ಹೆಚ್ಚಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಅಂತರ್ಜಲ ಮಟ್ಟ ಹೆಚ್ಚಾದರೆ ಗ್ರಾಮೀಣ ಭಾಗಗಳಲ್ಲಿ ಜನರು ಎದುರಿಸುತ್ತಿರುವ ತೊಂದರೆ ಶಾಶ್ವತವಾಗಿ ದೂರವಾಗಲಿದೆ. ಜಲ ಸಂರಕ್ಷಣೆಯಿಂದ ಕೃಷಿ ಚಟುವಟಿಕೆಗಳಿಗೆ ಮತ್ತಷ್ಟು ಪ್ರೋತ್ಸಾಹ ಸಿಕ್ಕಂತಾಗುತ್ತದೆ. ಸ್ಥಳೀಯವಾಗಿ ಉದ್ಯೋಗ ಪಡೆದು, ಸ್ವಾವಲಂಬನೆ ಬರುತ್ತದೆ. ಮಳೆಯ ಅವಲಂಬನೆ ದೂರವಾಗುತ್ತದೆ. ಅರಣ್ಯೀಕರಣ ಅಭಿವೃದ್ಧಿ, ಪರಿಸರದಲ್ಲಿ ಸಮತೋಲನ ಉಂಟಾದರೆ ಗ್ರಾಮೀಣ ಜನರ ಆರೋಗ್ಯ ಸುಧಾರಿಸುತ್ತದೆ ಎಂಬ ದೂರದೃಷ್ಟಿಯಿಂದ ಈ ಅಮೃತ ಸರೋವರ ಯೋಜನೆಯನ್ನು ರೂಪಿಸಲಾಗಿದೆ.

ಅಮೃತ ಸರೋವರ ಯೋಜನೆಯಡಿ 75 ಕೆರೆಗಳ ಪೈಕಿ ಪ್ರಥಮ ಹಂತವಾಗಿ



Downloaded From:www.kpscvaani.com

ಆಜಾದಿ ಕಾ ಅಮೃತ ಮಹೋತ್ಸವ ನಿಮಿತ್ತ ಕೇಂದ್ರ ಸರ್ಕಾರ ಅಮೃತ ಸರೋವರ ಯೋಜನೆ ರೂಪಿಸಿದ್ದು, ಇದರಡಿ ಜಿಲ್ಲೆಯಲ್ಲಿ ಕನಿಷ್ಠ 75 ಕೆರೆ ಪುನರ್ ನಿರ್ಮಾಣ ಅಥವಾ ಪುನಶ್ಚೇತನ ಮಾಡಲಾಗುವುದು. 2023ರೊಳಗೆ ಎಲ್ಲಾ ಕೆರೆಗಳ ಅಭಿವೃದ್ಧಿ ಕಾರ್ಯವನ್ನು ಸಂಪೂರ್ಣ ಗುರಿಯನ್ನು ಸಾಧಿಸಲಾಗುವುದಾದರೂ ಇವುಗಳಲ್ಲಿ ಕೆಲವು ಕೆರೆಗಳನ್ನು ಆಗಸ್ಟ್ ತಿಂಗಳಲ್ಲಿ ಪೂರ್ಣಗೊಳಿಸಲಾಗುತ್ತದೆ.

– ನೂರ್ ಜಹರಾ ಖಾನಂ
ಸಿಇಒ, ರಾಯಚೂರು



ಜಿಲ್ಲೆಯಲ್ಲಿ 15 ಕೆರೆಗಳನ್ನು ಆಗಸ್ಟ್ 15ರೊಳಗಾಗಿ ಪೂರ್ಣಗೊಳಿಸಲು ಯೋಜನೆ ರೂಪಿಸಲಾಗಿದೆ.

ಅಂತರ್ಜಲ ಮೂಲಗಳನ್ನು ಅಭಿವೃದ್ಧಿ ಪಡಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಮುಂಬರುವ ದಿನಗಳಲ್ಲಿ ನೀರಿಗಾಗಿ ನಡೆಸುವ ಪೈಪೋಟಿಯನ್ನು ಹೋಗಲಾಡಿಸಲು, ಗಾಮೀಣ ಜಲ ಭದ್ರತೆಗೆ ಧಕ್ಕೆಯಾಗದಂತೆ ವಿಶೇಷವಾಗಿ ರೈತರು ಹಾಗೂ ಮಹಿಳೆಯರ ನೀರಿನ ಬವಣೆಯನ್ನು ಪರಿಹರಿಸುವುದು, ಜಲ ಸಂರಕ್ಷಣೆಯಿಂದ ಕೃಷಿ ಚಟುವಟಿಕೆ, ಅರಣ್ಯೀಕರಣ ಅಭಿವೃದ್ಧಿ ಹಾಗೂ ಪರಿಸರ ಸಮತೋಲನವನ್ನು ರಕ್ಷಿಸಿ ಗ್ರಾಮೀಣ ಭಾಗದ ಜನರ ಆರೋಗ್ಯ ಸುಧಾರಿಸುವುದು ಗ್ರಾಮೀಣ ಜನತೆಗೆ ಉದ್ಯೋಗವಕಾಶವನ್ನು ಕಲ್ಪಿಸುವುದು ಹಾಗೂ ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ಮಾಡುವುದು, ಗ್ರಾಮೀಣ ಸಮುದಾಯದಲ್ಲಿ ಸಮರ್ಪಕ ನೀರಿನ ಸಂರಕ್ಷಣೆ, ಸದ್ಬಳಕೆ ಕುರಿತಂತೆ ಅರಿವು ಮತ್ತು ಜಾಗೃತಿ ಮೂಡಿಸುವುದು ಯೋಜನೆಯ ಆಶಯವಾಗಿದೆ.

**ಯೋಜನೆಯ ಮಾನದಂಡಗಳು:**

ಜಿಲ್ಲೆಯಲ್ಲಿ ಆಯ್ಕೆ ಆಗುವ ಕೆರೆಯ ವಿಸ್ತೀರ್ಣ ಕನಿಷ್ಠ 2.25 ಹೆಕ್ಟೇರ್ ನಿಂದ ಗರಿಷ್ಠ 40 ಹೆಕ್ಟೇರ್ ಒಳಗೆ ಇರಬೇಕು. ಹಾಗೂ ಕನಿಷ್ಠ 4 ಹೆಕ್ಟೇರ್ ನೀರಾವರಿ ಇರುವ ಅಥವಾ ನೀರಾವರಿಯಾಗುವಂತಹ ಕೆರೆಗಳನ್ನು ಆಯ್ಕೆ ಮಾಡಲಾಗುವುದು. ಹೊಸದಾಗಿ ನಿರ್ಮಿಸುವ ಅಮೃತ ಸರೋವರ ಕನಿಷ್ಠ ಒಂದು ಎಕರೆ (0.4 ಹೆಕ್ಟರ್) ಪ್ರದೇಶವನ್ನು ಹೊಂದಿರತಕ್ಕದ್ದು ಮತ್ತು ಸುಮಾರು 10ಸಾವಿರ ಘನ ಮೀಟರ್ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿರಬೇಕು. ಕೆರೆ ನೀರನ್ನು ಅತೀ ಹೆಚ್ಚು ಬಳಕೆ ಮಾಡುವ ಮತ್ತು ಕೆರೆಯ ನೀರಿನ ಮೇಲೆ ಹೆಚ್ಚಿನ ಜನಸಂಖ್ಯೆ ಅವಲಂಬಿತರಾಗಿರುವ ಪ್ರದೇಶಗಳಲ್ಲಿ ಇರುವ ಕೆರೆಯನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ಸಕ್ರಿಯವಾಗಿರುವ ಕೆರೆ ಬಳಕೆದಾರರ ಸಂಘವನ್ನು ಹೊಂದಿರುವ ಅಥವಾ ಈಗಾಗಲೇ ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ರಚನೆಯಾಗಿರುವ ಕೆರೆಗಳಿಗೆ ಆದ್ಯತೆ ನೀಡುವುದು ಯೋಜನೆಯ ಮಾನದಂಡಗಳಾಗಿವೆ.

ಈ ಯೋಜನೆಯ ಅನುಷ್ಠಾನವನ್ನು ಗ್ರಾಮ ಪಂಚಾಯಿತಿಗಳು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) Bhaskaracharya Institute of Space Application and Geomatics-National (BISAG-N) ಗಳು ನಿರ್ವಹಿಸುತ್ತಿದ್ದು, ಕಾಮಗಾರಿಗಳ ಪ್ರಗತಿ ವರದಿಯನ್ನು ಆಯಾ ಮಾಹೆಯ 5ನೇ ತಾರೀಖಿನೊಳಗೆ ನಿಗಧಿತ ನಮೂನೆಯಲ್ಲಿ ತಪ್ಪದೇ ಸರ್ಕಾರಕ್ಕೆ ಸಲ್ಲಿಸುತ್ತವೆ. ಅಲ್ಲದೆ ಪ್ರತಿ 15 ದಿನಕ್ಕೊಮ್ಮೆ ಆಯುಕ್ತಾಲಯಕ್ಕೆ ಅಮೃತ ಸರೋವರ ಕಾರ್ಯಕ್ರಮದ ಪ್ರಗತಿಯನ್ನು ಶೇಕಡಾ ಪ್ರಮಾಣದಲ್ಲಿ ಇಂಡೀಕರಿಸಿ ತಿಳಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ■





Downloaded From:www.kpscvaani.com



# ಅಭಿವೃದ್ಧಿಗೊಂಡು ಕಂಗೊಳಿಸುತ್ತಿರುವ
# ಕಾಳೇನಹಳ್ಳಿ ಅಗ್ರಹಾರದ ಕೆರೆ

**ನಿರ್ಲಕ್ಷ್ಯಕ್ಕೆ ಒಳಗಾಗಿ ತ್ಯಾಜ್ಯಗಳಿಂದ ಮಲಿನಗೊಂಡಿದ್ದ ಕಾಳೇನಹಳ್ಳಿ ಅಗ್ರಹಾರದ ಕೆರೆಯು ಈಗ ಕಣ್ಮನಸೆಳೆಯುವಂತೆ ಅಭಿವೃದ್ಧಿಗೊಂಡಿದೆ.**

ಕೆ. ಎಸ್. ರಾಜಮನ್ನಾರ್

ಬೆಂಗಳೂರಿನ ಬಿಬಿಎಂಪಿ ವ್ಯಾಪ್ತಿಯ ಬೊಮ್ಮನಹಳ್ಳಿ ವಲಯದ ಬನ್ನೇರುಘಟ್ಟ ರಸ್ತೆಯ ಕಾಳೇನ ಅಗ್ರಹಾರ ಕೆರೆಗೆ ಈಗ ಹೊಸ ರೂಪ ಬಂದಿದೆ. ಇದರಿಂದ ಬಡಾವಣೆಗೆ, ಸುತ್ತಮುತ್ತಲ ಪ್ರದೇಶಕ್ಕೆ ಹೊಸ ಲುಕ್ ಬಂದಿದೆ.

ಚುನಾಯಿತ ಪ್ರತಿನಿಧಿಗಳು, ಬಡಾವಣೆಯ ನಾಗರಿಕರು ಮತ್ತು ಬಿಬಿಎಂಪಿ ಅಧಿಕಾರಿಗಳು ಒಟ್ಟಾಗಿ ಸೇರಿ ಬದ್ಧತೆಯಿಂದ ಕೆಲಸ ಮಾಡಿದರೆ, ಅಭಿವೃದ್ಧಿ ವಿಚಾರದಲ್ಲಿ ಗಟ್ಟಿಯಾಗಿ ನಿಂತರೆ ಬೆಂಗಳೂರನ್ನು ಹೇಗೆ ಸುಂದರವಾಗಿ ಕಟ್ಟಬಹುದು ಮತ್ತು ಪರಿಸರವನ್ನು ಯಾವ ರೀತಿ ಉತ್ತಮಗೊಳಿಸಬಹುದು ಎಂಬುದಕ್ಕೆ ಕಾಳೇನ ಅಗ್ರಹಾರ ಕೆರೆಯ ಅಭಿವೃದ್ಧಿಯೇ ಪ್ರತ್ಯಕ್ಷ ಸಾಕ್ಷಿ.

ಕೆಂಪೇಗೌಡರ ನಿರ್ಮಾಣದ ಇತಿಹಾಸವುಳ್ಳ ಬೆಂಗಳೂರು ಸಾವಿರಾರು ಕೆರೆಗಳ ಉಗಮ ತಾಣ. ಒಂದೊಂದು ಕೆರೆಯ ಹಿಂದೆ ಒಂದೊಂದು ದಂತಕತೆಯೇ ಅಡಗಿದೆ. ಬದುಕಿಗೆ ಜಲ ಮೂಲ ಎಷ್ಟು ಅಗತ್ಯ ಎಂಬುದನ್ನು ನಮ್ಮ ನಾಡಿನ ಹಿರಿಯರು ಶತ-ಶತಮಾನಗಳ ಹಿಂದೆಯೇ ಚನ್ನಾಗಿ ಅರ್ಥಮಾಡಿಕೊಂಡಿದ್ದರು. ಅದರಲ್ಲೂ ವಿಶೇಷವಾಗಿ ಕೆರೆಗಳ ಮಹತ್ವ ಅರಿತಿದ್ದರು. ಬೆಳೆಯುತ್ತಿರುವ ಬೆಂಗಳೂರು ಹೊಸ ರೂಪ ಪಡೆದುಕೊಂಡಂತೆ ಕೆರೆಗಳು ಮಾಯವಾಗುತ್ತಿವೆ. ಅವುಗಳ ಜಾಗದಲ್ಲಿ ದಂತ ಗೋಪುರಗಳು ತಲೆಯೆತ್ತಿವೆ.

ಇನ್ನೂ ಉಳಿದಿರುವ ಅಲ್ಪ-ಸ್ವಲ್ಪ ಕೆರೆಗಳನ್ನಾದರೂ ಉಳಿಸಿ-ಬೆಳೆಸಿ, ಅವುಗಳ ಮೂಲಕ ಸದ್ಯದ ಬೆಂಗಳೂರನ್ನು ಸುಂದರಗೊಳಿಸುವ ಮತ್ತು ಉತ್ತಮ ಪರಿಸರ ರೂಪಿಸಿ, ಕಾಪಾಡುವಲ್ಲಿ ನಾಗರಿಕ ಸಾಕ್ಷಿ ಪ್ರಜ್ಞೆ ದಿನೇ ದಿನೇ ಹೆಚ್ಚಾಗುತ್ತಿದೆ. ತಡವಾಗಿಯಾದರೂ ಇಂತಹ ಬೆಳವಣಿಗೆ


Downloaded From:www.kpscvaani.com

ನಿಜಕ್ಕೂ ಸ್ವಾಗತಾರ್ಹ. ಮಳೆ ನೀರಿನ ಮೂಲಕ ಕೆರೆಗಳನ್ನು ತುಂಬಿಸಿ, ಆ ಮೂಲಕ ಬೆಂಗಳೂರಿನ ಸೌಂದರ್ಯ ಹೆಚ್ಚಿಸಬಹುದು, ಜೊತೆಗೆ ಉತ್ತಮ ಪರಿಸರ ಕಾಪಾಡಿಕೊಳ್ಳಬಹುದು ಎಂಬುದು ಅನುಭವಕ್ಕೆ ಬಂದಿರುವ ಸತ್ಯ. ಇದರ ಮೂಲಕ ಅಂತರ್ಜಲಮಟ್ಟ ಹೆಚ್ಚಿಸಬಹುದು ಮತ್ತು ಜೊತೆಗೆ ಜಲ ಮೂಲವನ್ನು ಕಾಪಾಡಿಕೊಳ್ಳಬಹುದು. ಬೊಮ್ಮನಹಳ್ಳಿ ವಲಯದ ಬೇಗೂರು ವಾರ್ಡಿನ ಕಾಳೇನ ಅಗ್ರಹಾರದಲ್ಲಿ 7 ಎಕರೆ 30 ಗುಂಟೆ ಪ್ರದೇಶದಲ್ಲಿ ಈಗ ಅಭಿವೃದ್ಧಿಗೊಂಡ ಕೆರೆ ಜನರ ಕಣ್ಣುಕೋರೈಸುತ್ತಿದ್ದು, ಹಚ್ಚ ಹಸುರಿನ ಪರಿಸರ ಕೈ ಬೀಸಿ ಕರೆಯುತ್ತಿದೆ. ಬೇರೆ ಕೆರೆಗಳಿಗೆ ಇದೊಂದು ರೋಲ್ ಮಾಡಲ್ ಆಗುವಂತಿದೆ.







ಕೆಲ ವರ್ಷಗಳ ಹಿಂದೆ ಈ ಪ್ರದೇಶದಲ್ಲಿ ವಾಸ ಮಾಡುವ ಜನರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದರು. ಕೆರೆಯ ನೀರು ಮಲಿನಗೊಂಡಿತ್ತು. ಸುತ್ತಮುತ್ತಲಿನ ಜನರು ಬೇಡವಾದ ಕಸ-ಕಡ್ಡಿಗಳನ್ನು ತಂದು ಸುರಿದು ಕಸದ ಕೊಂಪೆಯಾಗಿತ್ತು. ಮಲಿನಗೊಂಡ ನೀರಿನಿಂದ ಕೆಟ್ಟ ವಾಸನೆ ಬರುತ್ತಿತ್ತು, ಪರಿಣಾಮ ಬಡಾವಣೆಯ ಜನತೆ ಪಡಬಾರದ ಸಂಕಷ್ಟ ಅನುಭವಿಸುತ್ತಿದ್ದರು. ಕೆರೆಯ ಸುತ್ತಮುತ್ತಲ ಪ್ರದೇಶಗಳು ಒತ್ತುವರಿಯಾಗಿದ್ದವು. ಒಂದು ರೀತಿ ಹೇಳುವವರು ಮತ್ತು ಕೇಳುವವರು ಯಾರು ಇಲ್ಲದಂತಹ ದಾರುಣ ಪರಿಸ್ಥಿತಿ ನಿರ್ಮಾಣವಾಗಿತ್ತು.

ಹೀಗಿದ್ದ ಕೆರೆ ಹೇಗೆ ಕಂಗೊಳಿಸಲು ಸಾಧ್ಯ?, ಯಾವ ರೀತಿ ಮ್ಯಾಜಿಕ್ ಎಂಬ ಅಚ್ಚರಿ ನಿಮಗಾಗಬಹುದು. ಈ ಪ್ರದೇಶದ ಸುತ್ತಮುತ್ತ ಇನ್ನು ಹತ್ತಾರು ಕೆರೆಗಳು ಇದೇ ರೀತಿ ಅತಂತ್ರ ಸ್ಥಿತಿಯಲ್ಲಿವೆ. ಇಂತಹ ಸನ್ನಿವೇಶದಲ್ಲಿ ಕಾಳೇನ ಅಗ್ರಹಾರದ ಕೆರೆಯನ್ನು ಹೇಗಾದರೂ ಮಾಡಿ ಬೆಂಗಳೂರಿನ ರೋಲ್ ಮಾಡೆಲ್ ಕೆರೆಯಾಗಿ ಮಾಡಬೇಕೆಂದು ಮೊದಲು ಸುತ್ತಮುತ್ತಲಿನ ಬಡಾವಣೆಯ ಜನತೆ ಕೆರೆ ಸಂಘದ ಮೂಲಕ ನಿಶ್ಚಯಿಸಿ ಟೊಂಕ ಕಟ್ಟಿದರು. ಆ ನಂತರ ಸಂಸದರು, ಶಾಸಕರು ಮತ್ತು ಬಿಬಿಎಂಪಿ ಅಧಿಕಾರಿಗಳ ಮುಂದೆ ತಮ್ಮ ಅಹವಾಲು ಮಂಡಿಸಿ ಕೆರೆಗೆ ಹೊಸ ಕಾಯಕಲ್ಪ ನೀಡುವ ಸಂಕಲ್ಪ ಮಾಡಿ ಜೊತೆ ಜೊತೆಯಾಗಿ ನಿಂತರು. ಕಳೆದ 2016 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಹಾನಗರ ಪಾಲಿಕೆ ವ್ಯಾಪ್ತಿಗೆ ಕೆರೆ ಹಸ್ತಾಂತರವಾಯಿತು.


ಆದರೆ ಕೆರೆಯನ್ನು ಅಭಿವೃದ್ಧಿಪಡಿಸಲಿಕ್ಕೆ ಬಿಬಿಎಂಪಿಯಲ್ಲಿ ಹಣಕಾಸಿನ ಲಭ್ಯತೆ ಇರಲಿಲ್ಲ. ಇಂತಹ ಸನ್ನಿವೇಶದಲ್ಲಿ ನೆರವಿಗೆ ಬಂದವರು ನಮ್ಮಿಂದಲೇ ಆಯ್ಕೆಯಾಗಿರುವ ರಾಜ್ಯಸಭೆ ಸದಸ್ಯೆ ಹಾಗೂ ಕೇಂದ್ರ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್. ಸಂಸದರ ಸ್ಥಳೀಯ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಕೆರೆ ದತ್ತು ತೆಗೆದುಕೊಳ್ಳುವ ಪ್ರಸ್ತಾವನೆಯನ್ನು ಸ್ವತಃ ಅವರೇ ಬಿಬಿಎಂಪಿಗೆ ಕಳಿಸಿದ್ದರು. ಆ ಸಂದರ್ಭದಲ್ಲಿ ಕಾಳೇನ ಅಗ್ರಹಾರ ಕೆರೆಯನ್ನು ಅಭಿವೃದ್ಧಿಪಡಿಸಲು ಮಹಾನಗರ ಪಾಲಿಕೆ ವಿವರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿದ್ದರೂ ಸಹ ಅದನ್ನು ಕಾರ್ಯಗತ ಮಾಡಲು ಯಾವುದೇ ಹಣಕಾಸಿನ ಲಭ್ಯತೆಯಿರಲಿಲ್ಲ. ಅದೇ ಸಮಯಕ್ಕೆ ಕೇಂದ್ರ ಸಚಿವರಿಂದ ಪ್ರಸ್ತಾವನೆ ಬಂದ ಕಾರಣ, ಕೆರೆ ಅಭಿವೃದ್ಧಿ ಕಾರ್ಯಕ್ಕೆ ಬಿಬಿಎಂಪಿ ಅಧಿಕಾರಿಗಳು ಬಹಳ ಹುಮ್ಮಸ್ಸಿನಿಂದಲೇ ಹೆಜ್ಜೆ ಹಾಕಿದರು. ಕೇಂದ್ರ ಸಚಿವರು ಮತ್ತು ಸ್ಥಳೀಯ ಶಾಸಕ ಎಂ.ಕೃಷ್ಣಪ್ಪ ಅವರು ಕೆರೆ ಅಭಿವೃದ್ಧಿಗೆ ನಿಂತಾಗ ಸ್ಥಳೀಯ ಜನರಿಂದಲೂ ನಿರೀಕ್ಷೆಗೂ ಮೀರಿದ ಸಹಕಾರ ದೊರೆಯಿತು. ಎಲ್ಲರು ಕೈಜೋಡಿಸುತ್ತಿದ್ದಂತೆ ಹಾಗೂ ನೋಡ ನೋಡುತ್ತಿದ್ದಂತೆಯೇ ಕೆರೆ ಸ್ವರೂಪವೂ ಸಹ ಬದಲಾಗಿ ಹೋಯಿತು.



ಮೊದಲು ಕೇಂದ್ರ ಸಚಿವರಿಂದ 75 ಲಕ್ಷ ರೂಪಾಯಿ ಅನುದಾನ



Downloaded From:www.kpscvaani.com




ಬಿಡುಗಡೆಯಾದ ಕೂಡಲೇ ಪಾಲಿಕೆ ಇಂಜಿನಿಯರ್‌ಗಳು ಕಾರ್ಯಪ್ರವೃತ್ತರಾಗಿ, ಕೆರೆಯ ಪ್ರದೇಶದಲ್ಲಿ ತುಂಬಿಕೊಂಡಿದ್ದ ರಾಶಿ–ರಾಶಿ ಕಸ–ಕಡ್ಡಿಗಳನ್ನು ಮೊದಲು ತೆಗೆದು ಹೊರಹಾಕಲಾಯಿತು. ನಂತರ ಎರಡನೇ ಹಂತದಲ್ಲಿ ಕೆರೆಯಲ್ಲಿ ತುಂಬಿದ್ದ ಬಹಳ ದೊಡ್ಡಮಟ್ಟದ ಹೂಳು ತೆಗೆಯುವ ಮೂಲಕ ಆರಂಭಿಕ ಹಂತದಲ್ಲಿ ಕೆರೆಗೆ ಹೊಸ ಸ್ವರೂಪ ನೀಡಲಾಯಿತು. ಈ ಭಾಗದಲ್ಲಿ ಬೆಂಗಳೂರು ಜಲಮಂಡಳಿಯ ಕೊಳವೆ ಮಾರ್ಗ ಹೋಗಿಲ್ಲದ ಕಾರಣ ಸಂಸದರು ಕೊಟ್ಟ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿಯಿಂದಲೇ ಕೊಳಚೆ ನೀರು ಶುದ್ಧೀಕರಣ ಘಟಕ ಪ್ರಾರಂಭಿಸಲಾಯಿತು. ಅದರ ಮೂಲಕ ಚರಂಡಿಗಳಿಂದ ಹರಿದುಬರುವ ನೀರನ್ನು ಶುದ್ಧೀಕರಣ ಮಾಡಿ ಕೆರೆಗೆ ಹರಿಸಲಾಗುತ್ತಿದೆ.

ಮಳೆಗಾಲದಲ್ಲಿ ಮಳೆನೀರು ಕೆರೆಗೆ ಬರುವ ವ್ಯವಸ್ಥೆ ಮಾಡಲಾಗಿದೆ. ಮಳೆಗಾಲ ಮುಗಿದ ನಂತರ ಮೋರಿಗಳಲ್ಲಿನ ಚರಂಡಿ ನೀರನ್ನು ಶುದ್ಧೀಕರಣ ಘಟಕದ ಮೂಲಕ ಸಂಸ್ಕರಣೆ ಮಾಡಿ ಕೆರೆಗೆ ಬಿಡಲಾಗುತ್ತಿದೆ. ಈಗ ಕಾಳೇನ ಅಗ್ರಹಾರ ಕೆರೆ ಹಸಿರು ಪರಿಸರಗಳಿಂದ ನಳನಳಿಸುತ್ತಿದೆ. ಒಂದು ಕಾಲದಲ್ಲಿ ಮೂಗು ಮುಚ್ಚಿಕೊಂಡು ತಿರುಗಾಡುತ್ತಿದ್ದ ಬಡಾವಣೆಯ ಸುತ್ತಮುತ್ತಲ ಜನರು ಈಗ ವಾಯು ವಿಹಾರಕ್ಕಾಗಿ ಕೆರೆ ಪ್ರದೇಶಕ್ಕೆ ಬರುತ್ತಿದ್ದಾರೆ. ಅಕ್ಕ–ಪಕ್ಕದ ಬಡಾವಣೆಗಳಿಗೂ ಕೆರೆ ಒಂದು ರೀತಿ ಮುಕುಟ ಪ್ರಾಯವಾಗಿದೆ. ಸಂಸದರು ಕೊಟ್ಟ ನಿಧಿಯಿಂದ ಆರಂಭಿಕ ಹಂತದಲ್ಲಿ ಕೆರೆ ಅಂಗಳದಲ್ಲಿದ್ದ ಕಸ–ಕಡ್ಡಿಗಳನ್ನು ಸ್ವಚ್ಛಮಾಡಿ ನಂತರ ತುಂಬಿದ್ದ ಹೂಳು ತೆಗೆದು 150 ಕಿಲೋ ಲೀಟರ್ ಸಾಮರ್ಥ್ಯದ ಕೊಳಚೆ ನೀರು ಶುದ್ಧೀಕರಣ ಸಂಸ್ಕರಣಾ ಘಟಕ ಸ್ಥಾಪಿಸಲಾಗಿದೆ.

ಈ ಕಾಮಗಾರಿ ಮುಗಿದ ನಂತರ ಮುಂದಿನ ಕೆಲಸ ಮಾಡಲು ಹಣಕಾಸಿನ ಮುಗ್ಗಟ್ಟು ಮತ್ತೆ ಉಂಟಾದಾಗ ರಾಜ್ಯ ಸರ್ಕಾರ ಕೆರೆ ಅಭಿವೃದ್ಧಿಗೆ ಕೈಜೋಡಿಸಿ ಬಾಕಿ ಉಳಿದಿರುವ ಕಾಮಗಾರಿಗಳನ್ನು




Downloaded From:www.kpscvaani.com

**ಕೇಂದ್ರ ಸಚಿವೆ ಹಾಗೂ ಸಂಸದೆ ನಿರ್ಮಲಾ ಸೀತಾರಾಮನ್ ಅವರು ಕಾಳೇನ ಅಗ್ರಹಾರ ಕೆರೆಯನ್ನು ದತ್ತು ತೆಗೆದುಕೊಂಡು ಅಭಿವೃದ್ಧಿ ಮಾಡಿರುವುದರಿಂದ ಪ್ರೇರೇಪಿತರಾಗಿರುವ ಸ್ಥಳೀಯ ಶಾಸಕರುಗಳು ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ಉಳಿದ ಕೆರೆಗಳನ್ನು ಅಭಿವೃದ್ಧಿ ಮಾಡಲು ಮುಂದಾಗಿದ್ದಾರೆ.**

ಮುಗಿಸಲು 2 ಕೋಟಿ 25 ಸಾವಿರ ರೂಪಾಯಿಗಳನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಿತು. ಮೊದಲ ಕಂತಿನಲ್ಲಿ 75 ಲಕ್ಷ ರೂಪಾಯಿ ನಂತರ ಎರಡನೇ ಕಂತಿನಲ್ಲಿ 150 ಲಕ್ಷ ರೂಪಾಯಿ ನೆರವು ನೀಡುವ ಮೂಲಕ ಕೆರೆಯ ಸುತ್ತ ತಂತಿ ಬೇಲಿ ಹಾಕಲು ಮತ್ತು ಉದ್ಯಾನವನ ಅಭಿವೃದ್ಧಿಪಡಿಸಲು ನೆರವಾಯಿತು. ಹೀಗೆ ಸಂಸದರ ಪ್ರದೇಶಾಭಿವೃದ್ಧಿ ನಿಧಿ ಮತ್ತು ರಾಜ್ಯ ಸರ್ಕಾರದ ವಿಶೇಷ ಅನುದಾನದಿಂದ ಹೂಳುತುಂಬಿ ಹೇಳುವವರು ಮತ್ತು ಕೇಳುವವರಿಲ್ಲದೇ ಹಾಳುಕೊಂಪೆಯಾಗಿದ್ದ ಕೆರೆ ಈಗ ನಳನಳಿಸುವ ಮಟ್ಟಕ್ಕೆ ಬಂದಿದೆ.

ಅಭಿವೃದ್ಧಿಪಡಿಸಿರುವ ಕೆರೆ ಕಾವಲಿಗೆ ಇಬ್ಬರು ಹೋಂಗಾರ್ಡ್‌ಗಳನ್ನು ನಿಯೋಜಿಸಲಾಗಿದೆ. ಅವರು ಪಾಳಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ಕೊಳಚೆ ನೀರು ಶುದ್ಧೀಕರಣ ಘಟಕದ ಕಾರ್ಯಾಚರಣೆ ನೋಡಿಕೊಳ್ಳಲು ಇಬ್ಬರು ಸಿಬ್ಬಂದಿ ಮತ್ತು ಕೆರೆಯ ಭಾಗದಲ್ಲಿ ಕಸ ಮತ್ತು ಪ್ಲಾಸ್ಟಿಕ್ ವಸ್ತುಗಳು ಸೇರದಂತೆ ತಡೆಯಲು ಮತ್ತು ನೋಡಿಕೊಳ್ಳಲು ಮತ್ತಿಬ್ಬರು ಸಿಬ್ಬಂದಿಯನ್ನು ಪಾಲಿಕೆ ವತಿಯಿಂದ ನೇಮಿಸಲಾಗಿದೆ. ಕೆರೆ ನೀರು ಸ್ವಚ್ಛವಾಗಿಡಲು ಮತ್ತು ಅದರಿಂದ ಸ್ವಲ್ಪಮಟ್ಟದ ಆದಾಯಗಳಿಸಲು ಅನುಕೂಲವಾಗುವಂತೆ ಕೆರೆಯಲ್ಲಿ ಮೀನುಸಾಕಾಣಿಕೆಗೆ ಯೋಜನೆ ರೂಪಿಸಲಾಗಿದೆ. ಮೀನುಗಾರಿಕೆ ಇಲಾಖೆಯಿಂದ ಟೆಂಡರ್ ಕರೆಯುವ ಪ್ರಕ್ರಿಯೆ ಇನ್ನಷ್ಟೇ ಆರಂಭವಾಗಬೇಕಿದೆ ಎಂದು ಯೋಜನೆ ಜಾರಿಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಬಿಬಿಎಂಪಿ ಲೇಕ್ ವಿಭಾಗದ ಅಧಿಕಾರಿಗಳು ಹೇಳುತ್ತಾರೆ. ಮೀನು ಸಾಕಾಣಿಕೆಯಿಂದ ಕೆರೆ ಅಭಿವೃದ್ಧಿಗೆ ಬೇಕಾಗುವ ಅಲ್ಪಸ್ವಲ್ಪ (ಆದಾಯ) ಕೆರೆಯಿಂದಲೇ ಸಂಪಾದನೆ ಆಗಲಿದೆ ಎಂಬುದು ಅವರ ಅನುಭವದ ಮಾತು. ಕೆರೆಯಂಗಳದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಶೌಚಾಲಯ ವ್ಯವಸ್ಥೆ ಮಾಡಲಾಗಿದೆ.

ಕಾಳೇನ ಅಗ್ರಹಾರ ಕೆರೆಯಂಗಳದಲ್ಲಿ ಎರಡು ಚಿಕ್ಕ ಕೆರೆ ಮತ್ತು ಪುಟ್ಟಪುಟ್ಟ ಕೆಸರಿನ ಕೊಳಗಳನ್ನು ನಿರ್ಮಿಸಲಾಗಿದೆ. ಮಳೆ-ಗಾಳಿಯಿಂದ ಸಂಗ್ರಹವಾಗುವ ಕಸ-ಕಡ್ಡಿಗಳು ಮತ್ತು ಕೆಸರು ಒಂದು ಕಡೆ ಸಂಗ್ರಹವಾಗಲಿ ಎಂಬ ಕಾರಣದಿಂದ ಕೆಸರಿನ ಹೊಂಡ ನಿರ್ಮಾಣ ಮಾಡಲಾಗಿದೆ. ಇದರಿಂದ ಕೆರೆ ಹೂಳು ತೆಗೆಯುವ ವೆಚ್ಚ ಗಣನೀಯವಾಗಿ ಕಡಿಮೆಯಾಗಲಿದೆ ಮತ್ತು ಮಳೆ ಗಾಳಿಯಿಂದ ಬರುವ ಕಸಕಡ್ಡಿಗಳು ಒಂದು ಕಡೆ ಸೇರುವುದರಿಂದ ಸ್ವಚ್ಛ ಮಾಡಲು ಅನುಕೂಲವಾಗಲಿದೆ.

ಇನ್ನು ಈ ಕ್ಷೇತ್ರದ ಶಾಸಕರು ಕೆರೆ ಅಭಿವೃದ್ಧಿ ವಿಚಾರದಲ್ಲಿ ಸಂಸದರಷ್ಟೇ ಆಸಕ್ತಿ ವಹಿಸಿದ್ದಾರೆ. ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಇನ್ನು ಹಲವು ಕೆರೆಗಳನ್ನು ಅಭಿವೃದ್ಧಿಪಡಿಸಲು ಸಂಕಲ್ಪ ಮಾಡಿದ್ದಾರೆ. ಇದರ ಜೊತೆಗೆ ಕೆರೆ ಅಭಿವೃದ್ಧಿಯ ವಿಚಾರದಲ್ಲಿ ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ನಿಧಿ ಅಡಿ ಹಲವು ಕೆರೆಗಳನ್ನು ಮತ್ತು ಜಲಮೂಲಗಳನ್ನು ರಕ್ಷಣೆ ಮಾಡುತ್ತಿರುವುದು ನಿಜಕ್ಕೂ ಉತ್ತಮ ಬೆಳವಣಿಗೆ. ಇಂತಹ ಸಾಮಾಜಿಕ ಸೇವಾ ಕಾರ್ಯಗಳ ಚಟುವಟಿಕೆ ಇನ್ನೂ ಹೆಚ್ಚಾಗಬೇಕು ಎಂಬುದು ಅವರ ಅಭಿಪ್ರಾಯ.

ಕಾಳೇನ ಅಗ್ರಹಾರ ಕೆರೆ ದತ್ತು ತೆಗೆದುಕೊಳ್ಳುವ ಮೂಲಕ ಕೇಂದ್ರ ಸಚಿವೆ ಹಾಗೂ ಸಂಸದೆ ನಿರ್ಮಲಾ ಸೀತಾರಾಮನ್ ಇತರೆ ಕೆರೆಗಳ ಅಭಿವೃದ್ಧಿಗೂ ಪ್ರೇರಣೆಯಾಗಿದ್ದಾರೆ ಎಂಬುದನ್ನು ಶಾಸಕರು ಸ್ಮರಿಸುತ್ತಾರೆ. ಮುಂಬರುವ ದಿನಗಳಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ಅಕ್ಷಯನಗರ ಕೆರೆ ಅಭಿವೃದ್ಧಿಪಡಿಸಲು ಆರ್ಥಿಕ ನೆರವು ಒದಗಿಸಲಾಗುತ್ತಿದೆ. ತಮ್ಮ ಕ್ಷೇತ್ರದಲ್ಲಿ ಇನ್ನು ಹಲವು ಕೆರೆಗಳ ಅಭಿವೃದ್ಧಿ ವಿಚಾರ ನ್ಯಾಯಾಲಯದಲ್ಲಿದ್ದು ಒಮ್ಮೆ ಪ್ರಕರಣ ಬಗೆಹರಿದ ನಂತರ ಅವುಗಳನ್ನು ಸಹ ಇದೇ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ನೆರವು ನೀಡುವ ಭರವಸೆ ನೀಡಿದ್ದಾರೆ. ವಸಂತಪುರದ ವಲ್ಲಭರಾಯಸ್ವಾಮಿ ದೇವಾಲಯದ ಮುಂದಿನ ಕಲ್ಯಾಣಿಯನ್ನು ಇನ್ಫೋಸಿಸ್ ಫೌಂಡೇಶನ್ ಮುಖ್ಯಸ್ಥರಾಗಿದ್ದ ಸುಧಾಮೂರ್ತಿ ಅವರು ವಿಶೇಷ ಆಸಕ್ತಿ ತೋರಿ ಅಭಿವೃದ್ಧಿಪಡಿಸಿರುವುದನ್ನು ಶಾಸಕರು ಈಗಲೂ ಸ್ಮರಿಸಿಕೊಳ್ಳುತ್ತಾರೆ. ಇದೇ ರೀತಿ ಕಾರ್ಪೊರೇಟ್ ಸಂಸ್ಥೆಗಳು ಬೆಂಗಳೂರಿನ ಅಭಿವೃದ್ಧಿಗೆ ನಿಂತರೆ ನಗರದ ಪರಿಸರವನ್ನು ಮತ್ತಷ್ಟು ಹಸಿರಾಗಿಸಿ, ಸುಂದರಗೊಳಿಸಬಹುದು ಎಂಬ ಅಭಿಪ್ರಾಯವನ್ನು ಶಾಸಕರು ವ್ಯಕ್ತಪಡಿಸುತ್ತಾರೆ.

ಇತ್ತೀಚಿನ ದಿನಗಳಲ್ಲಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಮೂಲಕ ಪರಿಸರ ಕಾಪಾಡುವ ಕೆಲಸ ನಡೆಯುತ್ತಿದೆ. ಕೆರೆ ಎಂಬುದು 84 ಕೋಟಿ ಜೀವರಾಶಿಗಳ ನೆಲೆಯಾಗಬೇಕು. ಕೇವಲ ಮಾನವ, ಕೋತಿ, ನಾಯಿ, ಕಾಗೆ, ಕೋಗಿಲೆಗಳಿಗೆ ಮಾತ್ರ ನೆಲೆಯಾಗಬಾರದು. ಕೆರೆ ಎಂದರೆ ಅದು ಪ್ರಾಕೃತಿಕ ಸೌಂದರ್ಯದಿಂದ ಕೂಡಿರಬೇಕು. ನೀರಿನ ಒಳಗೆ ಜೀವಿಸುವ ಪ್ರಾಣಿಗಳು ಇರಬೇಕು. ನಮ್ಮ ಮಕ್ಕಳನ್ನು ಪ್ರಾಣಿ-ಪಕ್ಷಿ ನೋಡಲೆಂದು ರಂಗನತಿಟ್ಟಿಗೆ ಕರೆದುಕೊಂಡು ಹೋಗುವ ಅವಶ್ಯಕತೆ ಬರಬಾರದು. ಪ್ರತಿಯೊಂದು ಕೆರೆಯೂ ರಂಗನತಿಟ್ಟು ಆಗಬೇಕು. ಪ್ರಾಣಿ ಸಂಕುಲಗಳ ಬೀಡಾಗಬೇಕು. ಆ ನಿಟ್ಟಿನಲ್ಲಿ ಹೆಚ್ಚು ನೈಸರ್ಗಿಕವಾಗಿ ಕೆರೆಗಳನ್ನು ಅಭಿವೃದ್ಧಿಪಡಿಸಬೇಕು. ಮಳೆ ನೀರು ಮತ್ತು ಚರಂಡಿ ನೀರನ್ನು ಬೇರೆ-ಬೇರೆಯಾಗಿ ಸಂಸ್ಕರಣೆ ಮಾಡಿ ಬಿಡುವುದರ ಮೂಲಕ ಕೆರೆಯ ನೀರಿನ ಗುಣಮಟ್ಟ ಸುಧಾರಿಸಬೇಕು. ಕೆರೆ ಆವರಣದಲ್ಲಿ ಗಿಡ-ಮರಗಳ ಜೊತೆಗೆ ಹೂವಿನ ಗಿಡಗಳನ್ನು ಬೆಳೆಸಿದರೆ ಅದರಿಂದ ಪ್ರಾಣಿ-ಪಕ್ಷಿಗಳ ಸಂತತಿ, ಅವುಗಳ ಕಲರವ ಕೆರೆಯ ಸೊಬಗು ಹೆಚ್ಚಲಿದೆ, ಪಕ್ಷಿ ಮಾನವ ಸಂಬಂಧ ಬೆಸೆಯಲಿದೆ ಎಂಬುದು ಅಲ್ಲಿಯ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರ ಅಭಿಪ್ರಾಯವಾಗಿದೆ. ಇದೇ ಅಭಿಪ್ರಾಯ ಎಲ್ಲರಲ್ಲೂ ಕಂಡುಬಂದರೆ ಬೆಂಗಳೂರಿನ ಚಿತ್ರಣವೇ ಬದಲಾಗುವುದರಲ್ಲಿ ಸಂದೇಹವಿಲ್ಲ. ■



Downloaded From:www.kpscvaani.com




## ಮನೆ ಬಾಗಿಲಿಗೆ ಕೌಶಲ್ಯ ಶಿಕ್ಷಣ

# ಸಂಚಾರಿ ಕೌಶಲ್ಯ ರಥಕ್ಕೆ ಚಾಲನೆ

**ಗ್ರಾಮೀಣ ಯುವ ಜನರ ಸ್ವಯಂ ಉದ್ಯೋಗಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಮನೆ ಬಾಗಿಲಿಗೆ ಸಂಚಾರಿ ಕೌಶಲ್ಯ ರಥ ಕಳುಹಿಸಿ ಕೌಶಲ್ಯ ಶಿಕ್ಷಣ ನೀಡುವ ಯೋಜನೆಗೆ ಸರ್ಕಾರ ಚಾಲನೆ ನೀಡಿದೆ.**

ಡಾ. ವರಪ್ರಸಾದ್ ರಾವ್ ಪಿ ವಿ

ನೀವು ಬ್ಯೂಟಿಷಿಯನ್ (ಪ್ರಸಾದನ ಕಲಾವಿದೆ) ಅಥವಾ, ಫ್ಯಾನ್, ಮಿಕ್ಸಿ, ಗ್ಯಾಸ್ ಸ್ಟೌ, ಎಲೆಕ್ಟ್ರಿಕಲ್ ವಸ್ತುಗಳ ರಿಪೇರಿ ಕಲಿತು ಶೀಘ್ರದಲ್ಲಿ ಟೆಕ್ನಿಷಿಯನ್ ಆಗಿ ಉದ್ಯೋಗಾವಕಾಶ ಹೊಂದಬೇಕೆಂಬ ಕನಸಿದೆಯೇ? ಹಾಗಿದ್ದರೆ, ಇನ್ನು ಮುಂದೆ ಸಾವಿರಾರು ರೂಪಾಯಿ ಶುಲ್ಕ ಕಟ್ಟಿ ತರಬೇತಿ ಪಡೆಯಲು ನಗರಕ್ಕೆ ಹೋಗಬೇಕೆಂದೇನೂ ಇಲ್ಲ. ನೀವಿರುವ ಹಳ್ಳಿಗೇ, ಅದು ಮನೆಯ ಮುಂದೆಯೇ ಬಂದು ತಾಂತ್ರಿಕಾ ಕೌಶ್ಯಲ ಶಿಕ್ಷಣವನ್ನು ನೀಡಲು ಬರಲಿದೆ 'ಕೌಶಲ್ಯ ರಥ'.

ರಾಜ್ಯಾದ್ಯಂತ ವಿದ್ಯಾರ್ಥಿಗಳು, ನಿರುದ್ಯೋಗಿಗಳು ಮತ್ತು ಮಹಿಳೆಯರ ಮನೆ ಬಾಗಿಲಿಗೆ ಕೌಶಲ್ಯ ಚಟುವಟಿಕೆಗಳನ್ನು ನೀಡಲು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (ಕೆಎಸ್‌ಡಿಸಿ) "ಕೌಶಲ್ಯ ರಥ" ಎಂಬ ಮೊಬೈಲ್ ಕೌಶಲ್ಯ ಡಿಜಿಟಲ್ ಬಸ್‌ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇತ್ತೀಚೆಗೆ ಚಾಲನೆ ನೀಡಿದರು. ಇದರಿಂದ 2.5 ಲಕ್ಷ ಯುವ ಜನತೆಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ.

ಕೌಶಲ್ಯ ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತದೆ. ವಿಶ್ವದಲ್ಲಿ ಅತಿ ಹೆಚ್ಚು ಯುವಕರಿರುವ ದೇಶ ಭಾರತ. ಸುಮಾರು 46% ರಷ್ಟು ಜನಯುವಕರಿಗೆ ಭವಿಷ್ಯವನ್ನು ನಿರ್ಮಿಸುವ ಸಲುವಾಗಿ ವಿದ್ಯೆ ಮತ್ತು ಕೌಶಲ್ಯ ಎರಡೂ ಇದ್ದರೆ ಉದ್ಯೋಗ ದೊರೆಯುತ್ತದೆ. ದೀನ್ ದಯಾಳ್ ಉಪಾಧ್ಯಾಯ ಅವರ ಹೆಸರಿನಲ್ಲಿ ಕೇಂದ್ರ ಸರ್ಕಾರದ ಕಾರ್ಯಕ್ರಮ ಇದಾಗಿದೆ. ಕರ್ನಾಟಕ ಸರ್ಕಾರ ಸಹ ಕೌಶಲ್ಯಾಭಿವೃದ್ಧಿ ಇಲಾಖೆ ವತಿಯಿಂದ ಕೌಶಲ್ಯಾಭಿವೃದ್ಧಿ ಕೈಗೊಂಡಿದೆ.

ಕೌಶಲ್ಯ ರಥಗಳು ರಾಜ್ಯದ ಪ್ರತಿ ಗ್ರಾಮ ಪಂಚಾಯತ್‌ಗೆ ಸಂಚರಿಸಿ


Downloaded From:www.kpscvaani.com

ಸ್ಥಳದಲ್ಲಿಯೇ ಉಚಿತವಾಗಿ ಎಲೆಕ್ಟ್ರಿಕಲ್ ಟೆಕ್ನಿಷಿಯನ್ ಮತ್ತು ಬ್ಯೂಟಿ ಥೆರಪಿಸ್ಟ್ ಕುರಿತು ಯುವಕ-ಯುವತಿಯರಿಗೆ ಒಂದು ತಿಂಗಳ ಕಾಲ ತರಬೇತಿ ನೀಡಿ ಸರ್ಟಿಫಿಕೇಟ್ ನೀಡಲಾಗುತ್ತಿದೆ. ಇದರಿಂದ ಅವರಿಗೆ ಸ್ವಯಂ ಉದ್ಯೋಗಕ್ಕೆ ಅನುಕೂಲವಾಗಲಿದೆ. ತರಬೇತಿ ಪಡೆದವರು ಗೃಹ ಬಳಕೆಯ ಎಲೆಕ್ಟ್ರಿಕ್ ವಸ್ತುಗಳನ್ನು ರಿಪೇರಿ ಮಾಡಿಕೊಡಬಹುದು.



ಗ್ರಾಮೀಣ ಜನರಿಗೂ ಕೌಶಲ್ಯ ತಲುಪಬೇಕು. ಅಲ್ಲಿನ ಯುವ ಜನರೂ ತಾಂತ್ರಿಕಾ ಕೌಶಲ್ಯ ಶಿಕ್ಷಣ ತರಬೇತಿ ಪಡೆದು ಸ್ವ ಉದ್ಯೋಗದಲ್ಲಿ ತೊಡಗಿಸಿಕೊಂಡು ಬದುಕು ಕಟ್ಟಿಕೊಳ್ಳಬೇಕು ಎಂಬ ಗುರಿ ಇಟ್ಟು ರಾಜ್ಯ ಸರಕಾರವು ಕೌಶಲ್ಯ ನಿಗಮದ ಅಧಿಕಾರಿಗಳ ಜೊತೆ ಸಮಾಲೋಚಿಸಿ ಈ ಯೋಜನೆ ರೂಪಿಸಿದೆ. ರಾಜ್ಯದ ಎಲ್ಲ ಹಳ್ಳಿಗೆ ಕೌಶಲ್ಯ ಬಲ್ಲ ಪರಿಣತರು, ಪರಿಕರಗಳ ಜೊತೆ 'ಕೌಶಲ್ಯ ರಥ'ದಲ್ಲಿ (ಬಸ್) ತೆರಳಿ, ಆಸಕ್ತರಿಗೆ ಉಚಿತವಾಗಿ ತರಬೇತಿ ನೀಡುವುದು ಯೋಜನೆಯ ಉದ್ದೇಶ.

ಕೇಂದ್ರ ಸರ್ಕಾರ 'ಪಂಡಿತ್ ದೀನ್ ದಯಾಳ್ ಯೋಜನೆ'ಯಡಿ ಕೌಶಲ್ಯ ತರಬೇತಿ ನೀಡುತ್ತಿದೆ. ಅದೇ ರೀತಿ ರಾಜ್ಯ ಸರ್ಕಾರ 'ಕೌಶಲ್ಯ ಕರ್ನಾಟಕ ಯೋಜನೆ'ಯಡಿ ಯುವಕ-ಯುವತಿಯರಿಗೆ ಸೂಕ್ತ ತರಬೇತಿ ನೀಡಿ ಸ್ವಾವಲಂಬಿಯನ್ನಾಗಿಸುವ ಪ್ರಯತ್ನ ಮಾಡುತ್ತಿದೆ.

ರಾಜ್ಯದ ಗ್ರಾಮೀಣ ಭಾಗದ ಪ್ರದೇಶದಲ್ಲಿ ವಾಸಿಸುತ್ತಿರುವ ಯುವಜನತೆಗೆ ಕೌಶಲ್ಯ ತರಬೇತಿ ನೀಡಲು ಸಿದ್ಧಗೊಂಡಿರುವ ಸುಸಜ್ಜಿತ "ಕೌಶಲ್ಯ ರಥಗಳಿಗೆ" ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಲಬುರಗಿಯಲ್ಲಿ ಚಾಲನೆ ನೀಡಿದರು. ಕಲಬುರಗಿಯ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಆಯೋಜಿಸಿದ ಕಾರ್ಯಕ್ರಮದಲ್ಲಿ ನಾಲ್ಕು ತರಬೇತಿ ನೀಡುವ ಬಸ್‌ಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಸಕ್ತ ವರ್ಷ 2.5 ಲಕ್ಷ ಯುವ ಜನತೆಗೆ ಕೌಶಲ್ಯ ತರಬೇತಿ ನೀಡುವ ಗುರಿ ಹೊಂದಲಾಗಿದೆ ಎಂದು ತಿಳಿಸಿದ್ದಾರೆ.

ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಯುವ ಜನತೆಯ ಪ್ರಮಾಣ ಶೇ.46 ರಷ್ಟಿದೆ. ಹೀಗಾಗಿ, ಇವರಿಗೆ ಉತ್ತಮ ಶಿಕ್ಷಣ ಮತ್ತು ಕೌಶಲ್ಯ ನೀಡಿ ಉದ್ಯೋಗ ಒದಗಿಸುವುದು ಸರ್ಕಾರದ ಕರ್ತವ್ಯ. ಕೇಂದ್ರ ಸರ್ಕಾರ ಪಂಡಿತ್ ದೀನ್ ದಯಾಳ್ ಯೋಜನೆಯಡಿ ಕೌಶಲ್ಯ ತರಬೇತಿ ನೀಡುತ್ತಿದೆ. ಅದೇ ರೀತಿ ರಾಜ್ಯ ಸರ್ಕಾರದಿಂದಲೂ ಕೌಶಲ್ಯ ಕರ್ನಾಟಕ ಯೋಜನೆಯಡಿ ಯುವಕ-ಯುವತಿಯರಿಗೆ ಸೂಕ್ತ ತರಬೇತಿ ನೀಡಿ ಸ್ವಾವಲಂಬಿಯನ್ನಾಗಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದರು.


ಮುಂದಿನ ದಿನದಲ್ಲಿ ಗ್ರಾಮೀಣ



ಕಳೆದ ಆರ್ಥಿಕ ವರ್ಷದಲ್ಲಿ ಕೌಶಲ್ಯ ತರಬೇತಿ ನೀಡಲು 75 ಸಾವಿರ ಗುರಿ ನೀಡಲಾಗಿತ್ತು. 2022-23ನೇ ಸಾಲಿಗೆ 2.5 ಲಕ್ಷ ಜನರಿಗೆ ಕೌಶಲ್ಯತೆ ನೀಡುವ ಗುರಿ ಹೊಂದಲಾಗಿದೆ. ಶೇ.75 ರಷ್ಟು ಯುವ ಸಮುದಾಯ ಕೌಶಲ್ಯದಿಂದ ವಿಮುಖರಾಗಿದ್ದು, ಅವರೆಲ್ಲರಿಗೂ ಶಿಕ್ಷಣ, ಕೌಶಲ್ಯ ಹಾಗೂ ಜೀವನೋಪಾಯದ ತರಬೇತಿ ನೀಡುವ ಸಂಕಲ್ಪ ಮಾಡಿದ್ದೇವೆ. ಸ್ವ-ಸಹಾಯ ಸಂಘಗಳಿಗೆ 500 ಕೋಟಿ ರೂ. ನೀಡಲಾಗಿದೆ. ಇದಲ್ಲದೆ ಕೆ.ಜಿ.ಟಿ.ಟಿ.ಐ, ಜಿ.ಟಿ.ಟಿ.ಸಿ., ಐ.ಟಿ.ಐ, ಪಾಲಿಟೆಕ್ನಿಕ್ ಮೂಲಕವು ಸಹ ರಾಜ್ಯದಲ್ಲಿ ಲಕ್ಷಾಂತರ ಯುವಜನತೆಗೆ ಕೌಶಲ್ಯ ತರಬೇತಿ ನೀಡಲಾಗುತ್ತಿದೆ.

**ಡಾ. ಸಿ.ಎನ್.ಅಶ್ವಥ್ ನಾರಾಯಣ**
ಸಚಿವರು ಉನ್ನತ ಶಿಕ್ಷಣ, ಐ.ಟಿ-ಬಿ.ಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ


Downloaded From:www.kpscvaani.com




ಭಾಗದಲ್ಲಿ ಟ್ರಾನ್ಸ್ ಫಾರ್ಮರ್ (ಟಿಸಿ) ಅನ್ನು ಸಹ ಸ್ಥಳದಲ್ಲಿಯೇ ಯುವಕರು ದುರಸ್ತಿ ಮಾಡುವಂತ್ತಾಗಲು ಅಗತ್ಯ ಕೌಶಲ್ಯ ತರಬೇತಿ ನೀಡಬೇಕು ಎಂದು ಸ್ಥಳದಲ್ಲಿದ್ದ ನಿಗಮದ ಅಧಿಕಾರಿಗಳಿಗೆ ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ. ಇದರಿಂದ ರೈತಾಪಿ ವರ್ಗದ ಜನರಿಗೆ ತುಂಬಾ ಅನುಕೂಲವಾಗಲಿದೆ.

ಕೇಂದ್ರ ಸರ್ಕಾರದ ಸಂಕಲ್ಪ ಕಾರ್ಯಕ್ರಮದ ಅಡಿಯಲ್ಲಿ ಸ್ಕಿಲ್ ಆನ್ ವೀಲ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತರಲಾಗುತ್ತಿದೆ. ಒಟ್ಟಾರೆ ಪ್ರತಿ ಅಭ್ಯರ್ಥಿಗೆ 208 ಗಂಟೆಗಳ ತರಬೇತಿ ಅವಧಿಯಲ್ಲಿ ಪ್ರತಿ ಗಂಟೆ ತರಬೇತಿಗೆ 42 ರೂ. ವೆಚ್ಚವಾಗಲಿದೆ. ಸಾಮಾನ್ಯ ಎಲೆಕ್ಟ್ರಿಷಿಯನ್ ಹಾಗೂ ಸಹಾಯಕ ಸೌಂದರ್ಯ ಚಿಕಿತ್ಸಕ ಕೋರ್ಸ್ ತರಬೇತಿಗೆಂದು ಎರಡು ಸಂಸ್ಥೆಗಳ ಜೊತೆ ಕೌಶಲ್ಯಾಭಿವೃದ್ಧಿ ನಿಗಮ ಒಪ್ಪಂದ ಮಾಡಿಕೊಂಡಿದೆ. ತರಬೇತಿ ಮುಕ್ತಾಯದ ಬಳಿಕ ಯುವಕ ಯುವತಿಯರು ಆ ಕೋರ್ಸ್‌ನಲ್ಲಿ ಏನು ಕಲಿತಿದ್ದಾರೆಂಬುದನ್ನು ಪರಿಶೀಲಿಸಿ ಅವರಿಗೆ ಪ್ರಮಾಣಪತ್ರ ನೀಡಲಾಗುವುದು.

ರಾಜ್ಯದ ಪ್ರತಿ ಹಳ್ಳಿಗೆ ತೆರಳಲಿರುವ ಈ 'ಕೌಶಲ್ಯ ರಥ', ಸಹಾಯಕ ಬ್ಯೂಟಿ ಥೆರಪಿಸ್ಟ್ ಮತ್ತು ಎಲೆಕ್ಟ್ರಿಕಲ್ ಟೆಕ್ನಿಷಿಯನ್ ಎಂಬ ಎರಡು ವಿಧದ ಕೌಶಲ ತರಬೇತಿಯನ್ನು ತಲಾ 208 ಗಂಟೆ ಅವಧಿಯಲ್ಲಿ ನೀಡಲಿದೆ. ನಿತ್ಯ 8 ಗಂಟೆ ಅವಧಿ ತರಬೇತಿ ನೀಡಲಿದೆ. 18 ರಿಂದ 35 ವಯೋಮಾನದ ಕನಿಷ್ಠ 8ನೇ ತರಗತಿ ಓದಿದವರು ಈ ತರಬೇತಿ ಪಡೆಯಬಹುದು. ಹೆಸರು ನೋಂದಾಯಿಸಿದವರನ್ನು ತಲಾ 15 ಮಂದಿಯ ತಂಡಗಳಾಗಿ ಮಾಡಿ ಒಂದು ತಿಂಗಳು ತರಬೇತಿ ನೀಡಲಾಗುವುದು.

**'ಎಲೆಕ್ಟ್ರಿಕಲ್ ಟೆಕ್ನಿಷಿಯನ್' (Eletrical Technician) ಈ ಕೆಳಕಂಡ ಅಂಶಗಳಡಿ ತರಬೇತಿ ನೀಡಲಾಗುತ್ತದೆ :**

- ಮನೆಗಳಲ್ಲಿನ ವಿದ್ಯುತ್ ಯಂತ್ರೋಪಕರಣಗಳನ್ನು ರಿಪೇರಿ ಮಾಡುವುದು
- ಕೃಷಿ ಪಂಪ್‌ಸೆಟ್‌ಗಳನ್ನು ರಿಪೇರಿ ಮಾಡುವುದು
- ಸಣ್ಣಮಟ್ಟ ವಿದ್ಯುತ್ ಕೆಲಸಗಳ ನಿರ್ವಹಣೆ ಮಾಡುವುದು
- ದೈನಂದಿನ ಬಳಕೆಯ ಸಾಧನಗಳನ್ನು ಸರಿಪಡಿಸುವುದು
- ದೋಷಯುಕ್ತ ಬಲ್ಬ್‌ಗಳು, ಟ್ಯೂಬ್ ಲೈಟ್, ಎಲ್‌ಇಡಿ ಬಲ್ಬ್‌ಗಳು, ಸ್ವಿಚ್‌ಗಳು ಮತ್ತು ಸರ್ಕ್ಯೂಟ್ ಬ್ರೇಕರ್‌ಗಳನ್ನು ಸೂಕ್ತ ರೇಟಿಂಗ್‌ಗಳೊಂದಿಗೆ ಬದಲಾಯಿಸುವುದು.
- ಐರನ್ ಬಾಕ್ಸ್, ಮಿಕ್ಸರ್, ಫ್ಯಾನ್, ಗ್ಯಾಸ್‌ಸ್ಟೌವ್‌ಗಳಂತಹ ಸಲಕರಣೆಗಳನ್ನು ರಿಪೇರಿ ಮಾಡುವುದು.
- ತಜ್ಞರ ಮೇಲ್ವಿಚಾರಣೆಯಲ್ಲಿ ಅಥವಾ ಅವರ ಮಾರ್ಗದರ್ಶನದಲ್ಲಿ ಹೊಸ ವಿದ್ಯುತ್ ಸ್ಥಾಪನೆಯನ್ನು ನಿರ್ವಹಿಸುವುದು.

**ಬ್ಯೂಟಿ ಅಂಡ್ ವೆಲ್‌ನೆಸ್ ಥೆರಪಿಸ್ಟ್ (Beauty And Wellness Therapist) ಈ ಕೆಳಕಂಡ ಅಂಶಗಳಡಿ ತರಬೇತಿ ನೀಡಲಾಗುತ್ತದೆ :**

- ಚರ್ಮದ ಆರೈಕೆ, ಮೆನಿಕ್ಯೂರ್, ಪೆಡಿಕ್ಯೂರ್, ಕೇಶಲಂಕಾರಗಳಂತಹ ಸೇವೆಗಳ ತರಬೇತಿ.
- ಮಹಿಳೆಯರು ಸೌಂದರ್ಯಕ್ಕೆ ಹೆಚ್ಚಿನ ಒತ್ತು ನೀಡುವುದರಿಂದ ಐಬ್ರೋ, ಫೇಶಿಯಲ್, ಬ್ಲೀಚ್, ವ್ಯಾಕ್ಸಿಂಗ್ ಸೇವೆಗಳ ತರಬೇತಿ.
- ತಲೆ ಕೂದಲಿಗೆ ಮೆಹಂದಿ ಹಚ್ಚುವುದು.

ನುರಿತ ತಂತ್ರಜ್ಞರಿಂದ ತರಬೇತಿಯನ್ನು ಕೊಡಿಸಿ ಯುವಜನರನ್ನು ಸ್ವಯಂ ಉದ್ಯೋಗಿಗಳನ್ನಾಗಿ ಮಾಡುವ ಗುರಿ ಹೊಂದಿದ್ದು, ಇದರೊಂದಿಗೆ ಯುವಕ/ ಯುವತಿಯರು ತಮ್ಮ ಜೀವನೋಪಾಯವನ್ನು ಗಳಿಸುವಂತೆ ಮಾಡುವಲ್ಲಿ "ಸ್ಕಿಲ್ ಆನ್ ವ್ಹೀಲ್ (ಸಂಚಾರಿ ಕೌಶಲ್ಯ ರಥ)" ತರಬೇತಿಯು ಸಹಕಾರಿಯಾಗುತ್ತಿದೆ. ಮುಕ್ತ ಪ್ರಶ್ನೆಗಳನ್ನು ಕೇಳುವುದರ ಮೂಲಕ ಸಂದರ್ಶನವನ್ನು ನಡೆಸಿ ಅಭ್ಯರ್ಥಿಗಳನ್ನು ನೋಂದಾಯಿಸಿಕೊಳ್ಳಲಾಗುವುದು.

ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್
https://skillconnect.kaushalkar.com
ಸಂಪರ್ಕಿಸಬಹುದಾಗಿದೆ.


Downloaded From:www.kpscvaani.com




# ಜನ ನೀರಿಗೆ ಮೊದಲು ಗೌರವ ಕೊಡುವುದನ್ನು ಕಲಿಯಬೇಕು!

**ಸುಮಾರು ೩೮ ವರ್ಷಗಳ ಕಾಲ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿರುವ ಹಿರಿಯ ವಿಜ್ಞಾನಿ ಎ.ಆರ್.ಶಿವಕುಮಾರ್ ಅವರಿಗೆ ಸದಾ ಪ್ರಕೃತಿ ಧ್ಯಾನ. ಮಳೆ ನೀರು ಸುಗ್ಗಿ, ಸೌರಶಕ್ತಿಯ ಪರಿಣಾಮಕಾರಿ ಬಳಕೆ, ಪ್ರಕೃತಿಯೊಂದಿಗೆ ಸಹಬಾಳ್ವೆ ನಡೆಸುತ್ತಾ ಸುಸ್ಥಿರವಾದ ಬದುಕನ್ನು ಹೇಗೆ ನಡೆಸಬೇಕು ಎಂಬುದಕ್ಕೆ ಅವರು ಎಲ್ಲರಿಗೂ ಮಾದರಿ. ಅವರೊಂದಿಗೆ ನಡೆಸಿದ ಈ ಬಾರಿಯ ಮಾತು-ಮಂಥನ ಇಲ್ಲಿದೆ.**

ಮಂಜುನಾಥ್ ಚಾಂದ್

## ವಿಜ್ಞಾನಿ ಎ.ಆರ್.ಶಿವಕುಮಾರ್ ಸಂದರ್ಶನ

**ಮಳೆಗಾಲ ಶುರುವಾಗಿದೆ. ಇನ್ನೇನು ಮೂರು ತಿಂಗಳು ಮಳೆ ಬೀಳಲಿದೆ. ಹೀಗೆ ಭೂಮಿಗೆ ಬಿದ್ದ ಮಳೆ ನೀರನ್ನು ಕೊಯ್ಲು ಮಾಡುವುದು ಹೇಗೆ?**

ನಾನಿದನ್ನು ಮಳೆ ಸುಗ್ಗಿ ಎಂದು ಕರೆಯುತ್ತೇನೆ. ನಮಗೆ ಸಂಪತ್ತನ್ನು ಕೊಡುವಂತಹ ನೈಸರ್ಗಿಕ ಸಂಪನ್ಮೂಲವಿದು. ಮಳೆ ಋತುವಿಗೆ ತಕ್ಕ ಹಾಗೆ ಎಲ್ಲಾ ಕಡೆ ಬರುತ್ತದೆ. ಈ ಮಳೆ ನೀರಿಗಿಂತ ಶುದ್ಧವಾದ ನೀರು ಪ್ರಪಂಚದಲ್ಲಿ ಇನ್ಯಾವುದೂ ಇಲ್ಲ. ನಾವು ಭೂಮಿಯ ಮೇಲೆ ಎಷ್ಟೇ ಕಲುಷಿತ ಮಾಡಿದರೂ ಕೂಡ ಅವೆಲ್ಲವನ್ನೂ ತೊಳೆದು ಹಾಕುವ ಸಾಮರ್ಥ್ಯವಿರುವುದು ಮಳೆ ನೀರಿಗೆ ಮಾತ್ರ. ಇದಕ್ಕಿಂತ ಸುಲಭವಾದ, ಪರಿಸರ ಸ್ನೇಹಿಯಾದ, ನೀರಿಗೆ ಪರ್ಯಾಯವಾದ ದಾರಿನೇ ಇಲ್ಲ. ಬೇರೆ ಯಾವುದೇ ನೀರನ್ನು ತೆಗೆದುಕೊಳ್ಳಿ, ನದಿ, ಕೊಳ್ಳ, ಬಾವಿ, ಬಾಟಲಿ ನೀರಾಗಲಿ ಎಲ್ಲದಕ್ಕೂ ಮಳೆ ನೀರೇ ಮೂಲ. ಹೀಗೆ ಬಿದ್ದ ಮಳೆ ನೀರು ಹಳ್ಳಕೊಳ್ಳ ಎಲ್ಲೆಲ್ಲೋ ಹರಿದು ಲವಣಾಂಶಗಳು ಸೇರಿಕೊಂಡು, ಕಲುಷಿತಗೊಂಡು ಮತ್ತೆ ಅದು ನಮ್ಮನ್ನು ಸೇರುವುದಕ್ಕೆ ಬದಲಾಗಿ ಅದು ಎಲ್ಲಿ ಬೀಳುತ್ತದೋ ಅಲ್ಲೇ ಹಿಡಿದು ಬಳಸಿಕೊಳ್ಳುವುದು ನಮ್ಮ ಜಾಣತನ. ನಮ್ಮ ಸೂರಿನ ಮೇಲೆ ಬಿದ್ದ ನೀರನ್ನು ನಾವೇ ಬಳಸಿಕೊಂಡು ಮಿಕ್ಕುಳಿದದ್ದನ್ನು ಭೂಮಿಗೆ ಇಂಗಿಸಿದರೆ ಬೇರೆ ಕಡೆಯಿಂದ ನೀರನ್ನು ತಂದು ಬಳಸುವ ಪ್ರಮೇಯವೇ ಉದ್ಭವಿಸುವುದಿಲ್ಲ.

**ಹೀಗೆ ಮಾಡುವುದರಿಂದ ಒಂದು ಕುಟುಂಬ ವರ್ಷ ಪೂರ್ತಿ ಮಳೆ ನೀರನ್ನೇ ಅವಲಂಬಿಸಬಹುದೇ?**

ನಿಶ್ಚಿತವಾಗಿ. ಸಾಮಾನ್ಯವಾಗಿ ಒಂದು ಕಡೆ ಬೀಳುವ ಮಳೆ ನೀರು ಆ ಒಂದು ಜಾಗಕ್ಕೆ, ಸಂಸಾರಕ್ಕೆ, ವ್ಯವಸ್ಥೆಗೆ, ವ್ಯವಸಾಯಕ್ಕೆ ಸಾಕಾಗುವಷ್ಟಿದೆ. ನಮ್ಮ ಬೆಂಗಳೂರನ್ನೇ ತೆಗೆದುಕೊಳ್ಳಿ, ಈ ನಗರ ಒಂದು ಎತ್ತರದ ಪ್ರದೇಶದಲ್ಲಿದೆ. ಇಲ್ಲಿ ಸಾಧಾರಣವಾಗಿ ಒಂದು


Downloaded From:www.kpscvaani.com

**ನಿಮ್ಮ ಮನೆಯಲ್ಲಿ ಕುಡಿಯುವ ನೀರಿನ ಸಂಸ್ಕರಣೆಗೆ ವಿಶಿಷ್ಟವಾದ ವಿಧಾನವನ್ನು ಬಳಸಿದ್ದೀರಿ, ಅದರ ಬಗ್ಗೆ ಸಲ್ಪ ವಿವರಿಸಿ.**

ನಮ್ಮ ಮನೆಯಲ್ಲಿ ಯಾವುದೇ ಆರ್.ಓ. ಮೆಷಿನ್ ಆಗಲಿ, ಯೂವಿ ಫಿಲ್ಟರ್ ಆಗಲಿ ಇಲ್ಲ. ನಾವೇ ಒಂದು ವಾಟರ್ ಫಿಲ್ಟರ್ ಕಂಡುಹಿಡಿದಿದ್ದೇವೆ. ಎ4 ಗಾತ್ರದ ಮತ್ತು ಅಷ್ಟೇ ತೆಳ್ಳಗಿನ ಬೆಳ್ಳಿಯ ಶೀಟ್‌ನ್ನು ನೀರು ತುಂಬಿದ ಪಾತ್ರೆಯ ಒಳಗೆ ಹಾಕಿ ಬೆಳಕು ಕಡಿಮೆ ಇರುವ ಜಾಗದಲ್ಲಿ 10 ಗಂಟೆಗಳ ಕಾಲ ಇಡಬೇಕು. ಅದಕ್ಕೆ ಮಳೆ ನೀರು, ಬಾವಿ ನೀರು, ಕಾವೇರಿ ನೀರನ್ನಾಗಲಿ ಬಳಸಬಹುದು. ಬ್ಯಾಕ್ಟಿರಿಯಾ ಸಿಲ್ವರ್ ಅಯಾನ್ ಜೊತೆ ಸಂಪರ್ಕಕ್ಕೆ ಬಂದ ತಕ್ಷಣ ಸತ್ತು ಹೋಗುತ್ತದೆ. ನೀರು ಝೀರೋ ಬ್ಯಾಕ್ಟೀರಿಯಾ ಆಗುತ್ತದೆ. ನೀರಿನ ಬಣ್ಣ, ರುಚಿ ಇನ್ನಿತರ ಯಾವ ಗುಣವೂ ಬದಲಾಗುವುದಿಲ್ಲ. ಇದಕ್ಕಿಂತ ಪರಿಶುದ್ಧ ನೀರು ಬೇಕೇ? ಈ ನೀರನ್ನು ನಾವು ಮನೆ ಮಂದಿ ಎಲ್ಲ ಕಳೆದ 25 ವರ್ಷಗಳಿಂದ ಕುಡಿಯುತ್ತಿದ್ದೇವೆ. ಇದಕ್ಕೆ ಬೇಕಾಗಿರುವುದು ಆರಂಭಿಕ ಹೂಡಿಕೆ ಅಷ್ಟೇ. ಪರಿಶುದ್ಧ ಬೆಳ್ಳಿ ತಗಡನ್ನು ಬಳಸಬೇಕು. ಸತತ ಹತ್ತು ಗಂಟೆ ಅದು ನೀರಿನಲ್ಲಿರಬೇಕು. 10 ಗಂಟೆ ಬಳಿಕ ನೀರನ್ನು ಬದಲಿಸಿ ಇನ್ನೊಂದು ಪಾತ್ರೆಗೆ ಹಾಕಿಕೊಳ್ಳಬಹುದು. 15 ದಿನಗಳಿಗೊಮ್ಮೆ ಬೆಳ್ಳಿ ತಗಡನ್ನು ಆಚೆ ತೆಗೆದು ನಲ್ಲಿ ನೀರಿನ ಕೆಳಗಡೆ ತೊಳೆಯುತ್ತೇವೆ. ಅದಕ್ಕೆ ಯಾವುದೇ ಸಾಬೂನು, ರಾಸಾಯನಿಕ ಬಳಸಬೇಕಾಗಿಲ್ಲ. ಬೆಳ್ಳಿ ಯಾವತ್ತೂ ನೀರಿನಲ್ಲಿ ಕರಗುವುದಿಲ್ಲ. ಬ್ಯಾಕ್ಟಿರಿಯಾಗೆ ಅದು ವಿಷ.






ವರ್ಷಕ್ಕೆ 40 ಇಂಚು ಮಳೆ ಬೀಳುತ್ತದೆ. 1000 ಮಿ.ಮೀ.ನಷ್ಟು ಮಳೆಯಾಗುತ್ತದೆ. 2400 ಅಡಿ ವಿಸ್ತೀರ್ಣದ ನಿವೇಶನದಲ್ಲಿ ವರ್ಷಕ್ಕೆ ಸರಾಸರಿ 2ರಿಂದ 2.20 ಲಕ್ಷ ಲೀಟರ್ ಮಳೆ ಸುರಿಯುತ್ತದೆ. ಒಂದು ಸಂಸಾರದ ಬಳಕೆಗೆ ಬೇಕಾಗಿದ್ದು 1.50ಲಕ್ಷದಿಂದ 1.80 ಲಕ್ಷ ಲೀಟರ್ ನೀರು ಮಾತ್ರ. ಹಾಗಾಗಿ ಬಿದ್ದ ಮಳೆಯನ್ನು ಹಿಡಿದಿಟ್ಟುಕೊಂಡರೆ ಸಮಸ್ಯೆಯೇ ಇಲ್ಲ. ಬೆಂಗಳೂರು ವರ್ಷವಿಡೀ ಮಳೆ ಬೀಳುವ ವಾತಾವರಣವನ್ನು ಹೊಂದಿದೆ. ಬೇಸಿಗೆ, ಚಳಿಗಾಲ, ಮಳೆಗಾಲ, ಹಿಂಗಾರು–ಮುಂಗಾರು ತೆಗೆದುಕೊಳ್ಳಿ, ಎಲ್ಲ ಕಾಲದಲ್ಲಿಯೂ ಇಲ್ಲಿ ಮಳೆ ಬೀಳುತ್ತಲೇ ಇರುತ್ತದೆ. ಹಾಗಾಗಿ ಮಳೆ ನೀರ ಸುಗ್ಗಿ ಮಾಡುವವರಿಗೆ ಬೆಂಗಳೂರು ಪ್ರಶಸ್ತವಾಗಿದೆ. ಇದಕ್ಕೆ ಕಳೆದ ನೂರು ವರ್ಷಗಳ ಅಂಕಿ–ಅಂಶವಿದೆ.

**ಆದರೆ ಈ ಮಳೆ ನೀರನ್ನು ಜನಸಾಮಾನ್ಯರು ಹಿಡಿದಿಟ್ಟುಕೊಳ್ಳುವ ಬಗೆ ಹೇಗೆ? ಅದರಲ್ಲಿ ನಾವು ಸೋತಿದ್ದೇವಾ?**

ಮಳೆ ನೀರು ಹಿಡಿದಿಟ್ಟುಕೊಳ್ಳುವಲ್ಲಿ ಸೋತಿಲ್ಲ. ವಾಸ್ತವವಾಗಿ ಮಳೆ ನೀರನ್ನು ಹಿಡಿದಿಟ್ಟುಕೊಳ್ಳುವುದು ಮನುಷ್ಯನಿಗೆ ತಲೆತಲಾಂತರದಿಂದ ಬಂದಿದೆ. ನಮ್ಮ ನಾಗರಿಕತೆ ಆರಂಭವಾಗಿದ್ದೇ ಮಳೆ ನೀರು ಸಂಗ್ರಹವಿರುವ ಜಾಗದಿಂದ. ಕೆರೆಕಟ್ಟೆ, ಬಾವಿ, ನದಿಗಳು ಇರುವಲ್ಲೇ ನಮ್ಮ ನಾಗರಿಕತೆ ಹುಟ್ಟಿಕೊಂಡಿದೆ. ಹಾಗಾಗಿ ಹೇಗೆ ಹಿಡಿದಿಟ್ಟುಕೊಳ್ಳುವುದು ಎನ್ನುವುದು ಆಗಿನಿಂದಲೂ ನಮಗೆ ಗೊತ್ತಿದೆ. ಈಗ ನಮ್ಮ ತಂತ್ರಜ್ಞಾನ, ಮನೆಯ ವಿನ್ಯಾಸ, ನೀರಿನ ಬಳಕೆಯ ವ್ಯವಸ್ಥೆ ಇವೆಲ್ಲವೂ ಬದಲಾಗಿದೆ.

ಜನ ಈಗ ಹಳೆಯದನ್ನೆಲ್ಲ ಮರೆತಿದ್ದಾರೆ. ಯಾಕೆಂದರೆ, ಅವರಿಗೆ ನೀರಿನ ಜವಾಬ್ದಾರಿ ನಿಮ್ಮದಲ್ಲ ಎಂದು ಪಾಠ ಕಲಿಸಿಬಿಟ್ಟಿದ್ದೇವೆ. ಮೊದಲು ನಮ್ಮ ನಮ್ಮ ನೀರಿಗೆ ನಾವೇ ಜವಾಬ್ದಾರರಾಗಿದ್ದೆವು. ಒಂದು ಊರಲ್ಲಿ ಮನೆಯ ಸ್ವಲ್ಪ ದೂರದಲ್ಲೇ ಬಾವಿಗಳು ಇರುತ್ತಿದ್ದವು. ಒಂದರಲ್ಲಿ ಸಿಹಿ ನೀರು ಬಂದರೆ ಇನ್ನೊಂದರಲ್ಲಿ ಗಡಸು ನೀರು ಬರುತ್ತಿತ್ತು. ಸಿಹಿ ನೀರು ಕುಡಿಯಲು ಬಳಸುತ್ತಿದ್ದೆವು, ಗಡಸು ನೀರಿನಿಂದ ಉಳಿದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದೆವು. ಆ ಬಾವಿಗಳಿಂದ ಎಷ್ಟೇ ನೀರನ್ನು ತಂದರೂ ಬಾವಿ ಬರಿದಾಗುತ್ತಿರಲಿಲ್ಲ. ಯಾಕೆಂದರೆ ಅಲ್ಲೊಂದು ಸೆಲ್ಫ್


Downloaded From:www.kpscvaani.com

# ಜಲಮಂಡಳಿಯ ಅದ್ಭುತ ಕಾರ್ಯ!

**ಮಳೆ ನೀರಿನ ಕೊಯ್ಲನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಂಡು ಮಾದರಿಯಾದ ಸಂಸ್ಥೆಗಳ ಉದಾಹರಣೆ ಕೊಡಬಹುದೇ?**

ಸಾಕಷ್ಟು ಸಂಸ್ಥೆಗಳು ಮಳೆ ನೀರು ಸುಗ್ಗಿಯನ್ನು ಅಳವಡಿಸಿಕೊಂಡಿವೆ. ಈಗ ಬರುವ ಬಹುತೇಕ ಸಂಸ್ಥೆಗಳು, ಸರ್ಕಾರದ ಅಂಗಸಂಸ್ಥೆಗಳು ತುಂಬ ಚೆನ್ನಾಗಿ ಇದನ್ನು ಜಾರಿಗೆ ತಂದಿವೆ. ನಮ್ಮ ಇಡೀ ದೇಶದ ವಾಟರ್ ಸರ್ವೇ ವ್ಯವಸ್ಥೆಯಲ್ಲಿ ಮಳೆ ನೀರು ಸುಗ್ಗಿಗೆ ಹೆಚ್ಚಿನ ಆದ್ಯತೆಯನ್ನು ನೀಡಿ ಜಾರಿಗೆ ತಂದವರು ಬೆಂಗಳೂರಿನ ಬಿಡಬ್ಲ್ಯುಎಸ್ಎಸ್‌ಬಿ. ಅವರೇ ಎಲ್ಲರಿಗೆ ಮಾದರಿ. ಜೊತೆಗೆ ನೀರಿನ ಸರಬರಾಜಿನಲ್ಲಿ ಕೂಡ. ನೀರಿನ ಬಳಕೆಗೆ ಮೀಟರ್ ಅಳವಡಿಕೆಯಲ್ಲಿ ಬಿಡಬ್ಲ್ಯುಎಸ್ಎಸ್‌ಬಿ ಇಡೀ ದೇಶಕ್ಕೆ ಮಾದರಿಯಾಗಿದ್ದಾರೆ. ಮೀಟರ್ ಹಾಕಿದ್ದಾರೆ ಎಂದರೆ ನಿಮ್ಮ ನೀರಿನ ಬಳಕೆಗೆ ಉತ್ತರದಾಯಿತ್ವ ಬಂದ ಹಾಗೆ. ಜವಾಬ್ದಾರಿ ಜಾಸ್ತಿಯಾಗುತ್ತದೆ.

ಮಳೆ ನೀರು ಸುಗ್ಗಿ ಕಡ್ಡಾಯ ಮಾಡುವುದಕ್ಕೆ ಮುಂಚೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುವಲ್ಲಿಯೂ ಬಿಡಬ್ಲ್ಯುಎಸ್ಎಸ್‌ಬಿ ಮಾದರಿಯಾಗಿದೆ. ನೀರಿನ ಸುಗ್ಗಿ ವಿಚಾರದಲ್ಲಿ ತರಬೇತಿ ಹೇಗೆ ಕೊಡಬೇಕು, ಮಾಡೆಲ್‌ಗಳನ್ನು ಹೇಗೆ ಮಾಡಬೇಕು, ಒಂದು ಥೀಮ್ ಪಾರ್ಕ್ ನಿರ್ಮಾಣ ಮಾಡುವುದು, ಶಾಲೆ-ಕಾಲೇಜು ಮಕ್ಕಳಿಗೆ ತರಬೇತಿ ಕೊಡುವುದು, ದೊಡ್ಡ ದೊಡ್ಡ ಸಂಸ್ಥೆಗಳಿಗೆ ಮನವರಿಕೆ ಮಾಡುವುದು, ಪ್ಲಂಬರ್‌ಗಳು, ತಂತ್ರಜ್ಞರಿಗೆ, ವಾಸ್ತು ವಿನ್ಯಾಸಕಾರರಿಗೆ ತರಬೇತಿ ನೀಡುವುದು... ಇವೆಲ್ಲದರಲ್ಲಿ ಕರ್ನಾಟಕ ಸರ್ಕಾರ ಮತ್ತು ಬಿಡಬ್ಲ್ಯುಎಸ್ಎಸ್‌ಬಿಗಿಂತ ಕ್ಲಾಸಿಕ್ ಉದಾಹರಣೆ ಬೇರೆ ಇಲ್ಲ. ಇದರ ಜೊತೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡಿರುವ ಕೆಲಸ ಅದ್ಭುತವಾದುದು.

ಗವರ್ನಿಂಗ್ ಮೆಕಾನಿಸಂ ಇತ್ತು. ನೀರನ್ನು ಮಿತವಾಗಿ ಬಳಸಿ ಎಂದು ಯಾರಿಗೂ ಪಾಠ ಹೇಳಿರಲಿಲ್ಲ. ಆದರೆ ಯಾರೂ ಪೋಲು ಮಾಡುತ್ತಿರಲಿಲ್ಲ.

ಈಗ ಏನಾಯ್ತು ನೋಡಿ, ನೀರು ಎಲ್ಲಿದೆಯೋ ಅದನ್ನು ನೀವು ಇರುವ ಕಡೆಗೆ ತರುವ ಜವಾಬ್ದಾರಿ ನಮ್ಮದು ಎಂದು ಬೇರೆಬೇರೆಯವರು ಹೊಣೆ ಹೊತ್ತುಕೊಂಡರು. ನೀರಿನ ಬಗ್ಗೆ ಯಾವತ್ತು ನಿಮಗೆ ಚಿಂತೆ ಇಲ್ಲವಾಯಿತೋ, ಆವತ್ತಿಂದ ಸಮಸ್ಯೆ ಆರಂಭವಾಯಿತು. ಯಾವತ್ತು ನಿಮ್ಮ ಜವಾಬ್ದಾರಿ ಹೊರಟು ಹೋಯಿತೋ ಆ ದಿನದಿಂದಲೇ ನೀರಿನ ಮೇಲಿದ್ದ ಗೌರವವೂ ಹೊರಟು ಹೋಯಿತು. ಮಣ್ಣು, ಗಿಡ, ಮರ ಇವೆಲ್ಲಕ್ಕೆ ಸಲ್ಪನಾದರೂ ಗೌರವ ಕೊಡುತ್ತೇವೆ. ಆದರೆ ನೀರನ್ನು ತುಚ್ಛವಾಗಿ ಕಾಣುತ್ತೇವೆ. ಕೆರೆಕಟ್ಟೆಗಳ ದುರವಸ್ಥೆಯನ್ನು ನೋಡಿದರೆ ತುಂಬಾ ನೋವಾಗುತ್ತದೆ.

**1200 ಚದರಡಿ ವಿಸ್ತೀರ್ಣದ ನಿವೇಶನದಲ್ಲಿ ಇಂತಹ ಮಳೆ ನೀರಿನ ಸುಗ್ಗಿ ಮಾಡಲಿಕ್ಕೆ ಎಷ್ಟು ಖರ್ಚಾಗುತ್ತದೆ? ಮಧ್ಯಮ ವರ್ಗದವರಿಗೆ ಇದು ಸಾಧ್ಯವೇ?**

ಒಂದು 30 x 40 ನಿವೇಶನದಲ್ಲಿ ಛಾವಣಿ ಮೇಲೆ ಬಿದ್ದ ಮಳೆ ನೀರನ್ನು ಸಂಗ್ರಹಿಸಲು ಎರಡೂ ಕಡೆ ಪೈಪ್‌ಗಳನ್ನು ಅಳವಡಿಸಿಕೊಂಡು ಎರಡು ಫಿಲ್ಟರ್‌ಗಳನ್ನು ಹಾಕಿಕೊಂಡರೆ ಅನುಕೂಲ. ಇಷ್ಟು ಮಾಡಲಿಕ್ಕೆ 15 ರಿಂದ 20 ಸಾವಿರ ಖರ್ಚಾಗುತ್ತದೆ. ಇದಕ್ಕೆ ಮೊದಲೇ ಟ್ಯಾಂಕ್ ಮಾಡಿಕೊಂಡಿಲ್ಲ ಎಂದರೆ ಖರ್ಚು ಸಲ್ಪ ಜಾಸ್ತಿಯಾಗುತ್ತದೆ.

**ಒಂದು ನಿವೇಶನದಲ್ಲಿ ಮನೆ ಕಟ್ಟುವುದಕ್ಕೆ ಮೊದಲು ಮಳೆ ನೀರು ಸುಗ್ಗಿ ಬಗ್ಗೆ ಯೋಚನೆ ಮಾಡಿದರೆ ಆತ ಏನು ಮಾಡಬೇಕು? ಆ ಪ್ರಕ್ರಿಯೆ ಎಲ್ಲಿಂದ ಆರಂಭವಾಗಬೇಕು?**

ನೀರಿಲ್ಲ ಎಂದರೆ ಮನೆ ಕಟ್ಟುವುದೇ ಅಸಾಧ್ಯ. ಹಾಗಾಗಿ ಮೊದಲು ನೀರಿನ ವ್ಯವಸ್ಥೆ ಮಾಡಿಕೊಳ್ಳಬೇಕು. ಅಂದರೆ ಅಡಿಪಾಯ ಹಾಕುವಾಗಲೇ ದೊಡ್ಡದೊಂದು ಅಂಡರ್‌ಗ್ರೌಂಡ್ ಟ್ಯಾಂಕ್ ಮಾಡಬೇಕು. 30 x 40 ಅಡಿ ನಿವೇಶನದಲ್ಲಿ 15000 ಲೀಟರ್ 40 x 60 ಅಡಿ ನಿವೇಶನಕ್ಕೆ 20000 ಲೀಟರ್ ನೀರು ಹಿಡಿದಿಡುವ ಸಾಮರ್ಥ್ಯದ ಸಂಪು ನಿರ್ಮಾಣ ಮಾಡಿದರೆ ನೀರಿನ ಸಂಗ್ರಹದ ವಿಚಾರದಲ್ಲಿ ಯಾವತ್ತೂ ಸಮಸ್ಯೆಯಾಗುವುದಿಲ್ಲ. ಸಾಧಾರಣವಾಗಿ ಒಂದು ವರ್ಷಕ್ಕೆ ಒಂದರಿಂದ 1.40 ಲಕ್ಷ ಲೀಟರ್ ನೀರನ್ನು ಇದರಲ್ಲಿಯೇ ಸಂಗ್ರಹಿಸಿಟ್ಟುಕೊಂಡು ಬಳಸಬಹುದು. ಸಂಪಿನಿಂದ ತುಂಬಿ ಹೆಚ್ಚಾದ ನೀರನ್ನು ಅಂತರ್ಜಲಕ್ಕೆ ಬಿಡಬೇಕು. ಅದಕ್ಕಾಗಿ 3–4 ಅಡಿ ಅಗಲ ಮತ್ತು 10ರಿಂದ 20 ಅಡಿ ಆಳದ, ಸುತ್ತಲೂ ಸಿಮೆಂಟ್ ರಿಂಗ್‌ಗಳನ್ನು ಅಳವಡಿಸಿದ ಇಂಗುಗುಂಡಿ ಮಾಡಬೇಕು. ರಿಂಗ್‌ಗಳ ನಡುವೆ ಸಿಮೆಂಟ್ ಹಾಕದೇ ಜೋಡಿಸಬೇಕು. ಬಾವಿಯೊಳಗೆ ಏನನ್ನೂ ಹಾಕಬಾರದು. ರಿಂಗ್ ಸುತ್ತಲೂ ಜಲ್ಲಿ ತುಂಬಿ, ಮೇಲ್ಭಾಗಕ್ಕೆ ಲಿಡ್ ಹಾಕಿ ಮುಚ್ಚಬೇಕು. ಟ್ಯಾಂಕ್‌ನಲ್ಲಿ ಶೇಖರಣೆಯಾದ ನೀರು ತುಂಬಿ ಹೊರಹೋಗುವುದನ್ನು ಈ ಇಂಗುಗುಂಡಿಗೆ ಬಿಡಬೇಕು. ಆಗ ಅಂತರ್ಜಲ ವೃದ್ಧಿಯಾಗುತ್ತ ಹೋಗುತ್ತದೆ. ಇದರಿಂದ ನಿಮ್ಮ ಸೈಟು ಮಾತ್ರವಲ್ಲ, ಬಡಾವಣೆಯ ಅಂತರ್ಜಲ ವೃದ್ಧಿಯಾಗುವುದರಿಂದ ಸುತ್ತಮುತ್ತಲಿನ ಬೋರ್‌ವೆಲ್‌ಗಳು ರೀಚಾರ್ಜ್ ಆಗುತ್ತವೆ.

**ಹೊಸದಾಗಿ ನೂರಾರು ಎಕರೆ ಪ್ರದೇಶದಲ್ಲಿ ಬಡಾವಣೆಗಳನ್ನು ನಿರ್ಮಾಣ ಮಾಡುವಾಗ ಪ್ರತಿ ರಸ್ತೆ ಅಥವಾ ಕಾರ್ನರ್‌ನಲ್ಲಿ ಮತ್ತು ಪಾರ್ಕ್‌ನ ನಾಲ್ಕೂ ದಿಕ್ಕುಗಳಲ್ಲಿ ಇಂಗು ಗುಂಡಿ ನಿರ್ಮಿಸಿದರೆ ಆ ಬಡಾವಣೆಗೆ ಬಿದ್ದ ನೀರೆಲ್ಲಾ ಸೈಫನ್ ಆಗಿ ಅಂತರ್ಜಲ ಹೆಚ್ಚಾದೀತು ಅಲ್ಲವೇ?**

ಇಂತಹುದೊಂದು ಪರಿಕಲ್ಪನೆಯನ್ನು ನಾನು ಬಹಳ ಹಿಂದೆಯೇ ಯೋಚನೆ ಮಾಡಿದ್ದೆ. ಸುಮಾರು 20 ವರ್ಷಗಳ ಹಿಂದೆ ನಗರ ಯೋಜನೆ ಇಲಾಖೆಯ ಕಟ್ಟಡ ಬೈಲಾದಲ್ಲಿ ಬದಲಾವಣೆಗಳನ್ನು ಮಾಡಿಸಿ, ಪ್ರತಿಯೊಂದು ನಿವೇಶನದಲ್ಲಿಯೂ ಮಳೆ ನೀರು ಸುಗ್ಗಿ ಕಡ್ಡಾಯ ಮಾಡಿ ನಿಯಮ ತಂದೆವು. ಅಲ್ಲಿಂದೀಚೆಗೆ ಅನೇಕ ನಿಯಮಗಳನ್ನು ರೂಪಿಸಲಾಯಿತು. ಹೊಸ ಬಡಾವಣೆಗಳನ್ನು ಮಾಡಿದರೆ ಪ್ರತಿ ಮನೆ ಮತ್ತು ರಸ್ತೆ ಮಧ್ಯೆ ಒಂದು ಮಳೆ ನೀರಿನ ಚರಂಡಿ ಇರುತ್ತದೆ. ಅಲ್ಲಿ ಪ್ರತಿ ನೂರು ಮೀಟರ್‌ಗೆ ಒಂದು ಇಂಗು ಗುಂಡಿ ಮಾಡಬೇಕು. ಸಣ್ಣದೊಂದು ಟ್ರೆಂಚ್. ಒಂದು ಅಥವಾ ಎರಡು ಮೀಟರ್ ಆಳಕ್ಕೆ ತೆಗೆದು ಅದರ ತುಂಬಾ ಜಲ್ಲಿ ಮತ್ತು ಮರಳು ತುಂಬುವುದು. ಆಗ ಆ ಮೋರಿಯಲ್ಲಿ ಹರಿಯುವ ಮಳೆ ನೀರು ಅಲ್ಲಿಯೇ ಇಂಗುತ್ತದೆ. ಅಲ್ಲಿ ಹೆಚ್ಚಾಗಿದ್ದು ಇನ್ನೊಂದು ನೂರು ಮೀಟರ್ ಆಚೆಗಿನ ಗುಂಡಿಯಲ್ಲಿ ಇಂಗುತ್ತದೆ. ಇದನ್ನು ಇಡೀ



Downloaded From:www.kpscvaani.com

## ವಿಮಾನ ನಿಲ್ದಾಣದ ಮಹೋನ್ನತ ಕಾರ್ಯ

**ಮಳೆ ನೀರು ಸುಗ್ಗಿಗೆ ಇನ್ನೊಂದು ಮಹೋನ್ನತ ಉದಾಹರಣೆ ಎಂದರೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ. ಅವರಿಗೆ ಹೊರಗಡೆಯಿಂದ ಇನ್ನು ನೀರೇ ಬೇಕಾಗಿಲ್ಲ. ಅಲ್ಲೇ ಬೀಳುವ ಮಳೆ ನೀರನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದು ಮಾತ್ರವಲ್ಲದೆ ನೀರಿನ ಮರುಬಳಕೆಯನ್ನು ಕೂಡ ಅಷ್ಟೇ ಅದ್ಭುತವಾಗಿ ಮಾಡಿದ್ದಾರೆ. ವಾಸ್ತವವಾಗಿ ಆ ವಿಮಾನ ನಿಲ್ದಾಣವನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಯಲಹಂಕದಿಂದ ಒಂದು ಎಕ್ಸ್‌ಪ್ರೆಸ್ ನೀರಿನ ಮಾರ್ಗವನ್ನು ಅಳವಡಿಸಲಾಗಿತ್ತು. ಆದರೆ ಆ ಪೈಪ್‌ಲೈನ್ ಅನ್ನು ಉಪಯೋಗಿಸಿಯೇ ಇಲ್ಲ. ಮಳೆನೀರಿನ ಕೊಯ್ಲಿನಿಂದ ಶೇಖರಣೆಯಾದ ನೀರೇ ಅವರ ಬಳಿ ಹೆಚ್ಚುವರಿಯಾಗಿದ್ದು, ವಿಮಾನ ನಿಲ್ದಾಣದ ಸುತ್ತಮುತ್ತಲಿನ ಊರುಗಳಿಗೆ ಕೊಡುವಷ್ಟು ಅವರ ಬಳಿ ನೀರಿದೆ.**



ಬಡಾವಣೆಗೆ ಮಾಡಿದರೆ ಅಲ್ಲಿ ಬಿದ್ದ ಅರ್ಧಕ್ಕಿಂತ ಹೆಚ್ಚು ನೀರು ಅಲ್ಲಿಯೇ ಇಂಗುತ್ತದೆ.

ಕಳೆದ 20-25 ವರ್ಷಗಳಲ್ಲಿ ಬಿಬಿಎಂಪಿ, ಬಿಡಬ್ಲ್ಯುಎಸ್ಎಸ್‌ಬಿ, ಸರ್ಕಾರಿ ಸಂಸ್ಥೆಗಳಿಗೆ ಸಲಹೆಗಾರರಾಗಿ ಕೆಲಸ ಮಾಡಿರುವ ನಾನು 'ಪೋರಸ್ ಸಿಟಿ' ಪರಿಕಲ್ಪನೆಯನ್ನು ಬೆಳೆಸಿ ಎಂದು ಹೇಳುತ್ತಲೇ ಬಂದಿದ್ದೇನೆ. ಇದು ನಗರೀಕರಣಕ್ಕೆ ಸಂಪೂರ್ಣವಾಗಿ ವಿರುದ್ಧವಾದುದು. ನಗರೀಕರಣದಿಂದ ಇರುವ ಜಾಗವೆಲ್ಲ ಬ್ಲಾಕ್ ಆಗ್ತಾ ಇದೆ. ನೀರು ಇಂಗುವುದಿಲ್ಲ. ಭೂಮಿಗೆ ಉಸಿರಾಡುವುದಕ್ಕೆ ಗಾಳಿಯೇ ಸಿಗುವುದಿಲ್ಲ. ಹಾಗಾಗಿ ಮಾಡುವ ಅಭಿವೃದ್ಧಿಯ ಜೊತೆಗೆ ಅಲ್ಲಲ್ಲಿ ನೀರು ಸುಗ್ಗಿಗೆ ಸಣ್ಣ ಸಣ್ಣ ಪ್ರಯತ್ನ ಮಾಡುವುದನ್ನು ಮರೆಯಬಾರದು.

**ಬೆಂಗಳೂರಿನಂತಹ ನಗರಕ್ಕೆ ವರ್ಷಾನುವರ್ಷಗಳಿಂದ ಕಾವೇರಿ ನೀರನ್ನು ಸೆಳೆದು ತರುತ್ತಲೇ ಇದ್ದೇವೆ. ಈ ನಗರ ಮಾತ್ರ ಬೆಳೆಯುತ್ತಿದೆ. ಇದು ಇನ್ನೆಷ್ಟು ವರ್ಷ? ಮುಂದಿನ ಪರ್ಯಾಯ ಹೇಗೆ?**

ನೂರು ಲೀಟರ್ ನೀರು ಮನೆಯೊಳಗೆ ಬಂದರೆ 80 ಲೀಟರ್ ಆಚೆಗೆ ಹೋಗಲೇ ಬೇಕು. ಅದನ್ನು ವೇಸ್ಟ್ (ತ್ಯಾಜ್ಯ) ನೀರು ಅಂತಾರೆ. ನನ್ನ ಪ್ರಕಾರ ಅದು ಬಳಸಿದ ನೀರು. ಅಂತಹ ನೀರನ್ನು ಮತ್ತೆ ಬಳಕೆ ಮಾಡಬಹುದು. ವೃಷಭಾವತಿ, ಕೋರಮಂಗಲದಂತಹ ಕಡೆ ಕೊಳಚೆ ನೀರು ಹರಿದು ಹೋಗುತ್ತಿದೆ. ಅಂತಹ ನೀರನ್ನು ಮರುಬಳಕೆ ಮಾಡಬೇಕು. ಸಿಂಗಾಪುರ ಮುಂತಾದ ದೇಶಗಳಲ್ಲಿ ಇದನ್ನೇ ಶುದ್ಧೀಕರಿಸಿ ಕುಡಿಯುತ್ತಿದ್ದಾರೆ. ನಾವು ಕುಡಿಯುವುದು ಬೇಡ. ಅನ್ಯ ಬಳಕೆಗೆ ಬಳಸೋಣ. ಹಾಗೆ ಮಾಡಿದಾಗ ದಿನವೂ ಕಾವೇರಿಯಿಂದ ಹರಿದುಬರುವ ನೀರಿನಲ್ಲಿ ಶೇ.80ರಷ್ಟು ಉಳಿತಾಯ ಮಾಡಬಹುದು.

ಬೆಂಗಳೂರಿಗೆ ಹರಿದು ಬರುವ ಕಾವೇರಿ ನೀರನ್ನು ಇನ್ನು 50 ವರ್ಷಗಳ ಕಾಲ ಕೊಡಬಹುದು. ಒಂದು ಮನೆಗೆ ಕಾವೇರಿ ನೀರಿನ ಸಂಪರ್ಕ ಪಡೆದುಕೊಂಡರೆ ಎಷ್ಟು ಬೇಕಾದರೂ ನೀರನ್ನು ಬಳಸಿಕೊಳ್ಳಬಹುದು. ಅದಕ್ಕೆ ನಾವು ದುಡ್ಡು ಕಟ್ಟೇವಿ ನಿಜ. ಆದರೆ ಹಾಗೆ ಮಾಡಬಾರದು. ದುಡ್ಡು ಕೊಟ್ಟರೂ ನೀರು ಸಿಗದೇ ಇರುವ ಎಷ್ಟೋ ಮನೆಗಳಿವೆ. ನೀರು ಪೋಲಾಗುವುದಕ್ಕೆ ಬ್ರೇಕ್ ಹಾಕಲು 10 ಸಾವಿರ ಲೀಟರ್ ನೀರನ್ನು ಈಗ ಕೊಡುತ್ತಿರುವ ಸಾವಿರಕ್ಕೆ 8 ರೂ. ದರದಲ್ಲೇ ಕೊಟ್ಟು, ಅದರಿಂದಾಚೆಗೆ ಬಳಸುವ ಸಾವಿರ ಲೀಟರ್‌ಗೆ ಹತ್ತು ರೂ. ಅಥವಾ 200 ರೂ. ದರ ವಿಧಿಸಬೇಕು. ಟ್ಯಾಂಕರ್‌ಗಳಿಗೆ ಸಾವಿರಾರು ರೂ. ಮತ್ತು ಕುಡಿಯುವ ನೀರಿನ ಬಾಟಲಿಗೂ ದುಡ್ಡು ಕೊಡುತ್ತಿರುವಾಗ ಕನಿಷ್ಠ 200 ರೂ. ದರ ವಿಧಿಸಿದರೆ ನೀರಿನ ಬೆಲೆ ಏನು ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ.

**ಬೋರ್‌ವೆಲ್‌ಗಳಿಂದ ಅಂತರ್ಜಲ ಕಡಿಮೆಯಾಗುವುದಿಲ್ಲವೇ?**

ಬೋರ್‌ವೆಲ್‌ಗಳಿಂದ ಕಂಡಿತಾ ಅಂತರ್ಜಲ ಕಡಿಮೆಯಾಗುತ್ತದೆ. ನೀರಿನ ಅವಶ್ಯಕತೆಗಾಗಿ ಅದನ್ನು ಅಳವಡಿಸಿಕೊಳ್ಳುವುದು ತಪ್ಪಾಗುವುದಿಲ್ಲ. ಆದರೆ ಬೋರ್‌ವೆಲ್‌ನಿಂದ ನೀರು ಎಷ್ಟು ತೆಗೆಯುತ್ತೀರೋ ಅಷ್ಟು ಮಳೆ ನೀರನ್ನು ಅದಕ್ಕೆ ಇಂಗಿಸಬೇಕು ಎಂಬ ಷರತ್ತನ್ನು ವಿಧಿಸಬೇಕು. ಪ್ರತಿಯೊಂದು ಬೋರ್‌ವೆಲ್‌ಗೂ ಮೀಟರ್ ಅಳವಡಿಸಿದರೆ ಮಳೆ ನೀರನ್ನು ಭೂಮಿಗೆ ಎಷ್ಟು ಇಂಗಿಸಿದ್ದಾರೆ ಎಂಬ ಲೆಕ್ಕ ಸಿಗುತ್ತದೆ. ಅದೇನೂ ಕಷ್ಟವಲ್ಲ.

**ಒಂದು ಬಡಾವಣೆಯಲ್ಲಿ ನೂರಾರು ಸಂಖ್ಯೆಯ ಬೋರ್‌ವೆಲ್ ಕೊರೆಯುತ್ತಾರೆ. ಎಲ್ಲವೂ ಕನಿಷ್ಠ ಸಾವಿರ ಅಡಿ ಆಳ. ಪರಿಸ್ಥಿತಿ ಹೀಗೇ ಆದರೆ ಮುಂದಿನ ಗತಿ ಏನು?**

ಮೊದಲೇ ಹೇಳಿದ ಹಾಗೆ ಪ್ರತಿಯೊಂದಕ್ಕೂ, ಪ್ರತಿಯೊಬ್ಬರನ್ನೂ ಉತ್ತರದಾಯಿಗಳನ್ನಾಗಿ ಮಾಡಬೇಕು. ಬೋರ್‌ವೆಲ್‌ಗಳಿಗೆ ಮೀಟರ್ ಅಳವಡಿಸಿ ಮಳೆ ನೀರು ಸುಗ್ಗಿಯ ಹೊಣೆಯನ್ನು ಹೊರಿಸಬೇಕು. ಇಲ್ಲವಾದರೆ ಭೂಮಿಯನ್ನು ಕೊರೆಯುವ ಅಧಿಕಾರವೇ ಇಲ್ಲ ಎಂದು ನಿಯಮ ಮಾಡಬೇಕಾಗುತ್ತದೆ. ಆಗ ಎಲ್ಲರೂ ದಾರಿಗೆ ಬಂದೇ ಬರುತ್ತಾರೆ.


ಬೆಂಗಳೂರು ನಗರ ಇದೆಯಲ್ಲ, ಮಳೆ ನೀರು ಸುಗ್ಗಿಗೆ ಹೇಳಿ ಮಾಡಿಸಿದ ನಗರ. ಇಲ್ಲಿನ ಉಬ್ಬು-ತಗ್ಗುಗಳು, ಕಣಿವೆಯಂತಹ ಭೂಪ್ರದೇಶ ಬೇರೆ ಎಲ್ಲೂ ಸಿಗಲು ಸಾಧ್ಯವಿಲ್ಲ. ಅದೇ ಚೆನ್ನೈ ನಗರವನ್ನು ನೋಡಿ, ಆ ನಗರ ಒಳ್ಳೇ ಬಟ್ಟಲು ಇದ್ದಹಾಗಿದೆ. 50 ಅಡಿ ತಳಕ್ಕೆ ಹೋದರೆ ಸಾಕು ಸಮುದ್ರದ ಉಪ್ಪು ನೀರು ಬರುತ್ತದೆ.

ಇನ್ನು ಬೆಂಗಳೂರಿನಲ್ಲಿ ಎರಡು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಜನ ಮಳೆ ನೀರಿನ ಸುಗ್ಗಿ ಮಾಡಿದ್ದಾರೆ. ಅದೇನೂ ಸಣ್ಣ ಸಂಖ್ಯೆಯಲ್ಲ. ಈ ನಗರದಲ್ಲಿ 20 ಲಕ್ಷ ಪ್ರಾಪರ್ಟಿಗಳು ಇರಬಹುದು. ಎರಡು ಲಕ್ಷ ಜನ ಜಾಗೃತರಾಗಿ ಮಳೆ ನೀರಿನ ಸುಗ್ಗಿ ಅಳವಡಿಸಿಕೊಂಡಿರುವುದು ಮೆಚ್ಚಲೇಬೇಕಾದ ಸಂಗತಿ.

ಆದಾಗ್ಯೂ! ಬನ್ನಿ ಎಲ್ಲರೂ ಮಳೆ ನೀರ ಸುಗ್ಗಿ ಮಾಡುವ ಮೂಲಕ ಅಂತರ್ಜಲವನ್ನು ಹೆಚ್ಚಿಸೋಣ. ■



Downloaded From:www.kpscvaani.com



# ವಿದೇಶಿ ಉದ್ಯೋಗಾಕಾಂಕ್ಷಿಗಳಿಗೆ ಆಶಾಕಿರಣವಾಗಿರುವ ಐಎಂಸಿ-ಕೆ

**ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ವಿದೇಶದಲ್ಲಿ ಉದ್ಯೋಗ ಹೊಂದಲು ಆಸಕ್ತರಾಗಿರುವ ಯುವಕ-ಯುವತಿಯರಿಗೆ ಐಎಂಸಿ-ಕೆ ಕೇಂದ್ರದ ಮೂಲಕ ಮಾರ್ಗದರ್ಶನ ನೀಡುತ್ತಿದೆ.**

ಆರ್. ರೂಪಕಲಾ

ವಿದೇಶದಲ್ಲಿ ಉದ್ಯೋಗ ಮಾಡಬೇಕೆಂಬುದು ಹಲವರ ಕನಸಾಗಿರುತ್ತದೆ. ಈ ಕನಸನ್ನು ನನಸು ಮಾಡಿಕೊಳ್ಳುವುದು ಹೇಗೆ ಎಂಬ ಬಗ್ಗೆ ಕೆಲವರಿಗೆ ಮಾಹಿತಿ ಇರುವುದಿಲ್ಲ. ವಿದೇಶದಲ್ಲಿ ಉದ್ಯೋಗ ಪಡೆಯುವವರಿಗಾಗಿ ಸುಸ್ಥಿರ ಮಾರ್ಗದರ್ಶನ ನೀಡಲು ರಾಜ್ಯದ ಎಲ್ಲ ಜಿಲ್ಲೆಯ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ "ಅಂತಾರಾಷ್ಟ್ರೀಯ ವಲಸೆ ಕೇಂದ್ರ-ಕರ್ನಾಟಕ (ಐಎಂಸಿ-ಕೆ)" ವನ್ನು ತೆರೆಯಲಾಗಿದೆ.

ಈ ಐಎಂಸಿ-ಕೆ ಕೇಂದ್ರವು ವಿದೇಶದಲ್ಲಿ ಉದ್ಯೋಗ ಮಾಡ ಬಯಸುವವರಿಗೆ ಮಾರ್ಗದರ್ಶನ ನೀಡುವ ಮೂಲಕ ಆಶಾಕಿರಣವಾಗಿ ಕೆಲಸ ಮಾಡುತ್ತಿದೆ. ಅಲ್ಲದೆ ವಿದೇಶಕ್ಕೆ ಹಾರಿ ಹೋಗಿ ಬದುಕು ಕಟ್ಟಿಕೊಳ್ಳುವವರಿಗೆ ಯಾವ ದೇಶದಲ್ಲಿ ಯಾವ ಉದ್ಯೋಗಾವಕಾಶಗಳಿವೆ? ಎಷ್ಟು ಹುದ್ದೆಗಳಿವೆ? ಅವುಗಳನ್ನು ಪಡೆಯಲು ಅಗತ್ಯವಿರುವ ಕೌಶಲ್ಯ, ಉದ್ಯೋಗ ಪಡೆಯುವ ಮಾರ್ಗ ಕುರಿತು ಮಾಹಿತಿ ನೀಡಲಿದೆ. ಸಾಗರೋತ್ತರ ದೇಶಗಳಲ್ಲಿ ಉದ್ಯೋಗ ಮಾಡುವ ವಲಸಿಗರಿಗೆ ಎದುರಾಗಲಿರುವ ಸಮಸ್ಯೆಗಳ ನಿವಾರಣೆ ಹಾಗೂ ಅವರಿಗೆ ರಕ್ಷಣೆ ನೀಡುವಲ್ಲಿ ಈ ವಲಸೆ ಕೇಂದ್ರ ನಿರತವಾಗಿದೆ.

ಸರಿಯಾದ ಮಾರ್ಗದರ್ಶನದ ಕೊರತೆ, ಸುರಕ್ಷತೆಯ ಕೊರತೆ ಮತ್ತು ಆರಂಭದಲ್ಲಿ ಹಣಕಾಸಿನ ಹೊರೆ ಸೇರಿದಂತೆ ಅನೇಕ ಕಾರಣಗಳಿಂದ ವಿದೇಶದಲ್ಲಿ ಉದ್ಯೋಗ ಮಾಡುವ ಆಸೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ನಿಟ್ಟಿನಲ್ಲಿ ಕೆಲಸದ ಮೇಲೆ ವಿದೇಶಿ ವಲಸೆಯನ್ನು ಮಾಡುವವರಿಗಾಗಿ ಕ್ರಮಬದ್ಧವಾದ, ಸುರಕ್ಷಿತವಾದ ಹಾಗೂ ಮಾನವೀಯ ನೆಲೆಯಲ್ಲಿ ಸೇವೆಗಳು ಲಭ್ಯವಾಗುವಂತೆ ಮಾಡಲು ಜಿಲ್ಲೆಗಳಲ್ಲಿಯೇ ಅಂತಾರಾಷ್ಟ್ರೀಯ ವಲಸೆ ಕೇಂದ್ರವನ್ನು ತೆರೆಯಲಾಗಿದೆ.

ವಿದೇಶದಲ್ಲಿ ಕೆಲಸ ಮಾಡಲು ಆಸೆ ಹೊಂದಿದ್ದರೆ, ಅದಕ್ಕೆ ತಕ್ಕಂತೆ ಕೆಲವು ಪೂರ್ವ ತಯಾರಿಯ ಅಗತ್ಯವಿರುತ್ತದೆ. ಪ್ರಮುಖವಾಗಿ ವಿದ್ಯಾಭ್ಯಾಸ ಮತ್ತು ಕೆಲಸ ಅನುಭವದ ಆಧಾರದ ಮೇಲೆ ದೊರೆಯುವಂತಹ ಅವಕಾಶಗಳ ಮಾಹಿತಿಯನ್ನು ತಿಳಿಯುವುದು, ವಿದೇಶದಲ್ಲಿ ಕನಿಷ್ಠ ಎರಡು ವರ್ಷಗಳ ಕಾಲ ಕೆಲಸಕ್ಕೆ ತಮ್ಮನ್ನು ತಾವು



Downloaded From:www.kpscvaani.com



ಸಿದ್ಧತೆಗೊಳಿಸುವುದು, ತಮ್ಮ ಕುಟುಂಬದ ಬೆಂಬಲವನ್ನು ಪಡೆಯುವುದು, ತಾವು ಹೋಗ ಬಯಸುವ ವಿದೇಶಗಳ ಸಾಮಾಜಿಕ ಜೀವನ ಪದ್ಧತಿಗಳ ಬಗ್ಗೆ ತಿಳಿಯುವುದು ಮತ್ತು ತಮಗೆ ಸಿಗುವ ಉದ್ಯೋಗಗಳಿಗೆ ಸಿಗುವ ಸಂಬಳದ ಮಾಹಿತಿ ತಿಳಿಯುವುದು ಮುಖ್ಯವಾಗಿರುತ್ತದೆ. ಇಂತಹ ಎಲ್ಲಾ ಮಾಹಿತಿಯನ್ನು ವಿದೇಶಿ ಉದ್ಯೋಗಾಕಾಂಕ್ಷಿಗಳಿಗೆ ವಲಸೆ ಕೇಂದ್ರದಲ್ಲಿ ಒದಗಿಸಲಾಗುತ್ತದೆ.

ಅದಲ್ಲದೆ ವಿದೇಶಗಳಿಗೆ ವಲಸೆ ಹೋಗುವಾಗ ಮೊದಲ ಹಂತದಲ್ಲಿ ಪ್ರಮುಖವಾಗಿ ಪಾಸ್ಪೋರ್ಟ್ ಮಾಡಿಸುವ, ಬ್ಯಾಂಕ್ ಖಾತೆಯನ್ನು ಹೊಂದುವ, ಕೆಲಸದ ಅನುಭವ ಮತ್ತು ವಿದ್ಯಾರ್ಹತೆ ಕುರಿತ ದಾಖಲಾತಿಗಳನ್ನು ಸಿದ್ಧಪಡಿಸಿಕೊಳ್ಳುವ ಬಗ್ಗೆ ಮಾಹಿತಿ ಒದಗಿಸುವ ಮೂಲಕ ಸಂಪರ್ಕ ಸೇತುವೆಯಾಗಿ ಕೇಂದ್ರ ಕಾರ್ಯನಿರ್ವಹಿಸಲಿದೆ.

ಎರಡನೆ ಹಂತದಲ್ಲಿ ವಿದೇಶಿ ಉದ್ಯೋಗಾದಾತರ ಜೊತೆ ಸಂಭಾಷಿಸುವಾಗ ನಡೆದುಕೊಳ್ಳಬೇಕಾದ ರೀತಿ, ಇತರೆ ದೇಶಗಳ ಸಾಮಾಜಿಕ ಜೀವನವನ್ನು ಗೌರವಿಸುವ ಪ್ರವೃತ್ತಿ ಹೊಂದುವ, ಅಲ್ಲಿಯ ಕಾನೂನುಗಳಿಗೆ ನಮ್ಮ ದೇಶದಲ್ಲಿ ಗೌರವಿಸಿದಂತೆ ಗೌರವ ತೋರುವ, ನಮ್ಮ ಸಾಮಾಜಿಕ ಜೀವನವನ್ನು ಉತ್ತಮಗೊಳಿಸಲು, ಉಳಿತಾಯ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವ ಮತ್ತು ಮುಖ್ಯವಾಗಿ ವೃತ್ತಿಯಲ್ಲಿ ನುರಿತತೆಯನ್ನು ನಿರಂತರವಾಗಿ ಹೊಂದುವ ಬಗ್ಗೆ ವಲಸೆ ಕೇಂದ್ರದಲ್ಲಿ ಮಾರ್ಗದರ್ಶನ ನೀಡಲಾಗುತ್ತದೆ.

**ಉದ್ಯೋಗಾಕಾಂಕ್ಷಿಗೆ ಮಾಹಿತಿ ನೆರವು:**

ಮೂರನೆಯ ಹಂತದಲ್ಲಿ ಉದ್ಯೋಗಾಕಾಂಕ್ಷಿ ಕೆಲಸವನ್ನು ಪಡೆದ ನಂತರ ವಿದೇಶದಲ್ಲಿ ಉದ್ಯೋಗ ನೀಡುವವರ ಜೊತೆ ಲಿಖಿತ ಒಪ್ಪಂದ, ನಮ್ಮ ದೇಶದಿಂದ ವಿದೇಶಕ್ಕೆ ತೆರಳಿ ವಾಸಿಸಲು ಬೇಕಾದ ಅನುಮತಿ(ವಿಸಾ), ನಮ್ಮ ಹಾಗೂ ವಿದೇಶಿ ಸರ್ಕಾರದ ವಿವಿಧ ಇಲಾಖೆಗಳಿಗೆ ಸಲ್ಲಿಸಬೇಕಾದ ದಾಖಲಾತಿಗಳ ಮಾಹಿತಿ ಪಡೆದು ಭಾರತ ಮತ್ತು ವಲಸೆಗೆ ಹೋಗುವ ಸರ್ಕಾರಗಳಿಂದ ನಮಗೆ ಸಿಗುವ ಸೇವಾ ಸೌಲಭ್ಯಗಳ ಮಾಹಿತಿ ಮತ್ತು ಸಹಾಯವಾಣಿಗಳ ವಿವರವನ್ನು ವಲಸೆ ಕೇಂದ್ರದಲ್ಲಿ ಒದಗಿಸಲಾಗುತ್ತದೆ.

**ವಿದೇಶಿ ಕೆಲಸದಲ್ಲಿ ತೊಂದರೆಯಾದರೆ ಕೇಂದ್ರದಿಂದ ಸಹಾಯ:**

ನಾಲ್ಕನೆ ಹಂತ, ನಾವು ವಿದೇಶದಲ್ಲಿ ಕೆಲಸ ಮಾಡುತ್ತಿರುವಾಗ ನಮಗೆ ಕೆಲಸದ ಸಮಯದಲ್ಲಿ ಯಾವುದೇ ರೀತಿಯ ಸಹಾಯಗಳನ್ನು ಭಾರತ ಸರ್ಕಾರದಿಂದ ಪಡೆಯಬೇಕಾದಾಗ, ಅವು ಮುಖ್ಯವಾಗಿ ನಮ್ಮ ಕಲ್ಯಾಣ ಸೇವೆಗಳಾದ ಸಾಂಸ್ಕೃತಿಕ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣೆಗಳಲ್ಲಿ ಭಾಗವಹಿಸುವಿಕೆ, ಭಾರತೀಯ ಪ್ರಜೆಗಳು ಒಗ್ಗೂಡಿ ಸಂಭ್ರಮಿಸುವ ಸಮಾರಂಭಗಳಲ್ಲಿ ಭಾಗವಹಿಸುವುದು, ನಾವು ಕೆಲಸ ಮಾಡುತ್ತಿರುವ ವಿದೇಶದ ಭಾರತೀಯ ಕಛೇರಿಗಳಲ್ಲಿ ವೈಯಕ್ತಿಕ ಮತ್ತು ಗುಂಪು ಚರ್ಚೆಗಳಲ್ಲಿ ಭಾಗವಹಿಸುವುದು, ಸಂಬಳ, ಕೆಲಸದ ಸಮಯ, ಸುರಕ್ಷತೆ, ಕೆಲಸದ ಹೆಚ್ಚಿನ ಹೊರೆ, ಆರೋಗ್ಯ, ಉದ್ಯೋಗದಾತರ ಜೊತೆ ಆದ ಒಪ್ಪಂದದ ಪಾಲನೆಯಾಗದಿರುವುದು, ಇಂತಹ ಸಂದರ್ಭಗಳಲ್ಲಿ ಕೆಲಸದಲ್ಲಿ ಏನಾದರೂ ತೊಂದರೆಗಳಾದಾಗ ಕೇಂದ್ರದಿಂದ ಸಹಾಯವನ್ನು ಪಡೆಯಬಹುದಾಗಿದೆ.

**ಮಹಿಳಾ ವಲಸಿಗರಿಗೆ ವಿಶೇಷ ಕಾಳಜಿ:**

ಅಂತಾರಾಷ್ಟ್ರೀಯ ವಲಸೆ ಕೇಂದ್ರದ ಮೂಲಕ ಕರ್ನಾಟಕದ ಯುವಕ/ಯುವತಿಯರಿಗೆ ಉದ್ಯೋಗಾವಕಾಶ ಕಲ್ಪಿಸುವುದರ ಜೊತೆಗೆ ಮತ್ತು ಕರ್ನಾಟಕವನ್ನು ಜಾಗತಿಕ ಮಾರುಕಟ್ಟೆಯಲ್ಲಿ ನುರಿತ ತರಬೇತಿ ಪಡೆದ ಹಾಗೂ ಪ್ರಮಾಣೀಕೃತ ಕಾರ್ಮಿಕರ ಕೇಂದ್ರವಾಗಿಸುವ ಗುರಿಯನ್ನು ಹೊಂದಲಾಗಿದೆ. ಅತೀ ಮುಖ್ಯವಾಗಿ ಮಹಿಳಾ ವಲಸಿಗರಿಗೆ ಸರ್ಕಾರ ವಿಶೇಷ ಕಾಳಜಿಯನ್ನು ವಹಿಸಿದ್ದು, ಮನೆಗೆಲಸ ಮಾಡಲು ವಿದೇಶಕ್ಕೆ ಹೋಗುವ ಕಾರ್ಮಿಕರು ಸೇರಿದಂತೆ ಮಹಿಳೆಯರಿಗೆ ವಿಶೇಷವಾಗಿ ಕೌನ್ಸಿಲಿಂಗ್ ಮಾಡಲಾಗುವುದು. ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ವಿದೇಶದಲ್ಲಿ ಕೆಲಸ ಮಾಡಲಿಚ್ಚಿಸುವ ಮಹಿಳೆಯರನ್ನು ಕಳುಹಿಸುವ ಏಕೈಕ ಅಂಗೀಕೃತ ಸಂಸ್ಥೆಯಾಗಿದೆ.


ಅದರ ಜೊತೆಗೆ, ಹಲವು ವರ್ಷಗಳು ವಿದೇಶದಲ್ಲಿ ಕೆಲಸ ನಿರ್ವಹಿಸಿ ಮರಳಿ ನಮ್ಮ ಗ್ರಾಮ/ನಗರಗಳಲ್ಲಿ ಸಾಮಾಜಿಕ ಜೀವನವನ್ನು ನೆಲೆಗೊಳಿಸುವ ಪ್ರಕ್ರಿಯೆಯಲ್ಲಿಯೂ ಸರ್ಕಾರದಿಂದ ಸೇವೆಯನ್ನು ಒದಗಿಸುವಲ್ಲಿ ಕೇಂದ್ರ ನೆರವಾಗಲಿದೆ.

ಈ ಮೇಲೆ ತಿಳಿಸಿದ ಎಲ್ಲಾ ಹಂತಗಳಲ್ಲಿ, ವಿದೇಶದ ಉದ್ಯೋಗಾಕಾಂಕ್ಷಿಗಳಿಗೆ ವಿಷಯಗಳ ಪರಿಚಯ ಮಾಡಿಸಲು, ತರಬೇತಿಗಳನ್ನು ನೀಡಲು, ಮಾರ್ಗದರ್ಶನ ಮಾಡಲು, ಸಹಾಯವಾಣಿಗಳ ಸೇವೆಗಳನ್ನು ಒದಗಿಸಲು ವಲಸೆ ಕೇಂದ್ರವು ಉತ್ತಮ ವೇದಿಕೆಯಾಗಿದೆ. ತುಮಕೂರಿನ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿಯಲ್ಲಿ ವಲಸೆ ಮಾಹಿತಿ ಕೇಂದ್ರವನ್ನು ಹೊಂದಿರುವುದರ ಜೊತೆಗೆ, ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಈ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ನಾಲ್ಕು ವಲಯವಾರು ಕೇಂದ್ರ ಸ್ಥಳಗಳಲ್ಲಿ ವಲಯ ಕೇಂದ್ರಗಳನ್ನು ಹೊಂದಿದ್ದು, ಬೆಂಗಳೂರಿನಲ್ಲಿ ರಾಜ್ಯ ಕಛೇರಿಯನ್ನು ಹೊಂದಿದೆ.

ಈ ಸೇವೆಗಳನ್ನು ಪಡೆಯಲು ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿಯಲ್ಲಿರುವ ವಲಸೆ ಮಾಹಿತಿ ಕೇಂದ್ರ ಅಥವಾ ದೂರವಾಣಿ ಸಂಖ್ಯೆ 0816-2255652ನ್ನು ಸಂಪರ್ಕಿಸಬಹುದು ಅಥವಾ ಅಂತರ್ಜಾಲದ ವಿಳಾಸ http://imck.online/session/signin ನಲ್ಲಿಯೂ ನೋಂದಣಿ ಮಾಡಿ ಸೇವೆಗಳನ್ನು ಪಡೆಯಬಹುದು. ■



Downloaded From:www.kpscvaani.com



### ಮಹಿಳೆಯರ ಮುಂಚೂಣಿಯಲ್ಲಿ ಯಶಸ್ವಿಯಾದ

# ಅಂಕೋಲ ಉಪ್ಪಿನ ಸತ್ಯಾಗ್ರಹ

**ಅಂಕೋಲದ ಉಪ್ಪಿನ ಸತ್ಯಾಗ್ರಹದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಉಪ್ಪು ತಯಾರಿಸುವ ಮೂಲಕ ಅಹಿಂಸಾತ್ಮಕವಾಗಿ ಚಳುವಳಿಯನ್ನು ಯಶಸ್ವಿಯಾಗಿಸಿದರು.**

ಎನ್. ಜಗನ್ನಾಥ ಪ್ರಕಾಶ್

ಜಲಿಯನ್ ವಾಲಾಬಾಗ್‌ನಲ್ಲಿ ಬ್ರಿಟಿಷರು ನಡೆಸಿದ ಮಾರಣ ಹೋಮ ಇಡೀ ಜಗತ್ತನ್ನೇ ಬೆಚ್ಚಿ ಬೀಳಿಸಿತ್ತು. ಆದರೆ ಭಾರತವನ್ನು ತನ್ನ ಬಿಗಿಮುಷ್ಠಿಯಲ್ಲಿ ಹಿಡಿದಿದ್ದ ಬ್ರಿಟಿಷ್ ಸರ್ಕಾರವೇ ಸಾವಿರಾರು ಮುಗ್ಧ ಭಾರತೀಯರನ್ನು ಬ್ರಿಟಿಷ್ ಸೇನೆ ಆಹುತಿ ತೆಗೆದುಕೊಂಡಿದ್ದಕ್ಕೆ ಏನೂ ಅನ್ನಿಸಲಿಲ್ಲ. ಇಂಥ ಘೋರ ಘಟನೆ ನಡೆದು ಭಾರತೀಯರೆಲ್ಲರೂ ಬ್ರಿಟಿಷರ ಕೃತ್ಯಗಳನ್ನು ಖಂಡಿಸಿದ ಮೇಲೂ ಬಿಳಿಯರು ಬದಲಾಗಲಿಲ್ಲ.

ಮಂದಗತಿಯಲ್ಲೇ ಸಾಗಿದ್ದ ಸ್ವಾತಂತ್ರ್ಯ ಸಮರಕ್ಕೆ ನಮಗೆ ಸಂಪೂರ್ಣ ಸ್ವರಾಜ್ಯ ಬೇಕೆಂಬ ಘೋಷಣೆ ತುಸು ಕಾವು ತಂದು ಕೊಟ್ಟಿದರೂ ಹೆಚ್ಚಿನ ಪರಿಣಾಮ ಘಟಿಸಲಿಲ್ಲ. ಗಾಂಧೀಜಿ ಭಾರತೀಯರ ಪರ ಮಂಡಿಸಿದ ಬೇಡಿಕೆಗಳಿಗೂ ಬ್ರಿಟಿಷ್ ಸರ್ಕಾರ ಸ್ಪಂದಿಸಲಿಲ್ಲ. ಬಾಪೂಜಿ ಅಹಿಂಸಾತ್ಮಕವಾಗಿಯೇ ಸರ್ಕಾರವನ್ನು ಎದುರಿಸಬೇಕೆಂದು ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದರು.

ಭಾರತೀಯರ ಬೇಡಿಕೆಯನ್ನು ಬ್ರಿಟಿಷ್ ಸರ್ಕಾರ ತಿರಸ್ಕರಿಸಿತು. ಈ ಬೇಡಿಕೆಗಳಲ್ಲಿ ಉಪ್ಪಿನ ಮೇಲೆ ತೆರಿಗೆ ರದ್ದತಿ ಕೂಡ ಸೇರಿತ್ತು. ಸಾರಾಸಗಟಾಗಿ ಬ್ರಿಟಿಷ್ ಸರ್ಕಾರ ನಿರಾಕರಿಸಿದಾಗ ಗಾಂಧೀಜಿ ಇನ್ನೊಂದು ಚಳವಳಿ ಹೂಡಲು ಸಿದ್ಧತೆ ಕೈಗೊಂಡರು. ಅದು ಕರ ನಿರಾಕರಣೆ ಚಳವಳಿ. ಅದರಲ್ಲಿ ಉಪ್ಪಿನ ಕರ ನಿರಾಕರಿಸುವ ಅಂಶವೂ ಸೇರಿತ್ತು.

ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆದು 11 ವರ್ಷಗಳಾಗಿದ್ದವು. ಅದರ 11ನೇ ವಾರ್ಷಿಕ ದಿನವಾದ 1930ರ ಏಪ್ರಿಲ್ 6 ರಂದು ಉಪ್ಪಿನ ಕಾಯ್ದೆ ಮುರಿದು ದಂಡಿಯಲ್ಲಿ ತಾವೇ ಉಪ್ಪು ತಯಾರಿಸುವುದಾಗಿ ಬಾಪು ಘೋಷಿಸಿದರು.


Downloaded From:www.kpscvaani.com

ಈ ಉಪ್ಪಿನ ಸತ್ಯಾಗ್ರಹ ಕನ್ನಡ ನೆಲದಲ್ಲಿ ಪ್ರತಿಧ್ವನಿಸಿತು. ಕರ್ನಾಟಕದ ಕರಾವಳಿಯಲ್ಲೂ ಉಪ್ಪಿನ ಸತ್ಯಾಗ್ರಹ ನಡೆಸಬೇಕೆಂದು ಚಳವಳಿಯ ಮುಖಂಡರು ನಿರ್ಧಾರ ಮಾಡಿದರು. ಇದಕ್ಕಾಗಿ ಆಯ್ಕೆಯಾಗಿದ್ದು ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲೂಕು. ಕಡಲತಡಿಯ ಅಂಕೋಲ ಉಪ್ಪಿನ ಸತ್ಯಾಗ್ರಹಕ್ಕೆ ಆಯ್ಕೆಯಾದ ಬಳಿಕ ಅದನ್ನು ಯಶಸ್ವಿಗೊಳಿಸಲು ಬೇಕಾದ ಎಲ್ಲಾ ಕ್ರಮಗಳು ಶುರುವಾದವು.

ಆ ವೇಳೆಗಾಗಲೇ ಹಿಂದುಸ್ತಾನಿ ಸೇವಾದಳ ರಾಜ್ಯದ ಬಹಳ ಕಡೆ ಪ್ರಚಲಿತವಾಗಿದ್ದು ಎಲ್ಲಾ ವಯೋಮಾನದವರು ವಿಶೇಷವಾಗಿ ಯುವ ಸಮೂಹ ಸ್ವಯಂ ಸೇವಕರಾಗಲು ಉತ್ಸುಕರಾಗಿದ್ದರು. ಈ ಸ್ವಯಂಸೇವಕ ತಂಡಗಳು ಮಹಾತ್ಮರ ಉಪ್ಪಿನ ಸತ್ಯಾಗ್ರಹದ ಉದ್ದೇಶವನ್ನು ಹಳ್ಳಿ ಹಳ್ಳಿಗೂ ತಲುಪಿಸಲು ಮುಂದಾದವು. ಇದು ಸ್ವಾತಂತ್ರ್ಯ ಹೋರಾಟಕ್ಕೆ ಪೂರಕವಾಗಿ ನಡೆಯಿತು.

1930 ಏಪ್ರಿಲ್ 13 ರಂದು ಅಂಕೋಲದಲ್ಲಿ ಉಪ್ಪಿನ ಸತ್ಯಾಗ್ರಹ ಆಂದೋಲನ ಆರಂಭವಾಗಬೇಕೆಂದು ನಿಶ್ಚಯವಾಯಿತು. ಅಂಕೋಲ ಆಸುಪಾಸಿನ ಜನರ ಜತೆ ಕೈ ಜೋಡಿಸಲು ಹುಬ್ಬಳ್ಳಿ, ಬೆಳಗಾವಿ, ದಾವಣಗೆರೆ, ಉಡುಪಿಗಳಿಂದಲೂ ಸ್ವಯಂಸೇವಕರು ಬರಲಾರಂಭಿಸಿದಾಗ ಸರ್ಕಾರವೂ ಕೈಕಟ್ಟಿ ಕೂರಲಿಲ್ಲ. ಜಿಲ್ಲಾ ಆಡಳಿತ, ಜಿಲ್ಲಾಧಿಕಾರಿ, ಪೊಲೀಸ್ ಅಧಿಕಾರಿಗಳು ಅಂಕೋಲಕ್ಕೆ ಬಂದು ಕ್ಯಾಂಪ್ ಮಾಡಿದರು.

ಸತ್ಯಾಗ್ರಹ ತಯಾರಿ ಶಿಬಿರಗಳ ಮೇಲೆ, ಸ್ವಯಂ ಸೇವಕರ, ನಾಯಕರ ಚಲನ–ವಲನಗಳ ಮೇಲೆ ಪೊಲೀಸರು ಕಣ್ಣಿಟ್ಟರು. ಆಗಾಗ ಅಲ್ಲಿ ಏರ್ಪಡಾಗುತ್ತಿದ್ದ ಸಭೆ–ಚರ್ಚೆಗಳ ಬಗೆಗೂ ಅವರು ಮಾಹಿತಿ ಸಂಗ್ರಹದಲ್ಲಿ ತೊಡಗಿದ್ದರು.

ಏಪ್ರಿಲ್ 13ರ ದಿನ ಬಂದೇ ಬಂತು. ಸೂರ್ಯ ಮೂಡುವ ಮುನ್ನವೇ ಸ್ಥಳೀಯ ಜನತೆ, ಸ್ವಯಂ ಸೇವಕರು ಶಿಸ್ತಿನಿಂದ ಮೆರವಣಿಗೆ ನಡೆಸಿದರು. ಪ್ರಭಾತ ಭೇರಿಯಲ್ಲಿ ದೇಶಭಕ್ತಿ ಗೀತೆಗಳು ಹಾಡಲ್ಪಟ್ಟವು.

ಸತ್ಯಾಗ್ರಹದ ಮುಖ್ಯ ಉದ್ದೇಶ ಕಾಲ ಭಂಗ ಮಾಡುವುದಾಗಿತ್ತು. ಅದು ಹೇಗೆ ನಡೆಯಬೇಕೆಂಬುದನ್ನು ವ್ಯವಸ್ಥಿತವಾಗಿ ಸಜ್ಜುಗೊಳಿಸಲಾಗಿತ್ತು. ಇದೆಲ್ಲ ತಯಾರಿ

> "ಪುಣ್ಯ ಭಾರತವನು ಸುಲಿದು
> ಜನರ ಶಕ್ತಿಯನ್ನು ಸೆಳೆದು
> ಉಪ್ಪಿಗೆ ಕರವ ಹಾಕಿದಂಥ
> ವೈರಿಗಳನ್ನು ಕಾದು ನಿಂತ
> ಅಂಕೋಲೆಯವರು ನಾವು ಪರಮ
> ಧನ್ಯರು"
> – ಇದು ಅಂಕೋಲೆ ಉಪ್ಪಿನ ಸತ್ಯಾಗ್ರಹದ ಯಶಸ್ಸು ಕುರಿತು ಕವಿ ದಿನಕರ ದೇಸಾಯಿ ಅವರು ಬರೆದ ಕವನದ ಕೆಲವು ಸಾಲುಗಳು.

ನಡೆಯುತ್ತಿದ್ದಾಗ ಪೊಲೀಸರು ಅಧಿಕಾರಿ ವರ್ಗ ಸುಮ್ಮನಿರಲಿಲ್ಲ. ಸ್ವಯಂಸೇವಕರ ಶಿಬಿರಗಳನ್ನು ತೆರವು ಮಾಡಲು ತಾಕೀತು ಮಾಡಿದ್ದರು. ಅನೇಕ ಮುಂದಾಳುಗಳನ್ನು ಬಂಧಿಸಿದರು. ಹೊರಗಿನಿಂದ ಬರುವವರನ್ನು ಮಾರ್ಗ ಮಧ್ಯದಲ್ಲೇ ತಡೆದರು. ಮೋಟಾರು ವಾಹನಗಳ ಸಂಚಾರಕ್ಕೂ ತಡೆ ಒಡ್ಡಿದರು. ಇಷ್ಟಾದರೂ ಸಾವಿರಾರು ಜನರು ಅಂಕೋಲ ತಲುಪುವುದನ್ನು ಅವರಿಂದ ತಪ್ಪಿಸಲಾಗಲಿಲ್ಲ.

ಮಧ್ಯಾಹ್ನ 1 ಗಂಟೆಗೆ ಮೆರವಣಿಗೆ ಹೊರಡಲು ನಿರ್ಧಾರವಾಗಿದ್ದ ಜನಜಂಗುಳಿಯಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚಿತ್ತು. ಜಯಘೋಷಗಳು ಮೊಳಗಿದವು. ಭಾರತ್ ಮಾತಾ ಕಿ ಜೈ ಮಹಾತ್ಮಾ ಗಾಂಧೀಜಿ ಕಿ ಜೈ ಘೋಷಣೆಗಳು ಮೊಳಗಿದವು.

ಮೆರವಣಿಗೆಯಲ್ಲಿ ಮಣ್ಣಿನ ಗಡಿಗೆ, ಬಿದಿರು ಬುಟ್ಟಿಗಳನ್ನು ಹೊತ್ತುಕೊಂಡಿದ್ದ ಮಹಿಳಾ ಸ್ವಯಂ ಸೇವಕರು ಶಿಸ್ತಿನಿಂದ ಶಾಂತಿಯುತವಾಗಿ ಸಾಗುತ್ತಿದ್ದರು. ಹೀಗಾಗಿ ಪೊಲೀಸರಿಗೂ ಕೆಲಸವಿರಲಿಲ್ಲ. ಸ್ವಾತಂತ್ರ್ಯ ಸಮರದ ಜ್ವಾಲೆ ಹಬ್ಬಿತ್ತು. ಹೀಗೆ ಸಾಗಿದ ಮೆರವಣಿಗೆ ನಿಗದಿಯಂತೆ ವಿಶಾಲವಾದ ಮೈದಾನದಂತಹ ಸ್ಥಳದಲ್ಲಿ ನಿಂತಿತು. ಮೆರವಣಿಗೆಯಲ್ಲಿದ್ದ ಕೆಲವರು ಗಡಿಗೆ ಮತ್ತು ಬುಟ್ಟಿಗಳೊಂದಿಗೆ ಸಮುದ್ರ ತೀರಕ್ಕೆ ಹೊರಟರು.

ಸಮುದ್ರಕ್ಕೆ ಹೋದ ಮಹಿಳೆಯರು ಉಪ್ಪು ನೀರು ಹಾಗೂ ಉಪ್ಪು ಮಣ್ಣು ಹೊತ್ತು ತಂದು ಜನರ ಮಧ್ಯೆ ವರ್ತುಲ ಮಾಡಿಕೊಂಡು ನೀರಗಡಿಗೆ–ಮಣ್ಣು ಬುಟ್ಟಿಗಳನ್ನು ಇಟ್ಟವರೇ, ಒಲೆ ಹೂಡಿ ಬೆಂಕಿ ಹೊತ್ತಿಸಿ ಉಪ್ಪು ನೀರಿನಿಂದ ಉಪ್ಪು ಮಾಡುವ ಕಾಯಕದಲ್ಲಿ ನಿರತರಾದರು. ತಯಾರಾದ ಉಪ್ಪು ಹೊತ್ತುಕೊಂಡು ತಾಲೂಕು ಕಚೇರಿ ಬಳಿ ತಲುಪಿದ ಸತ್ಯಾಗ್ರಹಿಗಳು ಜನರಿಗೆ ತಾವು ತಯಾರಿಸಿದ ಉಪ್ಪು ತೋರಿಸಿದರು. ಅಲ್ಲದೆ ಸಂತೆಗಳಲ್ಲಿ ಉಪ್ಪು ಮಾರಿದರು.

ಈ ಚಳುವಳಿಗೆ ಕಾಯಿದೆ ಭಂಗ ಹಾಗೂ ಕರ ನಿರಾಕರಣೆ ಎರಡು ಅಂಶಗಳಿದ್ದವು. ಉಪ್ಪು ನೀರು ತಂದು ಉಪ್ಪು ತಯಾರಿಸಿ ಸಾರ್ವಜನಿಕವಾಗಿ ಮಾರಾಟ ಮಾಡಿದ ಸ್ವಯಂಸೇವಕರನ್ನು ಬಂಧಿಸದೆ ಪೊಲೀಸರು ನಾಯಕರನ್ನು ಬಂಧಿಸಲು ಶುರು ಮಾಡಿದರು. ನಾಯಕರ ಬಂಧನದ ಹೊರತಾಗಿಯೂ ಚಳುವಳಿ ಮುಂದುವರೆಯಿತು.

ಮಂಜಗುಣಿ, ಹಿಚಕಡ, ಕೇಣಿ, ಬೆಳಂಬಾರ, ಕಡವಾ ಬೇಲಿಕೇರಿ ಮುಂತಾದ ಹಳ್ಳಿಗಳಿಂದ ಬಂದ ಜನ ಉಪ್ಪು ನೀರು ಮತ್ತು ಮಣ್ಣು ಸಂಗ್ರಹಿಸಿ ತಮ್ಮ ಮನೆಗಳ ಹತ್ತಿರವೇ ಉಪ್ಪು ತಯಾರಿಸುವಲ್ಲಿ ನಿರತರಾದಾಗ ಅವರಲ್ಲಿ ಮಹಿಳೆಯರ ಸಂಖ್ಯೆಯೂ ಹೆಚ್ಚಾಯಿತು. ನಿತ್ಯದ ಮೆರವಣಿಗೆಯಲ್ಲೂ ಸ್ತ್ರೀ ಸಮೂಹ ಹೆಚ್ಚಿತ್ತು.

ಕಾಯಿದೆ ಭಂಗಕ್ಕೆ ಬೆಂಬಲಕೊಟ್ಟ ಮುಂದಾಳುಗಳನ್ನು ಪೊಲೀಸರು ಬಂಧಿಸಿ ಜೈಲಿಗೆ ಅಟ್ಟಿದರು. ಜುಲ್ಮಾನೆಯನ್ನು ಹಾಕಿದರು, ಹಮ್ಮಣ್ಣ ಗೋವಿಂದ ನಾಯ್ಕ ವಂದಿಗೆ, ಬೀರಣ್ಣ ಬೊಮ್ಮಯ್ಯ ನಾಯ್ಕ ಕಣಗಿಲ, ಬೊಮ್ಮಯ್ಯ ಪಾಕ ನಾಯ್ಕ, ಬಾಸ್ಗೋಡ, ದೇವಣ್ಣ ನಾಯ್ಕ, ಜೋಗಿ ಬೀರಣ್ಣ ನಾಯ್ಕ ಮುಂತಾದ ಧುರೀಣರು ಪೊಲೀಸರಿಂದ ಬಂಧಿತರಾದರು. ಸ್ವಯಂ ಸೇವಕರನ್ನು ಪೊಲೀಸರು ಬಿಡಲಿಲ್ಲ.

ಇವರಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳೆಯರೂ ಇದ್ದರು. ನೂರಾರು ಮಹಿಳೆಯರನ್ನು ಪೊಲೀಸರು ಬಂಧಿಸಿ ಜೈಲಿಗಟ್ಟಿದರು. ಅನೇಕ ಹೆಂಗಸರು ತಮ್ಮ ಎಳೆ ಮಕ್ಕಳನ್ನು ಎತ್ತಿಕೊಂಡು ಬಿಸಿಲಿನಲ್ಲೇ ಮೆರವಣಿಗೆಯಲ್ಲಿ ನಡೆದು ಬಂದಿದ್ದರು. ಕರಕೊಟ್ಟ ಉಪ್ಪನ್ನು ಯಾರೂ ಬಳಸಬಾರದೆಂಬ ಕೂಗೆದ್ದಿತು. ಅಂದು ಅಂಕೋಲೆಯಲ್ಲಿ ವಾರಗಟ್ಟಲೆ ನಡೆದ ಚಳವಳಿಯ ಫಲ. ಕೊನೆಗೆ ಸರ್ಕಾರ ತಾನು ವಶ ಮಾಡಿಕೊಂಡ ಉಪ್ಪನ್ನು ವಾಪಸು ಮಾಡಿತು.

ಅದೇ ಏಪ್ರಿಲ್ 26 ರಂದು ಕರ್ನಾಟಕದಲ್ಲಿ ಕಾಯಿದೆ ಭಂಗ ದಿನಾಚರಣೆ ನಡೆದಾಗಲೂ ಮೆರವಣಿಗೆಯಲ್ಲಿ ಮಹಿಳೆಯರೇ ಮುಂಚೂಣಿಯಲ್ಲಿದ್ದು ಚಳುವಳಿ ಯಶಸ್ಸಿಗೆ ಕಾರಣರಾದರು. ■



Downloaded From:www.kpscvaani.com

# ‘ಹಸಿರು ಗ್ರಾಮ’

## ಯೋಜನೆಯಡಿ ಮಲೆನಾಡಿಗೆ ಮತ್ತಷ್ಟು ಹಸಿರು ಹೊದಿಕೆ

**ಹಸಿರು ಸೊಬಗಿನ ಚಿಕ್ಕಮಗಳೂರು ಜಿಲ್ಲೆಯನ್ನು ಇನ್ನಷ್ಟು ಹಸಿರನ್ನಾಗಿಸುವ ಉದ್ದೇಶದಿಂದ ’ಹಸಿರು ಗ್ರಾಮ’ ಎಂಬ ಯೋಜನೆ ಜಾರಿಗೊಂಡಿದೆ.**

ಬಿ. ಅಬ್ದುಲ್‌ಖಾದರ್ ಶಾ




ಮಲೆನಾಡು ಎಂದರೆ ಕಾಡು, ಗಿರಿ, ಪ್ರಾಣಿ, ಹಳ್ಳ, ನದಿ, ತೊರೆ, ಬೆಟ್ಟ ಗುಡ್ಡಗಳು ಸಮ್ಮಿಲಿಸಿದ ಪ್ರಕೃತಿ ರಮಣೀಯವಾದ ಭೂದೃಶ್ಯವೇ ಕಣ್ಣಮುಂದೆ ನಿಲ್ಲುತ್ತದೆ. ಇಂತಹ ಹಸಿರು ಸೊಬಗಿನ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎರಡೂವರೆ ಲಕ್ಷಕ್ಕೂ ಅಧಿಕ ಮರಗಳನ್ನು ನೆಡುವ ಮೂಲಕ ಇನ್ನಷ್ಟು ಹಸಿರಿನ ಹೊದಿಕೆ ಹೊದಿಸಲು ಯೋಜನೆಯೊಂದು ಸದ್ದಿಲ್ಲದೆ ಜಾರಿಗೊಳ್ಳುತ್ತಿದೆ.

ಈಗಾಗಲೇ ಆಯುಷ್ಮಾನ್ ಭಾರತ್ ನೋಂದಣಿ ಮತ್ತು ಸಾಂಕ್ರಾಮಿಕವಲ್ಲದ ರೋಗಗಳಿಂದ ಬಳಲುತ್ತಿರುವ ರೋಗಿಗಳ ತಪಾಸಣೆಯನ್ನು ಸಂಪೂರ್ಣಗೊಳಿಸುವ ಮೂಲಕ ರಾಷ್ಟ್ರದ ಮೊದಲ ಜಿಲ್ಲೆಯಾಗಿ ಗುರುತಿಸಲ್ಪಟ್ಟ ಚಿಕ್ಕಮಗಳೂರು ಜಿಲ್ಲೆಯು ಈ ಮೂಲಕ ಇನ್ನೊಂದು ಮಹತ್ವದ ಹೆಜ್ಜೆಯತ್ತ ದಾಪುಗಾಲು ಇಡುತ್ತಿದೆ.


Downloaded From:www.kpscvaani.com




ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಅರಣ್ಯೀಕರಣ, ನೆಡುತೋಪುಗಳು, ಅರಣ್ಯಜಮೀನಿನಲ್ಲಿ ಮತ್ತು ಸಾಮಾನ್ಯ ಜಮೀನುಗಳಲ್ಲಿ ಗಿಡಗಳ ನೆಡುವಿಕೆ, ರಸ್ತೆಯ ಅಂಚುಗಳು, ನಾಲಾಬದಿಗಳು, ಕೆರೆಯಂಗಳಗಳು ಮತ್ತು ಕರಾವಳಿ ಪ್ರದೇಶಗಳಲ್ಲಿ ಅರಣ್ಯೀಕರಣ ಮಾಡುವ ಅವಕಾಶ ಕಲ್ಪಿಸಲಾಗಿರುತ್ತದೆ. ಇದನ್ನು ಬಳಸಿಕೊಂಡು, ಜಿಲ್ಲೆಯಲ್ಲಿ ಹಸಿರಿನ ವ್ಯಾಪ್ತಿಯನ್ನು ಇನ್ನಷ್ಟು ಹೆಚ್ಚಿಸಲು ಅನುಷ್ಠಾನಗೊಳಿಸುತ್ತಿರುವ ಯೋಜನೆಯೇ "ಹಸಿರು ಗ್ರಾಮ".

ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಪ್ರತೀ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕನಿಷ್ಠ 1000 ಸಸಿಗಳನ್ನು ಹಾಗೂ ಜಿಲ್ಲೆಯಲ್ಲಿ ಒಟ್ಟಾರೆ 2.50 ಲಕ್ಷ ಗಿಡಗಳನ್ನು ನೆಟ್ಟು, ಅವುಗಳನ್ನು 3 ವರ್ಷಗಳ ಕಾಲ ಸಂರಕ್ಷಿಸುವ ಮೂಲಕ ಹಾಗೂ ಮರಗಳ ಕುರಿತು ಸಾರ್ವಜನಿಕರಿಗೆ ಮತ್ತು ಮಕ್ಕಳಿಗೆ ಅರಿವು ಮೂಡಿಸಿ ನಿರಂತರವಾಗಿ ಅವರ ವ್ಯಾಪ್ತಿಯಲ್ಲಿ ಹಸಿರೀಕರಣ ಕಾರ್ಯಗಳಿಗೆ ಸ್ವಯಂಪ್ರೇರಿತವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸುವುದು ಮೂಲ ಉದ್ದೇಶವಾಗಿರುತ್ತದೆ.

ಹಸಿರು ಗ್ರಾಮದ ಪ್ರಮುಖ ವಿಶೇಷತೆಯೇನೆಂದರೆ, ಸಾಮಾನ್ಯವಾಗಿ ವನಮಹೋತ್ಸವ ಕಾರ್ಯಕ್ರಮಗಳಲ್ಲಿ ಚಿಕ್ಕ ಸಸಿಗಳನ್ನು ನೆಡಲಾಗುತ್ತದೆ. ಇಂತಹ ಗಿಡಗಳು ನಿರಂತರ ಪೋಷಣೆ ಇಲ್ಲದಿದ್ದರೆ ಬದುಕುಳಿಯುವ ಸಾಧ್ಯತೆಗಳು ಕ್ಷೀಣವಾಗಿರುತ್ತದೆ. ಆದರೆ, ಹಸಿರು ಗ್ರಾಮ ಅಭಿಯಾನದಲ್ಲಿ ಸಾಕಷ್ಟು ಬೆಳೆದ ಸಸಿಗಳನ್ನೇ ನೆಡಲಾಗುತ್ತಿದೆ. ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಚಿಕ್ಕಮಗಳೂರು ಸಾಮಾಜಿಕ ಅರಣ್ಯ ವಿಭಾಗದ ವಿವಿಧ ತಾಲ್ಲೂಕಿನ 9 ಸಸ್ಯ ಕ್ಷೇತ್ರಗಳಲ್ಲಿ 10 X 6 ಅಳತೆಯ 2.50 ಲಕ್ಷ ಸದೃಢ ಸಸಿಗಳನ್ನು ಬೆಳೆಸಲಾಗಿದೆ. ಈ ಸಸಿಗಳು ಬದುಕುಳಿಯುವ ಸರಾಸರಿ ಪ್ರಮಾಣವು ಶೇ.95ರಷ್ಟು ಇರುತ್ತದೆ. 3 ವರ್ಷಗಳ ಕಾಲ ಗಿಡಗಳ ಸಂರಕ್ಷಣೆ ಮತ್ತು ಪೋಷಣೆಯನ್ನು ನಿರ್ವಹಿಸಿದ್ದಲ್ಲಿ ಈ ಗಿಡಗಳು ಮುಂದೆ ಹೆಮ್ಮರವಾಗಿ ನಮ್ಮ ಪರಿಸರಕ್ಕೆ, ಗ್ರಾಮ ಪಂಚಾಯಿತಿಯ ಪರಿಮಿತಿಯಲ್ಲಿ ಸ್ವಚ್ಛ ಗಾಳಿ ನೀಡಲು ಹಾಗೂ ಪ್ರಾಕೃತಿಕ ಸಮತೋಲನವನ್ನು ಕಾಯ್ದುಕೊಳ್ಳಲು ಪರಿಣಾಮಕಾರಿಯಾಗಿ ಸಹಕಾರಿಯಾಗಲಿವೆ. ಒಂದು ವೇಳೆ ಈ ಅಭಿಯಾನದಲ್ಲಿ ನೆಟ್ಟಗಿಡ ಮಧ್ಯದಲ್ಲಿ ಸತ್ತು ಹೋದರೆ, ತಕ್ಷಣವೇ ಅದೇ ಸ್ಥಳದಲ್ಲಿ ಮತ್ತೊಂದು ಗಿಡ ನೆಡಲಾಗುತ್ತದೆ.

ಜೂನ್ 5 ವಿಶ್ವ ಪರಿಸರ ದಿನಾಚರಣೆಯಂದು ಈ "ಹಸಿರುಗ್ರಾಮ" ಕಾರ್ಯಕ್ರಮಕ್ಕೆ ಅಧಿಕೃತವಾಗಿ ಚಿಕ್ಕಮಗಳೂರು ತಾಲೂಕಿನ ಬಿಳೇಕಲ್ಲಹಳ್ಳಿ ಗ್ರಾಮದಲ್ಲಿ ಶಾಸಕ ಸಿ.ಟಿ. ರವಿ ಅವರು ಚಾಲನೆ ನೀಡಿದರು. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಜಿ. ಪ್ರಭು ಅವರು ಈ ಹಸಿರುಗ್ರಾಮ ಯೋಜನೆಯ ರುವಾರಿ. 4 ಹಂತಗಳಲ್ಲಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಿಂದ ಏಕಕಾಲಕ್ಕೆ ಹಸಿರುಗ್ರಾಮದಡಿ ವರ್ಗವಾರು ಗಿಡಗಳನ್ನು ನೆಡಲಾಗುತ್ತಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಾಗೂ ಸಾಮಾಜಿಕ ಅರಣ್ಯ ಇಲಾಖೆಯ ಸಹಭಾಗಿತ್ವದಲ್ಲಿ ನಡೆಯುವ ಈ ಅಭಿಯಾನದಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಕಚೇರಿಗಳು, ಆಸ್ಪತ್ರೆ, ಅಂಗನವಾಡಿ, ಶಾಲಾ/ಕಾಲೇಜು, ವಸತಿ ಶಾಲೆಗಳು, ಪಶು ವೈದ್ಯಕೀಯ ಆಸ್ಪತ್ರೆ, ಕೃಷಿ ಮತ್ತು

**ಹಸಿರು ಗ್ರಾಮ ಯೋಜನೆಯ ಸಿದ್ಧತೆ**

- ಸಾಮಾಜಿಕ ಅರಣ್ಯ ಇಲಾಖಾ ವಿಭಾಗದ ಹಾಗೂ ಮಹಾತ್ಮಗಾಂಧಿ ನರೇಗಾ ಯೋಜನೆಯ ತಾಂತ್ರಿಕ ಸಹಾಯಕ (ಅರಣ್ಯ) ತಾಂತ್ರಿಕ ಸಿಬ್ಬಂದಿಗಳು ಗಿಡಗಳನ್ನು ನೆಡುವುದು ಹಾಗೂ ನಿರ್ವಹಣೆ ಮತ್ತು ಸಂರಕ್ಷಣೆಯ ಕುರಿತು ತಾಂತ್ರಿಕ ಸಲಹೆಗಳನ್ನು ಕಾಲಕಾಲಕ್ಕೆ ನೀಡಲಿದ್ದಾರೆ.
- ವರ್ಗವಾರು ನಿಗಧಿಯಾಗಿರುವ ಕನಿಷ್ಠ ಗಿಡಗಳನ್ನು ನೆಡಲು ಬೇಡಿಕೆಯನ್ನು ಸಾಮಾಜಿಕ ಅರಣ್ಯ ವಿಭಾಗದವರು ಗ್ರಾಮ ಪಂಚಾಯಿತಿಯಿಂದ ಸ್ವೀಕರಿಸುವರು.
- ಸಾಮಾಜಿಕ ಅರಣ್ಯ ಇಲಾಖೆಯಿಂದ ಗ್ರಾಮಪಂಚಾಯಿತಿಗಳಿಗೆ ಗಿಡಗಳ ವಿತರಣೆಗೆ ವೇಳಾಪಟ್ಟಿ ಸಿದ್ಧಪಡಿಸಿಕೊಂಡು ಅದರಂತೆ ಗಿಡಗಳನ್ನು ವಿತರಿಸಲಾಗುತ್ತದೆ.
- ಗ್ರಾಮಪಂಚಾಯಿತಿಯು ಗಿಡಗಳನ್ನು ನೆಡಲು ನಿರ್ದಿಷ್ಟ ಅಳತೆಯ ಗುಂಡಿಗಳನ್ನು ಸಿದ್ಧಪಡಿಸುವರು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಡಿ "ಹಸಿರುಗ್ರಾಮ" ಅಭಿಯಾನದ ಮೇಲುಸ್ತುವಾರಿಯನ್ನು ವಹಿಸಲಾಗಿದೆ.



Downloaded From:www.kpscvaani.com



### ಗಿಡಗಳ ಸಂರಕ್ಷಣೆ ಮತ್ತು ನಿರ್ವಹಣೆ

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ "ಹಸಿರುಗ್ರಾಮ" ಅಭಿಯಾನದಡಿ ನೆಡಲಾಗುವ ಗಿಡಗಳ ಸಂಕ್ಷರಣೆ ಮತ್ತು ನಿರ್ವಹಣೆಯು ಅತೀ ಅವಶ್ಯಕ. ಈ ಗಿಡಗಳನ್ನು ಕನಿಷ್ಠ 3 ವರ್ಷಗಳ ಕಾಲ ನಿರ್ವಹಣೆ ಮತ್ತು ಸಂರಕ್ಷಣೆ ಮಾಡಿದ್ದಲ್ಲಿ ಗಿಡಗಳು ಬದುಕುಳಿಯುವ ಪ್ರಮಾಣ ಅಧಿಕ. ಈ ಅಭಿಯಾನದಡಿ ನೆಡಲಾಗುವ ಗಿಡಗಳಿಗೆ ಮುಳ್ಳಿನ ಭದ್ರತೆಯನ್ನು (Tree Guard) ಗ್ರಾ.ಪಂ. ಒದಗಿಸಲಿದೆ. ಗಿಡಗಳಿಗೆ ವಾರಕ್ಕೆ ಎರಡು ಬಾರಿ ನೀರೆರೆದು ಪೋಷಿಸುವ ಹೊಣೆಗಾರಿಕೆಯನ್ನು ಅಧಿಕಾರಿಗಳಿಗೆ ವಹಿಸಲಾಗಿದೆ.

ತೋಟಗಾರಿಕೆ, ಮುಜರಾಯಿ ಇಲಾಖೆ ಹಾಗೂ ಎಲ್ಲಾ ಜಿಲ್ಲಾ ಪಂಚಾಯಿತಿಯ ಅಧೀನ ಕಚೇರಿಗಳು), ಮಹಿಳಾ ಸ್ವಸಹಾಯ ಸಂಘಗಳು, ವಿವೇಕಾನಂದ ಸ್ವಯಂ ಸೇವಕ ಸಂಘ ಹಾಗೂ ಆಸಕ್ತ ಸ್ವಯಂ ಸೇವಾ ಸಂಸ್ಥೆಗಳು ಪಾಲುದಾರರಾಗಿರುತ್ತಾರೆ. ಹಸಿರುಗ್ರಾಮ ಅಭಿಯಾನ ಅನುಷ್ಠಾನದ ಜವಾಬ್ದಾರಿಯನ್ನು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ವಹಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯು ಭೌಗೋಳಿಕವಾಗಿ ಮಲೆನಾಡು ಮತ್ತು ಬಯಲು ಸೀಮೆಯ ಪ್ರದೇಶಗಳನ್ನು ಒಳಗೊಂಡಿರುತ್ತದೆ. ಅದರಂತೆ ಸಾಮಾಜಿಕ ಅರಣ್ಯ ವಿಭಾಗವು ಮಲೆನಾಡು ಮತ್ತು ಬಯಲು ಸೀಮೆಯ ವಾತವರಣಕ್ಕೆ ಸೂಕ್ತವಾಗುವಂತೆ ಬೆಳೆಸಿರುವ 35 ಜಾತಿಯ ವಿವಿಧ ಸಸಿಗಳನ್ನು ಜಿಲ್ಲೆಯಾದ್ಯಂತ ವಿತರಿಸಲಾಗಿದೆ.

ಗ್ರಾಮಪಂಚಾಯಿತಿ ವ್ಯಾಪ್ತಿಯ ಎಲ್ಲಾ ಶಾಲೆಗಳ ಆವರಣದಲ್ಲಿ ನೆಡಲಾದ ಗಿಡಗಳ ನಿರ್ವಹಣೆಗೆ, ಪ್ರತಿಗಿಡಕ್ಕೆ ಶಾಲೆಯ ಬೇರೆ ಬೇರೆ ತರಗತಿಯ ಕನಿಷ್ಠ 3 ವಿಧ್ಯಾರ್ಥಿಗಳನ್ನು ಶಾಲಾ ಮುಖ್ಯೋಪಾಧ್ಯಾಯರು ನೇಮಿಸಿ ಅವರಿಗೆ ನಿರಂತರ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸುವರು. ಈ ಕುರಿತ ನಿರ್ವಹಣೆಯ ಪುಸ್ತಕವನ್ನು ಶಾಲೆಯ ಮುಖ್ಯೋಪಾಧ್ಯಾಯರು ನಿರ್ವಹಿಸುತ್ತಾರೆ.

ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ, ಆಸ್ಪತ್ರೆ, ಅಂಗನವಾಡಿ, ಶಾಲಾ/ಕಾಲೇಜು, ಎಲ್ಲಾ ವಸತಿ ಶಾಲೆಗಳು, ಪಶು ವೈದ್ಯಕೀಯ ಆಸ್ಪತ್ರೆ, ಕೃಷಿ ಮತ್ತು ತೋಟಗಾರಿಕೆ, ಮುಜರಾಯಿ ಹಾಗೂ ಇತರೇ ಎಲ್ಲಾ ಜಿಲ್ಲಾ ಪಂಚಾಯಿತಿಯ ಅಧೀನ ಕಚೇರಿಗಳು ಹಾಗೂ ವಿದ್ಯಾರ್ಥಿ ನಿಲಯ ಮತ್ತು ವಸತಿ ಶಾಲೆಗಳ ಪರಿಮಿತಿ ಹಾಗೂ ಅವರ ಒಡೆತನಕ್ಕೆ ಸೇರಿದ ಜಾಗದ ಆವರಣದಲ್ಲಿ ನೆಡಲಾಗುವ ಗಿಡಗಳನ್ನು ಸಂಬಂಧಿಸಿದ ಕಛೇರಿ ಮುಖ್ಯಸ್ಥರು, ತಮ್ಮ ಅಧೀನ ಸಿಬ್ಬಂದಿಗಳ/ವಿದ್ಯಾರ್ಥಿಗಳ ಮೂಲಕ ನಿರಂತರ ನಿರ್ವಹಣೆ ಮತ್ತು ಸಂರಕ್ಷಣೆಗೆ ಕ್ರಮವಹಿಸುವರು. ಪ್ರತಿ ತಿಂಗಳೂ ಗ್ರಾಮ ಪಂಚಾಯತಿಗೆ ಇದರ ವರದಿ ಸಲ್ಲಿಸಲಿದ್ದಾರೆ.

ಪಂಚಾಯಿತಿ ವ್ಯಾಪ್ತಿಯ ರಸ್ತೆಬದಿಗಳಲ್ಲಿ ನೆಡಲಾಗುವ ಗಿಡಗಳನ್ನು ಗ್ರಾಮ ಪಂಚಾಯಿತಿಯು, ರಸ್ತೆಬದಿಯಲ್ಲಿ ವಾಸವಿರುವ ಸಾರ್ವಜನಿಕರ ಮನವೊಲಿಸಿ ಗಿಡಗಳ ಮಹತ್ವ, ಅವುಗಳನ್ನು ಬೆಳೆಸುವ ಸದುದ್ದೇಶ ಹಾಗೂ ಸ್ವಚ್ಛ ಗಾಳಿಯಿಂದ ಪರಿಸರದಲ್ಲಾಗುವ ಬದಲಾವಣೆ ಕುರಿತು ಅರಿವು ಮೂಡಿಸಿ ಅವರನ್ನು ಗಿಡಗಳ ನಿರ್ವಹಣೆ, ಸಂರಕ್ಷಣೆಗೆ ಹಾಗೂ ಸದರಿ ಗಿಡಗಳನ್ನು ದತ್ತು ಪಡೆಯುವ ಕುರಿತು ಪ್ರೇರೇಪಿಸುವರು.

ಸಾರ್ವಜನಿಕ ಪ್ರದೇಶಗಳಲ್ಲಿ ನೆಟ್ಟ ಮರಗಳನ್ನು ಸಮುದಾಯ ಪ್ರದೇಶಗಳ ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳು, ವಿವೇಕಾನಂದ ಸ್ವಸಹಾಯ ಸಂಘ, ಮಹಿಳಾ ಸ್ವಸಹಾಯ ಸಂಘ ಹಾಗೂ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಆಸಕ್ತ ಸ್ವಯಂ ಸೇವಕರುಗಳನ್ನು ಬಳಸಿಕೊಂಡು ಅವರ ಮೂಲಕ ನಿರಂತರ ನಿರ್ವಹಣೆಯನ್ನು ಮಾಡುವರು. ಈ ಕುರಿತು ನಿರ್ವಹಣಾ ಪುಸ್ತಕವನ್ನು ಸಂಬಂಧಿಸಿದ ಗ್ರಾ.ಪಂ ಪಿಡಿಓ ನಿರ್ವಹಿಸುವರು.

ಈ 4 ವರ್ಗಗಳಲ್ಲಿ ನೆಡಲಾದ ಗಿಡಗಳ ನಿರ್ವಹಣೆಯ ಪ್ರಗತಿ ವರದಿಯನ್ನು ಕ್ರೋಢೀಕರಿಸಿ ತಾಲ್ಲೂಕು ಪಂಚಾಯಿತಿಗೆ ಸಲ್ಲಿಸಬೇಕು. ಗಿಡಗಳ ನಿರ್ವಹಣೆಯ ಕುರಿತು ಮೇಲ್ವಿಚಾರಣೆ ಮಾಡಲು ಪ್ರತೀ ತಾಲ್ಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ಈ ನೋಡಲ್ ಅಧಿಕಾರಿ ಪ್ರತಿ ತಿಂಗಳಿಗೊಮ್ಮೆ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ, ಗಿಡಗಳ ನಿರ್ವಹಣೆಯನ್ನು ಪರಿಶೀಲಿಸಿ, ಜಿಲ್ಲಾ ಪಂಚಾಯತ್ ಕಛೇರಿಗೆ ವರದಿ ನೀಡುವರು.

ಹಸಿರುಗ್ರಾಮ ಅಭಿಯಾನದಡಿ ನೆಡಲಾದ 2.50 ಲಕ್ಷಕ್ಕೂ ಗಿಡಗಳಲ್ಲಿ ಪ್ರತಿಯೊಂದು ಗಿಡಕ್ಕೂ ವೈಯಕ್ತಿಕ ಗಮನಹರಿಸಿ ಪೋಷಿಸಲಾಗುತ್ತಿದೆ.



Downloaded From:www.kpscvaani.com



ಡಿಜಿಟಲ್ ತಂತ್ರಜ್ಞಾನದ ಮೂಲಕ ಇದನ್ನು ಗಮನಿಸಲು ಉದ್ದೇಶಿಸಲಾಗಿದೆ. ಈ ಅಭಿಯಾನದ ಕುರಿತ ಪ್ರಗತಿ ಕುರಿತು ಪ್ರತಿ ತಿಂಗಳು ಜಿಲ್ಲಾ ಪಂಚಾಯತಿಯಿಂದ ನಿರಂತರವಾಗಿ ಪ್ರಗತಿ ಪರಿಶೀಲನೆ ಮಾಡಲಾಗುವುದು.

**ಅರಿವು, ಜಾಗೃತಿ ಕಾರ್ಯಕ್ರಮ**

ಹಸಿರುಗ್ರಾಮ ಅಭಿಯಾನವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ತಾಲ್ಲೂಕು ಪಂಚಾಯತಿಯ ಮಾಹಿತಿ ಶಿಕ್ಷಣ ಸಂಯೋಜಕರನ್ನು ಬಳಸಿಕೊಂಡು ಹಸಿರುಗ್ರಾಮದ ಮಹತ್ವ ಸಾರುವ, ಪರಿಸರದ ಕಾಳಜಿ ಕುರಿತ ಮಾಹಿತಿ ಶಿಕ್ಷಣ ಚಟುವಟಿಕೆಗಳನ್ನು ಗ್ರಾಮಗಳಲ್ಲಿ ಕೈಗೊಂಡು ಜನರಿಗೆ, ಸ್ವಸಹಾಯ ಸಂಘದ ಪ್ರತಿನಿಧಿಗಳಿಗೆ ಅರಿವು ಮೂಡಿಸಲು ಮತ್ತು ಗಿಡಗಳ ಸಂರಕ್ಷಣೆ ಹಾಗೂ ನಿರ್ವಹಣೆಗೆ ಅವರನ್ನು ಪ್ರೇರೇಪಿಸಲು ಉದ್ದೇಶಿಸಲಾಗಿದೆ. ಕೋವಿಡ್-19ರ ಸಂದರ್ಭದಲ್ಲಿ ಆಮ್ಲಜನಕದ ಕೊರತೆಯಿಂದ ಮರಣಗಳು ಸಂಭವಿಸಿರುವುದನ್ನು, ಇತ್ತೀಚೆಗೆ ಅಪ್ರಾಪ್ತ ವಯಸ್ಕರಲ್ಲಿ ಶುದ್ಧ ಆಮ್ಲಜನಕದ ಕೊರತೆಯಿಂದ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚುತಿರುವ ಕುರಿತು ಹಾಗೂ ಇದಕ್ಕೆ ಪೂರಕವಾಗಿ ಗಿಡಗಳನ್ನು ಬೆಳೆಸಿ ಸ್ವಚ್ಛ ಗಾಳಿಯನ್ನು ವಾತಾವರಣಕ್ಕೆ ನೀಡುವ ಮೂಲಕ ಪರಿಸರಕ್ಕೆ ಅಮೂಲಾಗ್ರ ಕೊಡುಗೆ ನೀಡುವ ಕುರಿತು ಮಾಹಿತಿ ನೀಡಲು ಉದ್ದೇಶಿಸಲಾಗಿದೆ.

**ಅರಣ್ಯ ಮತ್ತು ವೃಕ್ಷ ಕವಚವನ್ನು ಅರಣ್ಯ ಮತ್ತು ಅರಣ್ಯೇತರ ಪ್ರದೇಶಗಳಲ್ಲಿ ಹೆಚ್ಚಿಸುವ ಮೂಲಕ ನೈಸರ್ಗಿಕ ಸಂಪನ್ಮೂಲಗಳು ವಿಶೇಷವಾಗಿ ಅರಣ್ಯ ಸಂಪನ್ಮೂಲಗಳ ಲಭ್ಯತೆಯಲ್ಲಿ ಗ್ರಾಮಗಳನ್ನು ಸ್ವಾವಲಂಭಿಯನ್ನಾಗಿ ಮಾಡುವುದು ಈ ಹಸಿರುಗ್ರಾಮ ಯೋಜನೆಯ ಉದ್ದೇಶವಾಗಿದೆ.**

ರೈತರಿಗೆ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸಾಮಾಜಿಕಅರಣ್ಯ ವಿಭಾಗದಿಂದ ನೀಡುವ ಸಸಿಗಳನ್ನು ಪಡೆದು ಕಿರುಅರಣ್ಯ ಮಾದರಿಯಲ್ಲಿ ಸಸಿಗಳನ್ನು ಬೆಳೆಸಲು ಮಾಹಿತಿ ನೀಡಿ ಅವರಿಗೆ ಕಿರುಅರಣ್ಯ ನಿರ್ಮಿಸಲು ಪ್ರೇರೇಪಿಸಲಾಗುವುದು.

**ಹಸಿರುಗ್ರಾಮ ಪ್ರಶಸ್ತಿ :**

ಹಸಿರು ಗ್ರಾಮ ಅಭಿಯಾನದಡಿ ಅತ್ಯುತ್ತಮ ಕಾರ್ಯನಿರ್ವಹಿಸಿದ ಗ್ರಾಮ ಪಂಚಾಯಿತಿಗಳನ್ನು ಗುರುತಿಸಿ ಅಭಿನಂದಿಸಲು, ಪ್ರತಿ ವಿಧಾನಸಭಾ ಕ್ಷೇತ್ರವಾರು ವರ್ಗ-1 ರಲ್ಲಿ ಅತ್ಯುತ್ತಮವಾಗಿ ಗಿಡಗಳನ್ನು ನೆಡಲಾದ 5 ಗ್ರಾಮ ಪಂಚಾಯಿತಿಗಳನ್ನು, ವರ್ಗ-2 ರಲ್ಲಿ ಅತ್ಯುತ್ತಮವಾಗಿ ಗಿಡಗಳನ್ನು ನೆಡಲಾದ 3 ಗ್ರಾಮ ಪಂಚಾಯಿತಿಗಳನ್ನು, ಹಾಗೂ ವರ್ಗ 3 ಮತ್ತು 4 ಈ ಎರಡರಲ್ಲೂ ಅತ್ಯುತ್ತಮವಾಗಿ ಗಿಡಗಳನ್ನು ನೆಡಲಾದ 3 ಗ್ರಾಮ ಪಂಚಾಯಿತಿಗಳು ಹೀಗೆ ಒಟ್ಟು 11 ಪ್ರಶಸ್ತಿಗಳನ್ನು, ಈ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಪ್ರಮುಖ ಪಾತ್ರವಹಿಸಿದ ಅಧಿಕಾರಿ/ಸಿಬ್ಬಂಧಿ/ಸಂಘ ಸಂಸ್ಥೆಯ ಪ್ರತಿನಿಧಿಗಳನ್ನು ಗುರುತಿಸಿ, ಜಿಲ್ಲಾ ಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ.

ಸ್ವಸ್ಥ್ಯ, ಆರೋಗ್ಯಯುತ ಸಮಾಜಕ್ಕೆ ಉತ್ತಮ ಪರಿಸರ, ಗಾಳಿ, ಬೆಳಕು ಅಗತ್ಯ. ಇಂತಹ ಸಮಾಜ ನಿರ್ಮಾಣಕ್ಕೆ ಅಸ್ತಿತ್ವದಲ್ಲಿರುವ ಸರಕಾರಿ ಯೋಜನೆಯನ್ನೇ ಪರಿಣಾಮಕಾರಿಯಾಗಿ ನಾಗರೀಕರ ಸಹಭಾಗಿತ್ವದಲ್ಲಿ ಜಾರಿಗೊಳಿಸಿ ಪರಿಸರವನ್ನು ಕಾಪಾಡಿ, ಭವಿಷ್ಯಕ್ಕೆ ಸಮಾಜವನ್ನು ಯಾವ ರೀತಿ ಕಟ್ಟಬಹುದು ಎಂಬುದಕ್ಕೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಾರಿಗೊಂಡಿರುವ "ಹಸಿರುಗ್ರಾಮ" ಯೋಜನೆಯೇ ಸಾಕ್ಷಿ.



Downloaded From:www.kpscvaani.com




# ನಿಟ್ಟೆಯಲ್ಲಿ ಗ್ರಾಮೀಣ ಭಾರತದ ಏಕೈಕ ಎಂಆರ್‌ಎಫ್ ಕೇಂದ್ರ

**ಉಡುಪಿ ಜಿಲ್ಲೆಯ ನಿಟ್ಟೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಗ್ರಾಮೀಣ ಭಾರತದ ಏಕೈಕ ಸಾರ್ವಜನಿಕ ವಲಯದ ಎಂಆರ್‌ಎಫ್ ಕೇಂದ್ರವು ಕಾರ್ಯಾರಂಭವಾಗಿದೆ.**

ಸುಚಿತ್ರಾ

ಪ್ರತಿ ದಿನ ಅಂದಾಜು 10 ಟನ್ ಸಾಮರ್ಥ್ಯದ ಘನ ತ್ಯಾಜ್ಯವನ್ನು ಆಧುನಿಕ ರೀತಿಯಲ್ಲಿ ಪರಸರಕ್ಕೆ ಹಾನಿಯಾಗದಂತೆ, ಅತ್ಯಂತ ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ದೇಶದ ಗ್ರಾಮೀಣ ಭಾರತದ ಸಾರ್ವಜನಿಕ ವಲಯದ ಏಕೈಕ MRF ಕೇಂದ್ರವನ್ನು (ಮೆಟಿರಿಯಲ್ಸ್ ರಿಕವರಿ ಫೆಸಿಲಿಟಿ) (ಸಮಗ್ರ ಘನ ತ್ಯಾಜ್ಯ ನಿರ್ವಹಣಾ ಕೇಂದ್ರ), ಉಡುಪಿ ಜಿಲ್ಲಾ ಪಂಚಾಯತ್ ಅನುಷ್ಠಾನ ಮಾಡುತ್ತಿರುವ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಕಾರ್ಯಕ್ರಮದಡಿಯಲ್ಲಿ ನಿಟ್ಟೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯಾರಂಭ ಮಾಡಿದೆ.



ಈ ಕೇಂದ್ರವು ಸಂಗ್ರಹವಾಗುವ ಘನ ತ್ಯಾಜ್ಯದಿಂದ ಸುಮಾರು 90% ಕಿಂತಲೂ ಅಧಿಕ ಸಂಪನ್ಮೂಲವನ್ನು ಪಡೆಯುವ ಸಾಮರ್ಥ್ಯವನ್ನು ಹೊಂದಿದ್ದು, ಕಡಿಮೆ ಮಾನವ ಸಂಪನ್ಮೂಲದ ಸಹಾಯದಿಂದ ಪರಿಣಾಮಕಾರಿಯಾಗಿ ತ್ಯಾಜ್ಯ ನಿರ್ವಹಣೆ ಮಾಡಲಾಗುತ್ತಿದೆ. ಅಲ್ಲದೆ ಅವೈಜ್ಞಾನಿಕ ತ್ಯಾಜ್ಯ ನಿರ್ವಹಣೆಗೆ ಪರಿಹಾರ ಒದಗಿಸಿ ಪರಿಸರದ ಸಂರಕ್ಷಣೆಗೆ ಮಹತ್ತರವಾದ ಕೊಡುಗೆಯನ್ನು ನೀಡುತ್ತಿದೆ ಎಂದರೆ ತಪ್ಪಾಗಲಾರದು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕರ್ನಾಟಕ ಸರಕಾರ ಮಂಜೂರು ಮಾಡಿರುವ ಈ ಯೋಜನೆಯನ್ನು, ಜಿಲ್ಲಾ ಪಂಚಾಯತ್ ಉಡುಪಿ ಮೇಲ್ವಿಚಾರಣೆಯಲ್ಲಿ ಕಾರ್ಕಳ ತಾಲೂಕಿನ ನಿಟ್ಟೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅನುಷ್ಠಾನ ಮಾಡಲಾಗಿರುತ್ತದೆ. ಕಾರ್ಕಳ, ಉಡುಪಿ, ಕಾಪು, ಹೆಬ್ರಿಯ ಸುಮಾರು 42 ಗ್ರಾಮ ಪಂಚಾಯತ್‌ಗಳು ಈ ಯೋಜನೆಗೆ ಒಳಪಡುತ್ತವೆ. ಈ ಯೋಜನೆ ಅನುಷ್ಠಾನಕ್ಕೆ ಸಾಹಸ್ ಜೀರೋ ವೇಸ್ಟ್ ಪ್ರೈವೇಟ್ ಲಿಮಿಟೆಡ್ ಇವರು ತಾಂತ್ರಿಕ ಮಾರ್ಗದರ್ಶನ ನೀಡಿದ್ದು, ಮಂಗಳ ರಿಸೋರ್ಸ್ ಮ್ಯಾನೇಜ್ ಮೆಂಟ್, ಮಂಗಳೂರು ಇವರು ಘಟಕದ ನಿರ್ವಹಣೆ ಮಾಡುತ್ತಿದ್ದಾರೆ.


Downloaded From:www.kpscvaani.com



**ಯೋಜನೆಯ ಉದ್ದೇಶಗಳು:**

- ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಡಿಮೆ ಮಾನವ ಸಂಪನ್ಮೂಲದ ಬಳಕೆಯಿಂದ ಉತ್ತಮ ತ್ಯಾಜ್ಯ ನಿರ್ವಹಣಾ ಸೇವೆ ಒದಗಿಸುವುದು.
- ತ್ಯಾಜ್ಯವನ್ನು ಕೇಂದ್ರೀಕೃತವಾಗಿ ನಿರ್ವಹಣೆ ಮಾಡುವುದು. ಆ ಮೂಲಕ ತ್ಯಾಜ್ಯ ನಿರ್ವಹಣಾ ಯೋಜನೆಯನ್ನು ದಕ್ಷತೆಯಿಂದ ಜಾರಿಗೊಳಿಸುವುದು.
- ತ್ಯಾಜ್ಯದಿಂದ ಅತೀ ಹೆಚ್ಚಿನ ಸಂಪನ್ಮೂಲವನ್ನು ಪಡೆಯುವುದು. ಆ ಮೂಲಕ ಅವೈಜ್ಞಾನಿಕ ತ್ಯಾಜ್ಯ ನಿರ್ವಹಣೆಯನ್ನು ತಡೆಗಟ್ಟಿ ಪರಿಸರ ಸಂರಕ್ಷಣೆ ಮಾಡುವುದು.
- ಸರಳ ಯಂತ್ರಗಳ ಬಳಕೆಯಿಂದ ತ್ಯಾಜ್ಯ ನಿರ್ವಹಣೆಯಲ್ಲಿ ಕರ್ತವ್ಯ ನಿರ್ವಹಿಸುವ ಮಾನವ ಸಂಪನ್ಮೂಲದ ದಕ್ಷತೆ ಹೆಚ್ಚಿಸುವುದು.
- ಸ್ವಚ್ಛ ಸಂಕೀರ್ಣದಲ್ಲಿ ಉತ್ಪತ್ತಿಯಾಗುವ ಮರುಬಳಕೆ ಮಾಡಲು ಸಾಧ್ಯವಿಲ್ಲದ ತ್ಯಾಜ್ಯಕ್ಕೆ ವಿಲೇವಾರಿ ಸವಾಲು ಹಾಗೂ ವೆಚ್ಚದಾಯಕವಾಗಿದ್ದು, ಇದಕ್ಕೆ ಸೂಕ್ತ ಪರಿಹಾರ ಒದಗಿಸುವುದು
- ತ್ಯಾಜ್ಯವನ್ನು ಅಧಿಕೃತ ಹಾಗೂ ಅಂತಿಮ ರಿಸೈಕ್‌ಲಿಂಗ್ ಕೇಂದ್ರಕ್ಕೆ ವಿಲೇವಾರಿ ಮಾಡುವುದು
- ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಲಸಗಾರರಿಗೆ ಉತ್ತಮ ಸೌಲಭ್ಯ, ಸಾಮಾಜಿಕ ಭದ್ರತೆ, ಆರೋಗ್ಯ ಮತ್ತು ಸುರಕ್ಷಾ ಸೌಲಭ್ಯ ಒದಗಿಸುವುದು
- ತ್ಯಾಜ್ಯ ನಿರ್ವಹಣೆ ಕುರಿತಂತೆ ಉತ್ತಮವಾದ ದತ್ತಾಂಶ/ದಾಖಲೆಗಳ ನಿರ್ವಹಣೆ ಮಾಡುವುದು
- ಮರುಬಳಕೆ ಮಾಡಲು ಸಾಧ್ಯವಿಲ್ಲದ ತ್ಯಾಜ್ಯಗಳನ್ನು ರಿಸೈಕಲಿಂಗ್ ಕಂಪನಿಗಳಿಗೆ ಕಚ್ಚಾವಸ್ತುಗಳಾಗಿ ಪೂರೈಕೆ ಮಾಡುವುದು

ಯೋಜನೆ ವ್ಯಾಪ್ತಿಯ ಗ್ರಾಮ ಪಂಚಾಯತ್‌ಗಳಲ್ಲಿ ಮನೆ ಮನೆಯಿಂದ ಸಂಗ್ರಹಿಸಲಾದ ಒಣ ತ್ಯಾಜ್ಯವನ್ನು, ತ್ಯಾಜ್ಯ ನಿರ್ವಹಣಾ ಕೇಂದ್ರದ ಸ್ವಚ್ಛ ಸಂಕೀರ್ಣಕ್ಕೆ ತರಲಾಗುತ್ತದೆ. ಸ್ವಚ್ಛ ಸಂಕೀರ್ಣದಲ್ಲಿ ತ್ಯಾಜ್ಯವನ್ನು ತೂಕ ಮಾಡಿ ಪ್ಯಾಕ್ ಮಾಡಿ ಇಡಲಾಗುತ್ತದೆ, ಪ್ರತಿವಾರ ಎಮ್.ಆರ್.ಎಫ್ ಕೇಂದ್ರದ ತ್ಯಾಜ್ಯ ಸಂಗ್ರಹಣಾ ವಾಹನವು ಸ್ವಚ್ಛ ಸಂಕೀರ್ಣಗಳಿಂದ ಒಣ ತ್ಯಾಜ್ಯವನ್ನು ಸಂಗ್ರಹಿಸುತ್ತದೆ. ಹೀಗೆ ಸಂಗ್ರಹಿಸಿದ ತ್ಯಾಜ್ಯವನ್ನು ಎಮ್.ಆರ್.ಎಫ್ ಕೇಂದ್ರದಲ್ಲಿ ತೂಕ ಮಾಡಿ ಶೇಖರಣಾ ವಿಭಾಗದಲ್ಲಿ ಶೇಖರಿಸಲಾಗುತ್ತದೆ. ನಂತರ ಕ್ವನ್ವೆಯರ್ ಬೆಲ್ಟ್ ಸಹಾಯದಿಂದ ಸುಮಾರು 25 ರಿಂದ 30 ವಿಭಾಗವಾಗಿ ವಿಂಗಡಿಸಲಾಗುತ್ತದೆ. ಹೀಗೆ ವಿಂಗಡಿಸಿದ ತ್ಯಾಜ್ಯವನ್ನು ಬೈಲಿಂಗ್ ಯಂತ್ರದ ಸಹಾಯದಿಂದ ಬೈಲ್ ಮಾಡಲಾಗುತ್ತದೆ. ಬೈಲ್ ಮಾಡಿದ ತ್ಯಾಜ್ಯದಲ್ಲಿ ಪುನರ್ ಬಳಕೆ ಮಾಡಬಹುದಾದ ತ್ಯಾಜ್ಯವನ್ನು ಅಧಿಕೃತ ರಿಸೈಕಲಿಂಗ್ ಕಂಪನಿಗಳಿಗೆ ಮಾರಾಟ ಮಾಡಲಾಗುತ್ತದೆ. ಪುನರ್ಬಳಕೆ ಮಾಡಲು ಸಾಧ್ಯವಿಲ್ಲದ ತ್ಯಾಜ್ಯವನ್ನು ಕೋ ಪ್ರೋಸೆಸಿಂಗ್ ಉದ್ದೇಶಕ್ಕೆ ಸಿಮೆಂಟ್ ಫ್ಯಾಕ್ಟರಿಗಳಿಗೆ ಸಾಗಿಸಲಾಗುತ್ತದೆ.

ಘಟಕದಲ್ಲಿ 30 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಅವರಲ್ಲಿ 15 ಮಂದಿಯನ್ನು ಕನ್ವೆಯರ್ ಲೈನ್‌ನಲ್ಲಿ ತ್ಯಾಜ್ಯ ವಿಂಗಡಣೆ ಮಾಡಲು ನಿಯೋಜಿಸಲಾಗಿದೆ. 4 ಮಂದಿ ಬೈಲಿಂಗ್ ಯಂತ್ರದ ನಿರ್ವಹಣೆಯನ್ನು ಮಾಡುತ್ತಾರೆ. ಒಬ್ಬರು ಲೆಕ್ಕಪತ್ರ ನಿರ್ವಹಣೆಯನ್ನು ಮಾಡುತ್ತಾರೆ, ಇಬ್ಬರು ಸೆಕ್ಯೂರಿಟಿ ಗಾರ್ಡ್, ಇಬ್ಬರು ಹೌಸ್ ಕೀಪಿಂಗ್ ಸಿಬ್ಬಂದಿಗಳು ಹಾಗೂ ಘಟಕದ ಮೇಲ್ವಿಚಾರಣೆಗೆ ಇಬ್ಬರು ಮೇಲ್ವಿಚಾರಕರಿದ್ದಾರೆ. ಒಬ್ಬರು ಡ್ರೈವರ್ ಹಾಗೂ ಇಬ್ಬರು ಲೋಡರ್‌ಗಳು ಸ್ವಚ್ಛ ಸಂಕೀರ್ಣದಿಂದ ತ್ಯಾಜ್ಯವನ್ನು ಸಂಗ್ರಹಣೆ ಮಾಡುತ್ತಾರೆ.

ಎಮ್.ಆರ್.ಎಫ್ ಘಟಕವು 10000 ಚದರ ಅಡಿಯ ಕಟ್ಟಡವನ್ನು ಹೊಂದಿದ್ದು, ದಿನವೊಂದಕ್ಕೆ 10 ಟನ್ ತ್ಯಾಜ್ಯವನ್ನು ನಿರ್ವಹಣೆ ಮಾಡುವ ಸಾಮರ್ಥ್ಯ ಹೊಂದಿದೆ. ಘಟಕದಲ್ಲಿ ತ್ಯಾಜ್ಯ ಶೇಖರಣೆ, ವಿಂಗಡಣೆ ಹಾಗೂ ಬೈಲಿಂಗ್ ಮಾಡುವ ವಿಭಾಗಗಳಿದ್ದು, ಕಛೇರಿ, ಸೆಕ್ಯೂರಿಟಿ ರೂಮ್, ವಿಶ್ರಾಂತಿ ಕೊಠಡಿ ಹಾಗೂ ಶೌಚಾಲಯ ಸೌಲಭ್ಯವನ್ನು ಹೊಂದಿದೆ. ಕನ್ವೆಯರ್ ಬೆಲ್ಟ್, ಬೈಲಿಂಗ್ ಯಂತ್ರ, ಸ್ಟಾಕರ್, ಫೈರ್ ಸೇಫ್ಟಿ ಸೌಲಭ್ಯ, ಜನರೇಟರ್, ಸಿಸಿ ಟಿ.ವಿ, 70 ಟನ್ ಸಾಮರ್ಥ್ಯದ ವೇ ಬ್ರಿಡ್ಜ್ ಹಾಗೂ 7 ಟನ್ ಸಾಮರ್ಥ್ಯದ ಟ್ರಕ್ ಮುಂತಾದ ಸೌಲಭ್ಯಗಳನ್ನು ಹೊಂದಿದೆ.

ಈ ಯೋಜನೆಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು ಇಲ್ಲಿಂದ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿ ಬಿಡುಗಡೆಯಾದ ರೂ.250 ಲಕ್ಷ ಅನುದಾನವನ್ನು ಬಳಸಿಕೊಳ್ಳಲಾಗಿದೆ. ಅಲ್ಲದೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ರೂ. 8.32 ಹಾಗೂ 15ನೇ ಹಣಕಾಸು ಯೋಜನೆಯಡಿ ರೂ. 28.35, ಗ್ರಾಮ ವಿಕಾಸ ಯೋಜನೆಯಡಿ ರೂ.10.00 ಲಕ್ಷ ಹಾಗೂ ನಿಟ್ಟೆ ಗ್ರಾಮ ಪಂಚಾಯತ್‌ನ ಸ್ವಂತ ಅನುದಾನ ರೂ. 23.00 ಲಕ್ಷ ಅನುದಾನ ಸೇರಿ ಸುಮಾರು ರೂ.60.67 ಲಕ್ಷ ಅನುದಾನ ಬಳಸಿಕೊಳ್ಳಲಾಗಿದೆ.

ದೇಶದ ಗ್ರಾಮೀಣ ಭಾಗದಲ್ಲಿನ ಸಾರ್ವಜನಿಕ ವಲಯದಲ್ಲಿ ನಿರ್ಮಾಣವಾಗಿರುವ ಈ ಎಂ.ಆರ್.ಎಫ್ ಘಟಕದಿಂದ ನಿಟ್ಟೆ ವ್ಯಾಪ್ತಿಯಲ್ಲಿನ 42 ಗ್ರಾಮ ಪಂಚಾಯತ್‌ಗಳ ಕಸ ವಿಲೇವಾರಿಗೆ ಪರಿಹಾರ ದೊರೆಯಲಿದೆ. ಈ ಘಟಕದಲ್ಲಿ ಸ್ಥಳೀಯರಿಗೆ ಉದ್ಯೋಗವಕಾಶಗಳನ್ನು ನೀಡಿದ್ದು, ಜಿಲ್ಲೆಯಲ್ಲಿ ಇನ್ನೂ 2 ಮಿನಿ ಎಂ.ಆರ್.ಎಫ್ ಘಟಕ ಸ್ಥಾಪನೆಗೆ ಜಾಗ ಗುರುತಿಸಲಾಗಿದ್ದು, ಡಿ.ಪಿ.ಆರ್ ತಯಾರಾಗುತ್ತಿದೆ ಎಂದು ಉಡುಪಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ನವೀನ್ ಭಟ್ ಅವರು ಮಾಹಿತಿ ನೀಡಿದ್ದಾರೆ. ಈ ಕೇಂದ್ರದ ಆರಂಭದಿಂದ ಗ್ರಾಮೀಣ ಭಾಗದ ತ್ಯಾಜ್ಯ ವಿಲೇವಾರಿ ಕುರಿತಂತೆ ಜಿಲ್ಲೆ ಮಾತ್ರವಲ್ಲದೇ ರಾಜ್ಯದಲ್ಲೇ ಹೊಸ ಅಧ್ಯಾಯ ಆರಂಭಗೊಳ್ಳಲಿದೆ. ■



Downloaded From:www.kpscvaani.com



# ‘ಸಿಗಂಧಿನಿ’

## ಮೆಣಸಿನ ತಳಿ ಉಳಿಸಿ ಬೆಳೆಸುತ್ತಿರುವ ಕೃಷಿಕ

**ರೈತರ ಹೆಸರಿನಲ್ಲಿ ನೋಂದಣಿಯಾಗಿರುವ ಕರ್ನಾಟಕದ ಮೊದಲ ಮೆಣಸಿನ ತಳಿಯಾದ ಸಿಗಂಧಿನಿಯನ್ನು ಹುಣಸೇಕೊಪ್ಪದ ಕೃಷಿಕರೊಬ್ಬರು ಬೆಳೆಸಿ ಕಾಪಾಡುತ್ತಿರುವುದಲ್ಲದೆ, ಸಸಿ ತಯಾರಿಸಿ ಇತರೆ ರೈತರಿಗೂ ಒದಗಿಸುವ ಕಾಯಕದಲ್ಲಿ ತೊಡಗಿದ್ದಾರೆ.**

ಜಿ.ಎಸ್.ಹೆಗಡೆ



ಹುಣಸೇಕೊಪ್ಪದಲ್ಲಿ ಕೃಷಿಕರೊಬ್ಬರು ಮೆಣಸಿನ ಕೃಷಿಯನ್ನು ಚನ್ನಾಗಿ ಮಾಡಿದ್ದಾರೆ. ಲೋಕಲ್ ತಳಿಯಾದ್ರೂ ಉತ್ತಮ ಫಸಲು ನೀಡ್ತಾಯಿದೆ... ನೀವೊಮ್ಮೆ ನೋಡಿಕೊಂಡು ಬನ್ನಿ, ಅಂತ ಸ್ನೇಹಿತರೊಬ್ಬರು ಹುರಿದುಂಬಿಸಿದ್ದರು. ನಮ್ಮೂರಿನ ಅಕ್ಕ ಪಕ್ಕದಲ್ಲಿಯೇ ಸಾಕಷ್ಟು ರೈತರು ಹಲವಾರು ಬಗೆಯ ಮೆಣಸಿನ ಕೃಷಿ ಮಾಡಿದ್ದನ್ನು ಕಣ್ಣಾರೆ ನೋಡಿ ಅನುಭವಿಸಿದ್ದ ನನಗೆ, ಮಿತ್ರನ ಮಾತಿನಲ್ಲಿ ಏನೋ ವಿಶೇಷವಿದೆ ಅಂತ ಅನ್ನಿಸಿತು. ಆ ರೈತರ ತೋಟದಲ್ಲಿ ಇರುವ ಮೆಣಸಿನ ಕೃಷಿ ನೋಡಬೇಕೆಂಬ ತವಕ ಆಗ್ಲೇ ಇಮ್ಮಡಿಸಿತು. ಒಬ್ಬ ದಿನ ಗೆಳೆಯನೊಂದಿಗೆ ಆ ಕೃಷಿಕನನ್ನು ಖುದ್ದಾಗಿ ಭೇಟಿಯಾಗಲು ಬೈಕನ್ನೇರಿ ಹೊರಟಿದ್ದೆ.

ಹುಣಸೇಕೊಪ್ಪ, ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಕೋಡ್ಸರದ ಸಮೀಪವಿದೆ. ಅಂದ್ರೆ ಶಿರಸಿಯಿಂದ ಸುಮಾರು ಹದಿನೈದು ಕಿ.ಮೀ. ಅಂತರದಲ್ಲಿದೆ. ಅಲ್ಲಿನ ಹಲವಾರು ಪ್ರಗತಿಪರ ರೈತರಲ್ಲಿ ರಮಾಕಾಂತ ರಾಮಚಂದ್ರ ಹೆಗಡೆ ಸಹಾ ಒಬ್ಬರು. ಇವರು ಅಡಿಕೆ ಕೃಷಿಯೊಂದಿಗೆ ಕಪ್ಪು ಬಂಗಾರವನ್ನು ಬೆಳೆಯುತ್ತಿದ್ದಾರೆ. ಅದರೊಂದಿಗೆ ಕಾಳು ಮೆಣಸಿನ ನರ್ಸರಿಯನ್ನೂ ಸಹ ಮಾಡುತ್ತಿರುವುದು ವಿಶೇಷ.

ಮೆಣಸಿನ ಬಳ್ಳಿ ಹೇಗಿರಬಹುದು.... ಯಾವ ವಿಧಾನದಲ್ಲಿ ಆ ಮೆಣಸಿನ ತಳಿ ಉಳಿಸಿಕೊಂಡು ಬಂದಿರಬಹುದು.... ಎಂಬ ಆಲೋಚನೆ ಮಾಡುತ್ತಲೇ ಅಲ್ಲಿಗೆ ಹೋಗಿದ್ದೆ. ರಮಾಕಾಂತ ಹೆಗಡೆ ಅವರಿಗೆ ಎರಡು ಕಡೆಗಳಲ್ಲಿ ಕೃಷಿ ಭೂಮಿಯಿದೆ. ಮನೆ ಪಕ್ಕದಲ್ಲಿ ಒಂದೆಕರೆ ಹಾಗೂ ಅನತಿ ದೂರದಲ್ಲಿ ಒಂದೆಕರೆ ಅಡಿಕೆ ತೋಟವಿದೆ. ಒಂದು ಹಳೆಯ ತೋಟವಾದರೆ, ಇನ್ನೊಂದು ಹದಿನೈದು ವರುಷದ ಹಿಂದೆ ಮಾಡಿದ ತೋಟ. ಈ ಎರಡೂ ತೋಟವನ್ನು ಹೆಗಡೆಯವರು ಸಾಂಪ್ರದಾಯಿಕ


Downloaded From:www.kpscvaani.com

ಪದ್ಧತಿಯಲ್ಲಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ.

ತೋಟದ ಅಕ್ಕ ಪಕ್ಕದಲ್ಲಿ ಎತ್ತರವಾದ ಗುಡ್ಡವಿದೆ. ನಿಸರ್ಗ ಸೊಬಗಿನ ಮಧ್ಯೆ ಹಲವು ರೈತರ ಕೃಷಿ ಭೂಮಿ ಇರುವುದರಿಂದ ಆಧುನಿಕ ವ್ಯವಸ್ಥೆಗೆ ಮಾರು ಹೋಗದೇ, ಸಹಜ ಪದ್ಧತಿಯಲ್ಲಿ ಅಡಿಕೆ ಕೃಷಿಯನ್ನು ಮಾಡುತ್ತಿದ್ದಾರೆ. ವ್ಯವಸ್ಥಿತವಾಗಿ ಬಸಿಗಾಲುವೆ ಮಾಡಿಕೊಂಡಿರುವ ಇವರು, ತಂಪಿನ ತೋಟವಾಗಿರುವುರಿಂದ ಹೆಚ್ಚುವರಿಯಾಗಿ ನೀರಾವರಿ ವ್ಯವಸ್ಥೆ ಅಳವಡಿಸಿಕೊಂಡಿಲ್ಲ. ಸಾಮಾನ್ಯವಾಗಿ ಮೇ ತಿಂಗಳಿನಲ್ಲಿ ಪ್ರತೀ ಮರಕ್ಕೆ 350 ಗ್ರಾಂ ರಾಸಾಯನಿಕ ಗೊಬ್ಬರ ಹಾಗೂ ಸುಮಾರು ಆರು ಕೆ.ಜಿ ಯಷ್ಟು ದಡ್ಡಿಗೊಬ್ಬರವನ್ನು ನೀಡಿ ಆರೈಕೆ ಮಾಡುತ್ತಾರೆ. ಸಕಾಲದಲ್ಲಿ ಕರಡ ಹಾಗೂ ಒಣ ಎಲೆಗಳನ್ನು ಹಾಕಿ ಮುಚ್ಚಿಗೆ ಮಾಡುವುದರಿಂದ ರಮಾಕಾಂತ ಹೆಗಡೆ ಅವರ ಅಡಿಕೆ ತೋಟ ಸೊಂಪಾಗಿದೆ. ಸಾಮಾನ್ಯವಾಗಿ ಎರಡು ಬಾರಿ ಬೋಡೋ ದ್ರಾವಣ ಸಿಂಪಡಣೆ ಮಾಡುವುದನ್ನು ಬಿಟ್ಟರೆ, ಮತ್ತೆ ವಿಶೇಷ ಆರೈಕೆ ಏನನ್ನು ಮಾಡಿಲ್ಲ. ಸಕಾಲದಲ್ಲಿ ವ್ಯವಸ್ಥಿತವಾಗಿ ನಿರ್ವಹಣೆ ಮಾಡಿ ಸಂರಕ್ಷಿಸಿದ ಪ್ರತಿಫಲವಾಗಿ ಸರಾಸರಿ ಎಕರೆಗೆ ಹದಿನೈದು ಕ್ವಿಂಟಲ್‌ನಷ್ಟು ಅಡಿಕೆ ಫಸಲು ಸಿಗುತ್ತಿದೆ ಎಂದು ಹೆಮ್ಮೆಯಿಂದ ಹೇಳುತ್ತಾರೆ.

**ಕಪ್ಪು ಬಂಗಾರ**

ಬಹುತೇಕ ಮಲೆನಾಡಿನ ಅಡಿಕೆ ಬೆಳೆಗಾರರು ತಮ್ಮ ತೋಟದಲ್ಲಿ ಒಂದಲ್ಲ ಒಂದು ಉಪ ಕೃಷಿಯನ್ನು ಬೆಳೆದು ತಮ್ಮ ಆರ್ಥಿಕ ಸ್ಥಿತಿಯನ್ನು ವೃದ್ಧಿಸಿಕೊಂಡು ತೃಪ್ತಿದಾಯಿಕ ಜೀವನಕ್ಕೆ ಸುಭದ್ರವಾದ ವ್ಯವಸ್ಥೆಗೆ ಅಂಟಿಕೊಂಡಿದ್ದಾರೆ. ಇಲ್ಲಿ ಬಾಳೆ, ಅರಿಶಿಣ, ಕಾಳು ಮೆಣಸು, ಜಾಯಿಕಾಯಿ.... ಇನ್ನಿತರ ಉಪ ಬೆಳೆಯನ್ನು ಮಾಡುವ ಹಲವಾರು ಕೃಷಿಕರಿದ್ದಾರೆ. ಇತ್ತೀಚಿನ ದಿನಗಳಲ್ಲಿ 'ಕಪ್ಪು ಬಂಗಾರ' ಎಂದು ಹೆಸರಾಗಿರುವ ಕಾಳು ಮೆಣಸನ್ನು ಬಹಳ ಆಸಕ್ತಿಯಿಂದ, ವೈಜ್ಞಾನಿಕ ಪದ್ಧತಿ ಹಾಗೂ ವಿಜ್ಞಾನಿಗಳ ಮಾರ್ಗದರ್ಶನದಲ್ಲಿ ಬೆಳೆಯುವ ಹಲವಾರು ಕೃಷಿಕರಿದ್ದಾರೆ. ಒಂದೊಂದು ಬೆಳೆಗಾರರದ್ದು ಒಂದೊಂದು ಬಗೆಯ ವಿಧಾನವಿದೆ. ಅಂಥವರ ಪೈಕಿ ರಮಾಕಾಂತ ಹೆಗಡೆ ಅವರು ಭಿನ್ನವಾಗಿ ಕಾಣುತ್ತಾರೆ.

ಇವರ ತೋಟದಲ್ಲಿ ಹಲವಾರು ವರುಷಗಳಿಂದಲೂ ಮೆಣಸಿನ ಕೃಷಿಯಿದೆ. ಲೋಕಲ್ ತಳಿಗಳನ್ನು ತಂದು ಬೆಳೆಸಿದ್ದಾರೆ. ಸುಮಾರು ಮೂವತ್ತೈದು ವರುಷದ ಹಿಂದಿನ ತಳಿಯ ಬಳ್ಳಿಗಳನ್ನು ಉಳಿಸಿಕೊಂಡಿದ್ದೇವೆ. ಹಾಗಂತ ಅದಕ್ಕೆ ಯಾವ ಹೆಸರನ್ನೂ ಇಟ್ಟಿರಲಿಲ್ಲ. ಸುಮಾರು ಐದಾರು ವರುಷದ ಹಿಂದೆ ವಿಜ್ಞಾನಿ ಮತ್ತು ಕಾಳುಮೆಣಸಿನ ತಜ್ಞರಾದ ಡಾ॥ ವೇಣುಗೋಪಾಲ ಅವರು ಆಕಸ್ಮಿತವಾಗಿ ನಮ್ಮ ತೋಟಕ್ಕೆ ಬಂದಾಗ, ನಮ್ಮಲ್ಲಿನ ಮೆಣಸಿನ ಬಳ್ಳಿಗಳನ್ನು ಕಂಡು ಆಶ್ಚರ್ಯ ಪಟ್ಟಿದ್ದರು. ಸ್ಥಾನಿಕ ತಳಿಗಳನ್ನು ಉಳಿಸಿಕೊಂಡು ಬಂದಿದ್ದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಆಮೇಲೆ ಅವರ ಆಸಕ್ತಿ, ಮಾರ್ಗದರ್ಶನದಲ್ಲಿಯೇ ನಮ್ಮ ತೋಟದಲ್ಲಿದ್ದ ಸ್ಥಳೀಯ ಮೆಣಸಿನ ತಳಿಯ ಬಗ್ಗೆ ಅಧ್ಯಯನ ಆರಂಭವಾಯ್ತು. ಈ ತಳಿಯಲ್ಲಿ ಹಲವಾರು ವಿಶೇಷತೆಗಳು ಇರುವುದನ್ನು ಗುರುತಿಸಿ, ಮೂರು ವರ್ಷದ ಹಿಂದಷ್ಟೇ "ಸಿಗಂಧಿನಿ" ಅಂತ ಇದಕ್ಕೆ ನಾಮಕರಣ ಮಾಡಲಾಗಿತ್ತು. ಈ ತಳಿಯು "ರೈತರ ಹೆಸರಿನಲ್ಲಿ ನೋಂದಾವಣೆಯಾದ ಕರ್ನಾಟಕದ ಮೊದಲ ತಳಿ" ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

**ಸಿಗಂಧಿನಿಯ ವಿಶೇಷವೇನು?**

ರಮಾಕಾಂತ ಹೆಗಡೆ ಅವರ ತೋಟದಲ್ಲಿ ಈಗ ಸಿಗಂಧಿನಿಯ ನೂರು ಬಳ್ಳಿಗಳಿವೆ. ಈ ಬಳ್ಳಿಗಳಿಗೆ ವಿಶೇಷವಾಧ ಆರೈಕೆಯೇನು ಇಲ್ಲ. ಬುಡ ಭಾಗದಲ್ಲಿ ಹೇರಳವಾಗಿ ಚಿಗುರಿದ ಕುಡಿಗಳು ಹರಡಿಕೊಂಡಿವೆ. ಅದರಿಂದ ಯಾವುದೇ ತೊಂದರೆ ಅಪಾಯ ಇದುವರೆಗೂ ಆಗಿಲ್ಲ. ಈವರೆಗೆ ಯಾವ ರೋಗವೂ ಬರಲಿಲ್ಲ ಎನ್ನುತ್ತಾರೆ ಹೆಗಡೆಯವರು.


ಮೆಣಸಿಗಾಗಿಯೇ ಪ್ರತ್ಯೇಕ ಗೊಬ್ಬರ ನೀಡಿಲ್ಲ. ಬೋಡೋ ದ್ರಾವಣವನ್ನು ಒಂದೆರಡು ಬಾರಿ ಸಿಂಪಡಿಸುತ್ತಾರೆ. ಇದನ್ನು ಹೊರತು ಪಡಿಸಿದರೆ ಮತ್ತೆ ಏನನ್ನೂ ಸಿಂಪಡಣೆ ಮಾಡದೇ ಬಳ್ಳಿಯನ್ನು ಉಳಿಸಿಕೊಂಡಿದ್ದು ನಿಜಕ್ಕೂ ಅದ್ಭುತ ಸಾಧನೆ. ಇವರೇ ಹೇಳುವಂತೆ "ತನ್ನ ಪ್ರತಿ ಬಳ್ಳಿಯಲ್ಲಿ ಮೂರುವರೆ ಕೆ.ಜಿ ಒಣಕಾಳು ಸಿಗ್ತಾಯಿದೆ. ಬೇರೆ ತಳಿಗಳಂತೆ ಒಂದು ವರುಷ ಹೆಚ್ಚು, ಮತ್ತೊಂದು ವರುಷ ಕಡಿಮೆ ಫಸಲು ಸಿಗುವ ವಾಡಿಕೆ ಈ ತಳಿಯಲ್ಲಿ ಇಲ್ಲ. ಸಾಮಾನ್ಯವಾಗಿ ಒಂದೇ ತರ ಇಳುವರಿ ಕೊಡುತ್ತೆ ಎನ್ನುತ್ತಾರೆ.



ಇನ್ನು ಈ ತಳಿಯ ಫಸಲು ಉಳಿದೆಲ್ಲ ತಳಿಗಳ ಕೊಯ್ಲು ಆರಂಭವಾಗುವ ಮೊದ್ಲೇ ಅಂದರೆ ಜನವರಿ ತಿಂಗಳಿನ ಅಂತ್ಯಕ್ಕೆ ಮುಗಿದಿರುತ್ತದೆ. ಈಗಷ್ಟೇ ಬಳ್ಳಿಯಿಂದ ಕೊಯ್ಲು ಮಾಡಿ ತಂದ ಒಂದು ಕೆ.ಜಿ ಹಸಿ ಕಾಳನ್ನು ಒಣಗಿಸಿದ್ರೆ 290 ಗ್ರಾಂ ಒಣಗಿದ ಕರಿ ಕಾಳು ಸಿಗುತ್ತದೆ. ಅದೇ ಸಿಪ್ಪೆ ತೆಗೆದು ಒಣಗಿಸಿದ್ರೆ 280 ಗ್ರಾಂ ಸಿಗುತ್ತದೆ. ಈ ಒಣಗಿದ ಕಾಳನ್ನು ಲೀಟರ್ ವೆಟ್‌ನಲ್ಲಿ ತೂಕ ಮಾಡಿದ್ರೆ 620 ಗ್ರಾಂ ತೂಗುತ್ತದೆ. ಅಂದ್ರೆ ಉತ್ತಮ ಫಲಿತಾಂಶ ಈ ತಳಿಯ ಮೆಣಸಿನಲ್ಲಿ ಇದೆ ಎನ್ನುತ್ತಾರೆ ಮೆಣಸು ಖರೀದಿ ಮಾಡುವ ವ್ಯಾಪಾರಸ್ಥರು.

ಇನ್ನು ಇವರ ತೋಟದಲ್ಲಿ ಒಕ್ಕಾಳು, ಪಣಿಯೂರು, ನೀಲಮುಂಡಿ.... ಇಂಥಹ ಸುಧಾರಿತ ತಳಿಗಳು ಇವೆ. ಸೊಪ್ಪಿನ ಬೆಟ್ಟದಲ್ಲಿಯೂ ಸಹಾ ಗೊಬ್ಬರ ಗಿಡ, ಸಿಲ್ವರ ಓಕ್ ಗಿಡಗಳಿಗೆ ಕಪ್ಪು ಬಂಗಾರದ ಗಿಡಗಳನ್ನು ಬೆಳೆಸಿದ್ದಾರೆ. ಆದ್ರೆ ನಮ್ಮ ತೋಟದಲ್ಲಿ ತಲೆತಲಾಂತರದಿಂದ ಇದ್ದ ಸ್ಥಾನಿಕ ತಳಿ (ಸಿಗಂಧಿನಿ) ಯ ಬಳ್ಳಿಯಷ್ಟು ಚೆನ್ನಾಗಿ ನೀಲಮುಂಡಿ ತಳಿಯೂ ಹುಲುಸಾಗಿ ಬಲಿತಿಲ್ಲ. ಹೀಗಾಗಿ ಮುಂದಿನ ದಿನಗಳಲ್ಲಿ "ಸಿಗಂಧಿನಿ"ಯನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಮಾಡಲು ನಿರ್ಧರಿಸಿದ್ದೇನೆ ಎಂಬ ಮನದಾಳದ ಅಭಿಪ್ರಾಯವನ್ನು ಹೆಗಡೆಯವರು ವ್ಯಕ್ತಪಡಿಸುತ್ತಾರೆ. ಇವರ ಅಡಿಕೆ ತೋಟ ಹಾಗೂ ಬೆಟ್ಟದಲ್ಲಿ ಎಲ್ಲ ಬಗೆಯ ತಳಿಗಳು ಸೇರಿದಂತೆ ಸುಮಾರು 700 ಕ್ಕೂ ಹೆಚ್ಚು ಮೆಣಸಿನ ಬಳ್ಳಿಗಳಿವೆ. ಇದರಿಂದ ಸುಮಾರು 15 ಕ್ವಿಂಟಲ್‌ನಷ್ಟು ಫಸಲು ಲಭಿಸುತ್ತಿದೆ. ಸೊಪ್ಪಿನ ಬೆಟ್ಟದಲ್ಲಿ ನೆಟ್ಟಿರುವ ಬಳ್ಳಿಗಳಿಂದ ಇನ್ನಷ್ಟು ಬೆಳೆ ಬರಬೇಕಾಗಿದೆ. ಮುಂದಿನ ದಿನಗಳಲ್ಲಿ ಉತ್ತಮ ಇಳುವರಿ ಸಿಗುವ ನಿರೀಕ್ಷೆಯಲ್ಲಿದ್ದಾರೆ. ಹೆಗಡೆಯವರನ್ನು 9686713468 ರಲ್ಲಿ ಸಂಪರ್ಕಿಸಬಹುದು.


Downloaded From:www.kpscvaani.com



# ಮಲೆನಾಡ ಕಾನನದಲ್ಲಿ

# ಮನಮೋಹಕ ಜಲಪಾತಗಳು

ಗಣಪತಿ ಹಾಸ್ಪುರ

**ಜಲಪಾತಗಳ ಜಿಲ್ಲೆ ಎಂದೇ ಪ್ರಸಿದ್ಧವಾಗಿರುವ ಮಲೆನಾಡಿಗೆ ಮಳೆಗಾಲದಲ್ಲಿ ಭೇಟಿ ನೀಡಿದರೆ ದಾರಿ ಉದ್ದಕ್ಕೂ ಜುಳು ಜುಳು ಹರಿಯುವ ಮನಮೋಹಕ ಜಲಪಾತಗಳು ಕಣ್ಮನ ಸೆಳೆಯುತ್ತವೆ.**

ಕರ್ನಾಟಕ ದರ್ಶನ

ಉತ್ತರ ಕನ್ನಡ ಜಿಲ್ಲೆ ಕರ್ನಾಟಕದ ಕಾಶ್ಮೀರ ಎಂದೇ ಪ್ರಸಿದ್ಧಿ. ಕರ್ನಾಟಕದಲ್ಲಿಯೇ ಅತೀ ಹೆಚ್ಚು ಜಲಪಾತಗಳು ಇರುವ ಈ ಕಾರವಾರ ಜಿಲ್ಲೆಯನ್ನು "ಜಲಪಾತಗಳ ಜಿಲ್ಲೆ" ಎಂದು ಕರೆಯುವುದು ಉಂಟು. ಮಳೆಗಾಲದ ದಿನಗಳಲ್ಲಿ ಈ ಜಿಲ್ಲೆಯ ಹಳ್ಳಿಗಳತ್ತ ಪಾದಯಾತ್ರೆ ಹೊರಟರಂತೂ ಎಲ್ಲೆಲ್ಲೂ ಜಲಪಾತಗಳದ್ದೇ ದರ್ಶನ. ವನಸಿರಿಯ ವೈಭವವನ್ನು ಹೊಂದಿರುವ ಈ ಜಿಲ್ಲೆಗೆ ಜಲಪಾತಗಳು ಕಿರೀಟವಿದ್ದಂತೆ.

ಮಲೆನಾಡಿನ ಮಳೆಗಾಲದ ವೈಭವ, ನಿಸರ್ಗ ಸೌಂದರ್ಯದ ಸೊಬಗನ್ನು ಸವಿಯಲು ಇದು ಸಕಾಲ. ಮುಂಗಾರಿನ ಹನಿಗಳು ಧರೆಗಿಳಿಯುವ ಈ ಸಂಭ್ರಮದ ವಾತಾವರಣದಲ್ಲಿ ಜಲಧಾರೆಗಳ ಸೊಬಗು ಮೈಸೆಟೆದು ನಿಂತಿರುತ್ತದೆ. ನಿತ್ಯ ಹರಿದ್ವರ್ಣದ ಕಾನನದಲ್ಲಿ ಮುಗಿಲೆತ್ತರದ ಬೆಟ್ಟಗಳಿಂದ, ಪ್ರಪಾತಕ್ಕೆ ಧುಮುಕುವ ಜಲಧಾರೆಯ ಸೊಬಗನ್ನು ಕಣ್ಣಾರೆ ನೋಡುವುದೇ ಪರಮಾನಂದ. ಭೋರ್ಗರೆವ ಜಲಪಾತದಿಂದ ಸಿಂಚನವಾಗುವ ನೀರಿನಲ್ಲಿ ಕಾಲ ಕಳೆಯುತ್ತಿದ್ದರೆ ಹೊತ್ತು ಹೋಗುವುದೇ ತಿಳಿಯುವುದಿಲ್ಲ.

ರಭಸದಿಂದ ಸುರಿಯುವ ಮಳೆಯಲ್ಲಿ ಎತ್ತರದಿಂದ ಧುಮುಕುವ ಜಲಧಾರೆಗಳು ಪ್ರವಾಸಿಗರಿಗೋಸ್ಕರವೇ ಹರಿಯುತ್ತಿವೆಯೇನೋ ಎನ್ನುವಷ್ಟರ ಮಟ್ಟಿಗೆ ಎಲ್ಲಾ ಜಲಪಾತಗಳಿಗೆ ಜೀವಕಳೆ ಬಂದಿದೆ. ಹಾಲ್ನೊರೆಯಾಗಿ ಧುಮ್ಮಿಕ್ಕುವ ಜಲಪಾತಗಳನ್ನು ನೋಡುತ್ತಿದ್ದರೆ





Downloaded From:www.kpscvaani.com



ಮನಸ್ಸಿಗೂ ಉಲ್ಲಾಸ. ಪ್ರಕೃತಿಯ ಮಧ್ಯೆ ಧುಮುಕುವ ಈ ಜಲಧಾರೆಯ ದೃಶ್ಯ ವೈಭವವನ್ನು ಆಸ್ವಾದಿಸಲು ನಮ್ಮೆರಡು ಕಣ್ಣುಗಳೇ ಸಾಲದೇನೋ ಅನ್ನಿಸುತ್ತದೆ. ಜತೆಗೆ ಜಲಧಾರೆಯ ಲೀಲೆಗಳನ್ನು ನೋಡುತ್ತಿದ್ದರೇ.... ಹಚ್ಚ ಹಸುರಿನ ಸೌಂದರ್ಯ... ಹಕ್ಕಿಗಳ ಚಿಲಿಪಿಲಿಯ ನಿನಾದ ಕೇಳುತ್ತಿದ್ದರೆ ಅಲ್ಲಿನ ಬಂಡೆಗಳ ಮೇಲೆಯೇ ಮೈಯೊಡ್ಡಿ ಮಲಗಿಬಿಡೋಣ ಎನ್ನುವಷ್ಟು ಸಂಭ್ರಮ, ಖುಷಿ ಇಮ್ಮಡಿಸುತ್ತದೆ.

ಜಿಲ್ಲೆಯಲ್ಲಿರುವ ಅನೇಕ ಜಲಪಾತಗಳು ಬೇಸಿಗೆಯಲ್ಲಿ ಸ್ವಲ್ಪ ಸೊರಗಿದರೂ, ಮಳೆಗಾಲದಲ್ಲಿ ತುಂಬಿ ಹರಿದು, ತಮ್ಮ ನೈಜ ಸೊಬಗಿನಿಂದ ಶೋಭಿಸುತ್ತವೆ. ಪ್ರಕೃತಿಯ ಆರಾಧಕರು, ಚಾರಣ ಪ್ರಿಯರು, ಈ ಮಳೆಗಾಲದಲ್ಲಿಯೇ ಜಲಧಾರೆಗಳ ವೈಭವವನ್ನು ಕಣ್ಣಾರೆ ಕಂಡು ಆನಂದ ಪಡುತ್ತಾರೆ. ಬದುಕಿಗೊಂದು ಹೊಸ ಚೈತನ್ಯ, ಪ್ರಕೃತಿಯೊಂದಿಗೆ ಬೆರೆತು ಜೀವನದ ಕಷ್ಟ-ನೋವುಗಳನ್ನು ಮರೆತು, ಸಂತೋಷವನ್ನು ತುಂಬಿಕೊಳ್ಳಲು ವಿವಿಧ ಊರುಗಳಿಂದ ಪ್ರವಾಸಿಗರು ಈ ಜಿಲ್ಲೆಯಲ್ಲಿರುವ ಜಲಪಾತಗಳನ್ನು ನೋಡಲು ಧಾವಿಸಿ ಬರುತ್ತಾರೆ. ಎತ್ತರದಿಂದ ಪ್ರಪಾತಕ್ಕೆ ಧುಮುಕುವ ಜಲಧಾರೆ, ಹಾಲಿನ ನೊರೆಯಂತೆ ಬೀಳುವ ಜಲಪಾತದ ನೈಜ ನೃತ್ಯವನ್ನು ಕಂಡು ಪುಳಕಿತಗೊಳ್ಳುತ್ತಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹಲವಾರು ಜಲಪಾತಗಳಿವೆ. ಕೆಲವು ಜಲಪಾತಗಳು ಪ್ರಸಿದ್ಧಿ ಪಡೆದು ಪ್ರವಾಸಿಗರ ಮನದಲ್ಲಿ ಅಚ್ಚೊತ್ತಿ ಕುಳಿತಿವೆ. ಇನ್ನು ಕೆಲ ಜಲಪಾತಗಳು ದಟ್ಟಾರಣ್ಯದಲ್ಲಿಯೇ ಇದ್ದು ಸಾಹಸಿ ಚಾರಣ ಪ್ರಿಯರಿಗಷ್ಟೇ ತನ್ನ ಸೌಂದರ್ಯದ ದರ್ಶನ ನೀಡಿದೆ. ಜಿಲ್ಲೆಯಲ್ಲಿರುವ ಕೆಲವು ಜಲಪಾತದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

**ಸಾತೊಡ್ಡಿಯ ಜಲಧಾರೆ**

ವರುಷವಿಡೀ ತನ್ನ ವೈಯಾರದಿಂದ ಧುಮುಕುವ ಈ ಜಲಪಾತವು ಯಲ್ಲಾಪುರ ತಾಲೂಕಿನಲ್ಲಿದೆ. ಇದು ಯಲ್ಲಾಪುರ ನಗರದಿಂದ ಸುಮಾರು 25 ಕಿ. ಮೀ. ದೂರದಲ್ಲಿದೆ. ಆನಗೋಡ-ಬೀಸಗೋಡ-ದೇಹಳ್ಳಿ ಮಾರ್ಗದಲ್ಲಿ ತೆರಳಬೇಕು. ಸಾತೊಡ್ಡಿಯ ಈ ಜಲಧಾರೆಯು 'ಕರ್ನಾಟಕದ ನಯಾಗಾರ' ಎಂದೇ ಪ್ರಸಿದ್ಧ. ಈ ಜಲಪಾತವೂ ಕಾಳಿಯ ಉಪ ನದಿಯಾದ ಸೂರಬ್ಬಿ ಹಳ್ಳದಿಂದ ನಿರ್ಮಿತವಾಗಿದೆ. ಸುಮಾರು 50 ಅಡಿ ಎತ್ತರದಿಂದ ವಿಶಾಲವಾಗಿ ಧುಮ್ಮಿಕ್ಕುವ ಈ ಮನಮೋಹಕ ಜಲಪಾತದ ಝೇಂಕಾರಕ್ಕೆ ಮರುಳಾಗದ ಪ್ರವಾಸಿಗರೇ ಇಲ್ಲವೆಂದರೂ ತಪ್ಪಾಗಲಿಕ್ಕಿಲ್ಲ.

**ಮತ್ತಿಘಟ್ಟಾ ಜಲಪಾತ**

ಶಿರಸಿ ತಾಲೂಕಿನಲ್ಲಿರುವ ಪ್ರಸಿದ್ಧ ಜಲಪಾತಗಳಲ್ಲಿ ಇದು ಒಂದು. ಷಹರದಿಂದ ಹೆಗಡೆಕಟ್ಟಾ-ಯಾಣ ಮಾರ್ಗದಲ್ಲಿ ಸುಮಾರು 42 ಕಿ. ಮೀ. ಕ್ರಮಿಸಿದರೆ ಮತ್ತಿಘಟ್ಟಾ ಜಲಪಾತದ ದರ್ಶನ ಪಡೆಯಬಹುದು. ಹಸೇಹಳ್ಳದಿಂದ ಉದ್ಭವವಾಗಿರುವ ಈ ಜಲಧಾರೆಯೂ ಸುಮಾರು 600 ಅಡಿ ಎತ್ತರದಿಂದ ಹಾಲ್ನೊರೆಯಾಗಿ ಭೋರ್ಗರೆಯುತ್ತದೆ. ಈ ಜಲಪಾತದ ಇರುವಿಕೆಯೇ ತಿಳಿದಿಲ್ಲದಿರುವ ಕಾರಣ ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆ ವಿರಳ. ಗುಡ್ಡದ ಮೇಲಿಂದ ಹರಿದು ಬರುವ ಈ ಜಲಧಾರೆಯ ದೃಶ್ಯ ವೈಭವ ಅತ್ಯದ್ಭುತ.

**ಉಂಚಳ್ಳಿ ಫಾಲ್ಸ್**

ಜಿಲ್ಲೆಯ ಸಿದ್ದಾಪುರ ತಾಲೂಕಿನಲ್ಲಿರುವ ಆಕರ್ಷಣೀಯ ಜಲಪಾತದಲ್ಲಿ ಉಂಚಳ್ಳಿ ಫಾಲ್ಸ್ ಸಹಾ ಒಂದು. ಸಿದ್ದಾಪುರದಿಂದಲೂ ಈ ಜಲಪಾತಕ್ಕೆ ಹೋಗಲು ಮಾರ್ಗವಿದೆ. ಶಿರಸಿಯಿಂದ ಅಮ್ಮೇನಳ್ಳಿ-ಹೆಗ್ಗರಣಿ ಮೂಲಕವೂ ಹೋಗಬಹುದು. ಈ ಜಲಪಾತವು ಶಿರಸಿಯಿಂದ ಸುಮಾರು 38 ಕಿ. ಮೀ. ದೂರದಲ್ಲಿದೆ. ಈ ಫಾಲ್ಸ್ ಅಘನಾಶಿನಿ ನದಿ ಸೃಷ್ಟಿಸಿರುವ ರಮಣೀಯ ತಾಣ. 1845 ರಲ್ಲಿ ಬ್ರಿಟಿಷ್ ಸರ್ಕಾರದಲ್ಲಿ ಜಿಲ್ಲಾ ಕಲೆಕ್ಟರ್ ಆಗಿದ್ದ ಜೆ. ಡಿ. ಲುಷಿಂಗ್ಟನ್ ಪತ್ತೆ ಹಚ್ಚಿದ ತಾಣ ಎಂಬ ಹೆಗ್ಗಳಿಕೆ ಈ ಜಲಪಾತಕ್ಕೆ ಸಂದಾಯವಾಗಿದೆ. ಸುಮಾರು 116 ಮೀ. ಎತ್ತರದಿಂದ ಧುಮುಕುವ ಈ ಜಲಪಾತದ ಭೋರ್ಗರೆತವು ಕಿವಿ ಕೆಪ್ಪಾಗಿಸುತ್ತದೆ. ಆದ್ದರಿಂದಲೇ ಇದಕ್ಕೆ "ಕೆಪ್ಪ ಜೋಗ" ಎಂತಲೂ ಕರೆಯುವ ರೂಢಿಯಿದೆ.

**ವಜ್ರಧಾರೆ ಜಲಪಾತ**

ಈ ವಿಶಿಷ್ಟ ಜಲಪಾತವು ಜಿಲ್ಲಾ ಕೇಂದ್ರವಾದ ಕಾರವಾರದಿಂದ ಸುಮಾರು 36 ಕಿ. ಮೀ. ದೂರದಲ್ಲಿದೆ. ಕಾರವಾರ-ಸದಾಶಿವಗಡ-ಕದ್ರಾ-ಅಣಶಿ ಮಾರ್ಗದ ರಾಜ್ಯ ಹೆದ್ದಾರಿಯಲ್ಲಿ ಬಂದು ವಜ್ರಧಾರೆಯ ಜಲಪಾತವನ್ನು ವೀಕ್ಷಿಸಬಹುದು. ಸುಮಾರು 55 ಮೀ. ಎತ್ತರದಿಂದ ಹಂತ ಹಂತವಾಗಿ ಧುಮ್ಮಿಕ್ಕುವ ಈ ಜಲಧಾರೆಯನ್ನು ಅತೀ ಸಮೀಪಕ್ಕೂ ಹೋಗಿ ಸೌಂದರ್ಯವನ್ನು ಸವಿಯಬಹುದು. ಈ ಜಲಪಾತಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಕದ್ರಾ ಆಣೆಕಟ್ಟು, ಅಣಶಿ ಘಟ್ಟದ ಸೊಬಗನ್ನು ಕಣ್ತುಂಬಿಕೊಳ್ಳಲು ಸಾಧ್ಯವಿದೆ.

**ಅಪ್ಸರಕೊಂಡ**

ಕಡಲ ಕಿನಾರೆಯಲ್ಲಿ ಮೈದಳೆದಿರುವ ಹೊನ್ನಾವರವು ಉತ್ತರ ಕನ್ನಡ ಜಿಲ್ಲೆಯ ನಿಸರ್ಗ ಸಿರಿಯಿಂದ ತುಂಬಿ ತುಳುಕುವ ಪ್ರೇಕ್ಷಣೀಯ ತಾಣ. ಈ ತಾಲೂಕಿನಲ್ಲಿರುವ





Downloaded From:www.kpscvaani.com



ಅಪ್ಸರಕೊಂಡ ಫಾಲ್ಸ್ ವಿಶಿಷ್ಟವಾಗಿದೆ. ಗುಹೆಯಂತಿರುವ ಈ ಜಲಪಾತ ಸ್ಥಳವು ಆಕರ್ಷಣೀಯವಾಗಿದೆ. ಅಪ್ಸರೆಯ ಜಡೆಯಂತೆ ಬೀಳುವ ಈ ಜಲಧಾರೆಯಲ್ಲಿ ಮಿಂದೆದ್ದರಂತೂ ಇನ್ನಷ್ಟು ಮೋಜನ್ನು ಅನುಭವಿಸಬಹುದು. ಸುಮಾರು 20 ಅಡಿ ಎತ್ತರದಿಂದ ಧುಮುಕುವ ಅಪ್ಸರಕೊಂಡ ಜಲಪಾತವು ಹೊನ್ನಾವರ ನಗರದಿಂದ ಕೇವಲ 6 ಕಿ. ಮೀ. ದೂರದಲ್ಲಿದೆ.

**ಶಿವಗಂಗಾ ಫಾಲ್ಸ್**

ಶಿರಸಿ ತಾಲೂಕಿನಲ್ಲಿರುವ ಈ ಜಲಪಾತವು ಶಾಲ್ಮಲಾ ನದಿಯ ಕೊಡುಗೆ. ದಟ್ಟಾರಣ್ಯದ ಮಧ್ಯೆ ಭೋರ್ಗರೆಯುವ ಶಿವಗಂಗಾ ಜಲಪಾತವು ತಾಲೂಕು ಕೇಂದ್ರದಿಂದ ಸುಮಾರು 40 ಕಿ. ಮೀ. ದೂರದಲ್ಲಿದೆ. ಈ ಜಲಧಾರೆಯನ್ನು ವೀಕ್ಷಿಸಲು ಪ್ರವಾಸಿಗರು ಶಿರಸಿ–ಹುಲೇಕಲ್–ವಾನಳ್ಳಿ–ಜಡ್ಡಿಗದ್ದೆ ಮೂಲಕ ತೆರಳಬೇಕು. ಸುಮಾರು 74 ಮೀಟರ್ ಎತ್ತರದಿಂದ ಧುಮುಕುವ ಈ ಜಲಪಾತದ ಸೌಂದರ್ಯ, ನಿಸರ್ಗದ ಸೊಬಗು ಆಕರ್ಷಣೀಯ.

**ವಿಭೂತಿ ಜಲಪಾತ**

ಜಿಲ್ಲೆಯ ಸುಂದರ, ವಿಭಿನ್ನ ಉಲ್ಲಾಸ ನೀಡುವ ವಿಭೂತಿ ಜಲಪಾತವು ಶಿರಸಿ ತಾಲೂಕಿನಲ್ಲಿದೆ. ಪೇಟೆಯಿಂದ ಸುಮಾರು 25 ಕಿ. ಮೀ. ದೂರದಲ್ಲಿರುವ ಈ ಜಲಧಾರೆಯು ಯಾಣದ ಸಮೀಪದಲ್ಲಿದೆ. ಬೆರಗಿನ ಗಗನ ಚುಂಬಿ ಬಂಡೆಗಳ ತಾಣವಾದ ಈ ಪ್ರೇಕ್ಷಣೀಯ ಸ್ಥಳದಲ್ಲಿ ಚಾರಣ ಮಾಡಿದರಂತೂ ವಿಶಿಷ್ಟ ಅನುಭವ ಸಿಗುತ್ತದೆ.

**ವಾಟೇಹಳ್ಳ ಫಾಲ್ಸ್**

ಇದು ಸಿದ್ದಾಪುರ ತಾಲೂಕಿನ ವನಸಿರಿಯ ಮಧ್ಯೆ ಅವಿತುಕೊಂಡಿರುವ ಜಲಪಾತ. ಇದಕ್ಕೆ ನಿಲ್ಕುಂದ ಜಲಪಾತ ಎಂದು ಕರೆಯುವ ರೂಢಿಯೂ ಚಾಲ್ತಿಯಲ್ಲಿದೆ. ಸಿದ್ದಾಪುರದಿಂದಲೂ ಹೋಗಬಹುದು. ಶಿರಸಿಯಿಂದ ಹೆಗ್ಗರಣಿ ಮಾರ್ಗದಿಂದಲೂ ತೆರಳಬಹುದು. ಶಿರಸಿಯಿಂದ ಸುಮಾರು 22 ಕಿ. ಮೀ. ದೂರದಲ್ಲಿರುವ ವಾಟೇಹಳ್ಳ ಜಲಪಾತವು ಅಘನಾಶಿನಿ ನದಿಯ ಕೊಡುಗೆ. ಸುಮಾರು 100 ಅಡಿ ಎತ್ತರದಿಂದ ಧುಮುಕುವ ಈ ಜಲಧಾರೆಯ ವೈಭವ, ಸೊಬಗನ್ನು ಸವಿಯಲು ಪ್ರವಾಸಿಗರು ಪ್ರಯಾಸ ಪಡಬೇಕು.

**ಮಾಗೋಡು ಜಲಪಾತ**

ಯಲ್ಲಾಪುರ ತಾಲೂಕಿನಲ್ಲಿರುವ ಈ ಜಲಪಾತವು ಬೇಡ್ತಿ ನದಿಯ ಸೃಷ್ಟಿ. ಎರಡು ಹಂತದಲ್ಲಿ ಧುಮುಕುವ ಈ ಜಲಧಾರೆಯು ಯಲ್ಲಾಪುರದಿಂದ ಸುಮಾರು 18 ಕಿ. ಮೀ. ದೂರದಲ್ಲಿದೆ. ಮಾಗೋಡು ಜಲಪಾತಕ್ಕೆ ಹೋಗುವ ದಾರಿಯಲ್ಲಿಯೇ 60 ಎಕರೆ ವಿಸ್ತಾರದಲ್ಲಿರುವ ಕವಡಿಕೆರೆ, ಜೇನುಕಲ್ಲು ಗುಡ್ಡದ ಸನ್‌ಸೆಟ್ ಪಾಯಿಂಟ್‌ಗಳು ಮನಮೋಹಕ, ಜತೆಗೆ ಘಂಟೆ ಗಣಪ ದೇವಾಲಯಕ್ಕೆ ಭೇಟಿ ನೀಡಬಹುದು.

**ಮುರೇಗಾರ ಜಲಪಾತ**

ಶಿರಸಿ ತಾಲೂಕಿನಲ್ಲಿರುವ ಈ ಜಲಪಾತವು ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುವ ತಾಣ. ತಾಲೂಕು ಕೇಂದ್ರದಿಂದ (ಕೆಂಗ್ರೆ ಘೂಲ್–ಸಾಲ್ಕಣಿ ಮಾರ್ಗದಲ್ಲಿ) ಸುಮಾರು 24 ಕಿ.ಮೀ. ದೂರದಲ್ಲಿದೆ. ಇಳಿಜಾರಿನ ಬಂಡೆಗಳ ಮೇಲೆ ಹಾಲ್ನೊರೆಯಾಗಿ ಭೋರ್ಗರೆಯುವ ಈ ಜಲಪಾತದ ಸೊಬಗು ರೋಮಾಂಚನ ನೀಡಬಲ್ಲದು.

**ಶಿರ್ಲೆ ಜಲಪಾತ**

ಅಂಕೋಲಾ–ಹುಬ್ಬಳ್ಳಿ ಹೆದ್ದಾರಿಯ ಕಾನನದ ಮಧ್ಯೆ ಅವಿತುಕೊಂಡಿರುವ ಜಲಪಾತವಿದು. ಯಲ್ಲಾಪುರ ತಾಲೂಕಿನ ಇಡಗುಂದಿಯಿಂದ ಸುಮಾರು 4 ಕಿ. ಮೀ. ದೂರದಲ್ಲಿ ಈ ಜಲಪಾತವಿದೆ. ಇದು ಅಲ್ಲಿನ ಸಂಪೆಕೊಡ್ಲು ಎಂಬ ಹಳ್ಳದಿಂದ ನಿರ್ಮಿತವಾಗಿದೆ. ಈ ಮೋಹಕ ಜಲಧಾರೆಯು ಸುಮಾರು 70 ಅಡಿ ಎತ್ತರದಿಂದ ಎರಡು ಹಂತದಲ್ಲಿ ಧುಮುಕುತ್ತದೆ.

**ದೇವಕಾರು ಫಾಲ್ಸ್**

ಇದು ಜಿಲ್ಲೆಯ ಕೇಂದ್ರ ಸ್ಥಾನ ಕಾರವಾರದಿಂದ ಸುಮಾರು 60 ಕಿ. ಮೀ. ದೂರದಲ್ಲಿದೆ. ಕಾರವಾರ–ಕದ್ರಾ–ಕೊಡಸಳ್ಳಿ ಮಾರ್ಗದ ಮೂಲಕ ತೆರಳಬೇಕು. ಸುಮಾರು 60 ಮೀ. ಎತ್ತರದಿಂದ ಧುಮ್ಮಿಕ್ಕುವ ಈ ದೇವಕಾರ ಜಲಪಾತದ ಸೊಬಗನ್ನು ಆಸ್ವಾದಿಸಲು ತುಸು ಪ್ರಯಾಸ ಪಡಬೇಕು. ಇಲ್ಲಿಗೆ ತೆರಳುವ ಚಾರಣ ಸಾಹಸಮಯ. ಬೃಹತ್ ಬಂಡೆಗಳನ್ನು ದಾಟಿಯೇ ಫಾಲ್ಸ್‌ನ ತಳಭಾಗಕ್ಕೆ ಸಾಗಬೇಕು. ಕದ್ರಾ ಡ್ಯಾಂ ಸನಿಹದಲ್ಲಿರುವ ಈ ಜಲಪಾತದ ದರ್ಶನ ಸುಲಭವಲ್ಲ. ಈ ಜಲಧಾರೆಯನ್ನು ವೀಕ್ಷಿಸಲು ಬಂದವರಿಗೆ ದೋಣಿ ವಿಹಾರದ ಜೊತೆಗೆ ಕಾಡಿನಲ್ಲಿ ಚಾರಣಕ್ಕೂ ಅವಕಾಶವಿದೆ.

**ಕುಳಿ ಮಾಗೋಡು**

ಯಲ್ಲಾಪುರ ತಾಲೂಕಿನಲ್ಲಿರುವ ಮಾಗೋಡು ಜಲಪಾತದ ಸಮೀಪ ಇರುವ ಇನ್ನೊಂದು ಜಲಪಾತವಿದು. ಈ ಜಲಧಾರೆಯನ್ನು ಪ್ರತ್ಯಕ್ಷವಾಗಿ ನೋಡಲು ಪ್ರವಾಸಿಗರು ಐದಾರು ಕಿ. ಮೀ. ಕಾಡು ದಾರಿಯಲ್ಲಿ ಪಾದಯಾತ್ರೆ ಮಾಡುವುದು ಅನಿವಾರ್ಯ. ಸ್ಥಳೀಯರ ಸಹಕಾರವಿಲ್ಲದೇ ಈ ಜಲಪಾತದ ವೀಕ್ಷಣೆ ಅಸಾಧ್ಯ. ಸ್ವಲ್ಪ ಕಷ್ಟಪಟ್ಟು ತೆರಳಿದರೇ ಕುಳಿ ಮಾಗೋಡಿನ ಜಲಧಾರೆಯ ಆಕರ್ಷಣೆಯನ್ನು ಕಣ್ತುಂಬಿಕೊಳ್ಳಬಹುದು.

**ಬುರುಡೆ ಫಾಲ್ಸ್**

ಈ ಜಲಪಾತವು ಜಿಲ್ಲೆಯ ಸಿದ್ದಾಪುರದಿಂದ ಸುಮಾರು 20 ಕಿ. ಮೀ., ಶಿರಸಿಯಿಂದ ಸುಮಾರು 55 ಕಿ.ಮೀ. ದೂರದಲ್ಲಿದೆ. ಇದಕ್ಕೆ 'ಇಲ್ಲಿಮನೆ ಜಲಪಾತ' ಎಂದು ಕರೆಯುವ ರೂಢಿಯೂ ಇದೆ. ಕ್ಯಾದಗಿ ಸನಿಹದಲ್ಲಿರುವ ಈ ಜಲಪಾತವು ಐದು ಹಂತದಲ್ಲಿ ಧರೆಗೆ ಅಪ್ಪಳಿಸುತ್ತದೆ. ಇಲ್ಲಿಮನೆ ಊರಿನಿಂದ ಕೇವಲ 5 ಕಿ.ಮೀ. ದೂರದಲ್ಲಿರುವ ಬುರುಡೆ ಫಾಲ್ಸ್ ಸಾಹಸಿ ಚಾರಣಿಗರಿಗೆ ಮುದ ನೀಡಬಲ್ಲದು.


**ಲಾಲ್ಗುಳಿ ಜಲಪಾತ**

ಯಲ್ಲಾಪುರ ತಾಲೂಕಿನಲ್ಲಿರುವ ಸುಂದರ ಜಲಪಾತಗಳಲ್ಲಿ ಇದು ಒಂದು. ತಾಲೂಕು ಕೇಂದ್ರದಿಂದ ಸುಮಾರು 13 ಕಿ.ಮೀ. (ಹಳಿಯಾಳ ಮಾರ್ಗದಲ್ಲಿ) ದೂರದಲ್ಲಿ ಈ ಜಲಪಾತವಿದೆ. ಸುಮಾರು 250 ಅಡಿ ಎತ್ತರದಿಂದ ಧರೆಗೆ ಅಪ್ಪಳಿಸುವ ಈ ಜಲಧಾರೆಯ ವೈಭವವನ್ನು ಕಣ್ತುಂಬಿಕೊಳ್ಳಲು ನಮ್ಮ ಕಣ್ಣೆರಡು ಸಾಲದೇನೋ ಅನ್ನಿಸುತ್ತದೆ.



Downloaded From:www.kpscvaani.com

# ಪದಬಂಧ-32



ವಿದ್ಯಾ ಎ. ಹಾಲಭಾವಿ

## ಎಡದಿಂದ ಬಲಕ್ಕೆ

1. ವಿಶ್ವ ಆರ್ಥಿಕ ಶೃಂಗ ಸಭೆ ಜರುಗಿದ ದೇಶ (3)
2. ಕಲಾವಿದನ ಮನೆ ಬಾಗಿಲಿದು! (2)
5. ಜೋಗ್‌ಜಲಪಾತವು ಈ ನದಿಯಿಂದ ರೂಪುಗೊಂಡಿದೆ (4)
7. ಯಾವುದೇ ಪ್ರಯೋಜನವಿಲ್ಲದು (4)
9. ಕಮರಿಯೊಳಗಿರುವ ಆನೆ (2)
10. ಹೊಂಬಳ ಗ್ರಾಮದಲ್ಲಿ ಜನಿಸಿದ ಚೆಂಬೆಳಕಿನ ಕವಿ (7)
12. ಸಂದುಗೊಂದುಗಳಲ್ಲಿ ಕಾಣುತ್ತಿರುವ ಅಂಟು! (2)
15. ಕೈಗಾರಿಕಾ ನಗರ ಎಂದು ಖ್ಯಾತಿ ಪಡೆದಿರುವ ಈ ಊರಿಗೆ ಮೊದಲು ಬೆಂಕಿಪುರ ಎಂಬ ಹೆಸರಿತ್ತು (4)
16. ವಾಯು,ಸಮುದ್ರ,ರೈಲು ಹಾಗೂ ರಸ್ತೆಈ ನಾಲ್ಕೂ ಸಾರಿಗೆವಿಧಾನಗಳನ್ನು ಹೊಂದಿರುವ ರಾಜ್ಯದ ಏಕೈಕ ನಗರ (4)
17. ಕಡಲ ಹತ್ತಿರ ಪಡೆದ ಸಾಲ! (2)
18. ರಾಜ್ಯದಲ್ಲಿ ಉಪ್ಪಿನ ಸತ್ಯಾಗ್ರಹ ಜರುಗಿದ ಸ್ಥಳ (3)

## ಮೇಲಿಂದ ಕೆಳಕ್ಕೆ

1. ಈತ ತತ್ವಜ್ಞಾನಿ (4)
3. ಹತ್ತು ವರ್ಷಗಳ ಅವಧಿ (3)
4. ಬೀಜ ಬಿತ್ತಲು ಮಾಡಿರುವ ಮಡಿ (2)
6. ಶ್ರೇಷ್ಠನಾದ ಕವಿ (4)
8. ನೋಡುಗ ಇಲ್ಲಿ ತಿರುಗಿದ್ದಾನಲ್ಲಾ! (3)
10. ರಾಜ ಕಾಲಾಳುಗಳಿಂದ ಆಡುವ ಒಳಾಂಗಣ ಆಟ (4)
11. ಆನೆಯ ಮರಿ (3)
13. ಮಾಡಿದ ಕೆಲಸಕ್ಕೆ ದೊರೆತ ಲಾಭ (4)
14. ಕರುವಿಗೆ ತೋರಿದ ದಯೆ (3)
16. ಹಿಮ ಇಲ್ಲಿ ಕಾಣುತ್ತಿದೆ (2)

## ಉತ್ತರ

**ಎಡದಿಂದ ಬಲಕ್ಕೆ**

1. ದಾವೋಸ್ 2. ಕದ 5. ಶರಾವತಿ 7. ನಿರರ್ಥಕ 9. ಕರಿ 10. ಚನ್ನವೀರಕಣವಿ 12. ಗೋಂದು 15. ಭದ್ರಾವತಿ 16. ಮಂಗಳೂರು 17. ಕಡ 18. ಅಂಕೋಲ

**ಮೇಲಿಂದ ಕೆಳಕ್ಕೆ**

1. ದಾರ್ಶನಿಕ 3. ದಶಕ 4. ಪಾತಿ 6. ವರಕವಿ 8. ಕಕ್ಷವೀ 10. ಚದುರಂಗ 11. ಕಳಭ 13. ಪ್ರತಿಫಲ 14. ಮರುಕ 16. ಮಂಜು

**-: ಸೂಚನೆ :-**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಂಗಳೂರಿನ ವಿವಿಧ ಕಡೆಗಳಲ್ಲಿ ರಸ್ತೆಗೆ ಡಾಂಬರು ಹಾಕುತ್ತಿರುವ ಕಾಮಗಾರಿ ಸ್ಥಳಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂದರ್ಭ.



ರಾಜ್ಯದ ನೂತನ ಲೋಕಾಯುಕ್ತರಾಗಿ ಜೂನ್ 15 ರಂದು ರಾಜಭವನದಲ್ಲಿ ಭೀಮನಗೌಡ ಸಂಗನಗೌಡ ಪಾಟೀಲ್ ಅವರು ಪ್ರಮಾಣವಚನ ಸ್ವೀಕರಿಸಿದ ಸಂದರ್ಭ. ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉಪಸ್ಥಿತರಿದ್ದಾರೆ.

Downloaded From:www.kpscvaani.com

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Downloaded From:www.kpscvaani.com